# ಪ್ರಸಾದ

ಮಾಸಿಕ

ಸಂಪುಟ 39 ಸಂಚಿಕೆ 4 ಏಪ್ರಿಲ್ 2024



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಚಾಂದ್ರಮಾನ ಯುಗಾದಿಯಂದು ರೋಬೋ ಆನೆ 'ಶಿವ' ಸಮರ್ಪಣೆ ಕಾರ್ಯಕ್ರಮ ಜರುಗಿತು. ಆನೆಯನ್ನು ಕೊಡುಗೆಯಾಗಿ ನೀಡಿದ ಚಲನಚಿತ್ರ ಕಲಾವಿದರುಗಳಾದ ಶ್ರೀಮತಿ ಐಂದ್ರಿತಾ ರೇ ಹಾಗೂ ಶ್ರೀ ದಿಗಂತ್ ದಂಪತಿಗಳು, ಪೇಟಾ ಸಂಸ್ಥೆಯ ಶ್ರೀ ಸಚಿನ್ ಬಂಗೇರ, ಮಠಾಧಿಪತಿಗಳು ಹಾಗೂ ಇತರರು ಉಪಸ್ಥಿತರಿದ್ದರು (9 ಏಪ್ರಿಲ್ 2024)

# ಪ್ರಸಾದ

ಸಂಪುಟ 39 : ಸಂಚಿಕೆ 4 ಏಪ್ರಿಲ್ 2024

ಡಾ. ಎಂ.ಎನ್. ನಂದೀಶ್ ಹಂಚೆ
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004




**ಸಂಸ್ಥಾಪಕರು**

**ಶ್ರೀಮನ್ಮಹಾರಾಜ ರಾಜಗುರುತಿಲಕ**

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕಲ್ಯಾಣಿ ಗ್ರೂಪ್‌ನ ಮುಖ್ಯಸ್ಥರು ಹಾಗೂ ಖ್ಯಾತ ಉದ್ಯಮಿಗಳಾದ ಶ್ರೀ ಬಾಬಾ ಕಲ್ಯಾಣಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು. ಬೆರಿಯೆಟರ್ ಹೆಚ್‌ವಿಎಚ್ ಇಂಡಿಯಾ ಸಂಸ್ಥೆಯ ಅಧ್ಯಕ್ಷರಾದ ಡಾ. ಎನ್. ಮುತ್ತುಕುಮಾರ್‌ರವರು ಚಿತ್ರದಲ್ಲಿದ್ದಾರೆ (4 ಏಪ್ರಿಲ್ 2024)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 9

ವಿಷಯರಸ ತ್ಯಾಗ 12
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಬೆಳಕಿನ ದಾರಿ ತೋರಿದವರು 16
ಡಾ. ಎಂ.ಎನ್. ನಂದೀಶ್ ಹಂಚೆ

ಶಬರಶಂಕರ ವಿಲಾಸ–ಟೀಕು 19
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ವಚನ ಸಾಹಿತ್ಯದಲ್ಲಿ ನೈತಿಕತೆ – ಒಂದು ಅವಲೋಕನ 27
ಎಚ್.ಎಸ್. ಸಿದ್ಧಗಂಗಪ್ಪ

ವಚನ ಸಾಹಿತ್ಯದಲ್ಲಿ ಶಾಂತಿ ಮತ್ತು ಸಾಮರಸ್ಯ 35
ಹುಸ್ಕೂರು ಅಂಬಿಕಾ ಶಿವನಂಜಪ್ಪ

ಶಿವನಾಟದ ಸವಿಯುಂಡ ಕುಂಬಾರ ಗುಂಡಯ್ಯ 40
ಧರ್ಮಣ್ಣ ಕುಂಬಾರ

ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ 46
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ಸತ್ಯಂ ಶಿವಂ ಸುಂದರಂ 52
ಎಂ.ಎಸ್. ಚಂದ್ರಶೇಖರ ಅಯ್ಯರ್

ಗ್ರಂಥ ಪರಾಮರ್ಶೆ 56

ವಾರ್ತಾ ವಿಹಾರ 57
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

ಕಾಯವೆಂಬ ವನಿತೆಗೆ ಆತ್ಮನೆಂಬ ಪುರುಷನು ನೋಡಾ.
ಈ ದೇಹದ ಆತ್ಮನ ಸಂಪರ್ಕದಿಂದ ಹುಟ್ಟಿದ
ಸಕಲ ಕರಣೇಂದ್ರಿಯಂಗಳೆ ಮಕ್ಕಳು ನೋಡಾ.
ಇದೇ ಸಂಸಾರವೆಂಬುದನರಿಯದೆ
ಬಹಿರಂಗದಲ್ಲಿ, ನಾನು ಹೊನ್ನು ಹೆಣ್ಣು ಮಣ್ಣು ಬಿಟ್ಟು
ವಿರಕ್ತನಾದೆನೆಂಬ ಅಜ್ಞಾನಿಯ ಪರಿಯ ನೋಡಾ.
ಇದು ವಿರಕ್ತಿಯೇ? ಅಲ್ಲ.
ದೇಹೇಂದ್ರಿಯ ಮನಃಪ್ರಾಣಾದಿಗಳ
ಮಹದಲ್ಲಿ ಒಡಗೂಡಿದಾತನೇ ಪರಮ ವಿರಕ್ತನು.
ಆತಂಗೆ ನಮೋ ನಮೋಯೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ

**– ತೋಂಟದ ಸಿದ್ಧಲಿಂಗ ಶಿವಯೋಗಿಗಳು**

# ಗುರುವಾಣಿ

ಆನಂದಂ ಬ್ರಹ್ಮ ವಿದ್ವಾನ್ ನ ಬಿಭೇತಿ ಕದಾಚನ ।

ಬ್ರಹ್ಮಾನಂದವನ್ನರಿತವನು ಎಲ್ಲ ಬಗೆಯ ಭಯಭೀತಿಗಳನ್ನು ಮೀರಿರುತ್ತಾನೆ. ಆನಂದ, ಪರಮಾನಂದ, ಆತ್ಮಾನಂದ, ಬ್ರಹ್ಮಾನಂದ – ಹೀಗೆ ಆನಂದದ ಬೇರೆಬೇರೆ ಮಜಲುಗಳುಂಟು; ಅವುಗಳ ನಡುವೆ ಅಂತರವೂ ಉಂಟು.

ಬಯಸಿದ ವಸ್ತು ದೊರೆತಾಗ ಲಭಿಸುವ ಸುಖ ಒಂದು ಬಗೆಯದಾದರೆ, ಭೌತಿಕ ವಸ್ತುವಿಗಿಂತಲೂ ಅತೀತವಾದ ಒಂದು ಬಗೆಯ ಆನಂದವಿರುತ್ತದೆ. ವಾಸ್ತವವಾಗಿ ಈ ಜಗತ್ತು ಆನಂದದಿಂದಲೇ ತುಂಬಿರುತ್ತದೆ. ಅದು ಎಲ್ಲ ಚರಾಚರ ವಸ್ತುಗಳಲ್ಲೂ ಅಂತರ್ನಿಹಿತವಾಗಿದೆ. ಆದರೆ ಅದನ್ನು ನೋಡುವ, ಅರಿಯುವ ಬಗೆ ಸರ್ವರದ್ದಾಗಬೇಕು. ಆದುದರಿಂದಲೇ ಕುವೆಂಪು ಅವರು "ಆನಂದಮಯ ಈ ಜಗಹೃದಯ ಏತಕೆ ಭಯ ಮಾಣೋ ಸೂರ್ಯೋದಯ ಚಂದ್ರೋದಯ ದೇವರದಯ ಕಾಣೋ..... ರವಿವದನವೆ ಶಿವಸದನವೊ ಬರಿ ಕಣ್ಣದು ಮಣ್ಣೋ. ಶಿವನಿಲ್ಲದೆ ಸೌಂದರ್ಯವೇ ಶವಮುಖವ ಕಣ್ಣೋ" ಎಂದಿದ್ದಾರೆ.

ಈ ಇಡೀ ಕವಿತೆ ಮೇಲೆ ಉಲ್ಲೇಖಿಸಿದ ಉಪನಿಷತ್ತಿನ ಸಾರವನ್ನೇ ಯಥಾವತ್ತಾಗಿ ವಿವರಿಸುತ್ತದೆ. ಅನುಭಾವಿ ಕವಿ ಈ ಜಗದ ಹೃದಯದಲ್ಲಿ ಅಡಗಿರುವ ಆನಂದವನ್ನು ಕಂಡಿದ್ದಾರೆ. ಆ ಆನಂದವನ್ನು ಅರಿಯುವ ಸಾಧನವನ್ನೂ ಅರಿತಿದ್ದಾರೆ. ಶ್ರೀಸಾಮಾನ್ಯನೂ ಕೂಡ ಅದನ್ನು ಅರಿಯುವಂತಾಗಬೇಕು ಎಂಬುದು ಅವರ ಹಂಬಲ. ಆ ಕಾರಣದಿಂದಲೇ ಕವಿ 'ಕಾಣೋ' ಎಂಬ ಪದವನ್ನು ಬಳಸಿದ್ದಾರೆ. ನೋಡುವ ಮತ್ತು ಕಾಣುವ ಬಗೆ ಕೂಡ ಬೇರೆಬೇರೆಯೇ. ಇಂಗ್ಲಿಷ್‌ನಲ್ಲಿ Look, See , Watch ಎಂಬ ಮೂರು ವಿಭಿನ್ನ ಪದಗಳಿವೆ. ಮೇಲ್ನೋಟದ ಅರ್ಥ ಒಂದೇ ಆದರೂ ಅವುಗಳ ಅರ್ಥಚ್ಛಾಯೆಗಳು ಮಾತ್ರ ಬೇರೆ ಬೇರೆ. Look ಎನ್ನುವುದು ನೋಡು, See ಎನ್ನುವುದು ಕಾಣು! Watch ಎನ್ನುವುದು ವೀಕ್ಷಿಸು ಎಂಬ ಅನುವಾದ ಅನ್ವರ್ಥಕವಾದದ್ದು. ನೋಡುವ ಕ್ರಿಯೆ ಹೊರಗಣ್ಣಿಗೆ ಸಂಬಂಧಿಸಿದ್ದಾದರೆ, ಕಾಣುವ ಕ್ರಿಯೆ ಒಳಗಣ್ಣಿಗೆ ಸಂಬಂಧಿಸಿದ್ದು.

ಈ ಜಗತ್ತಿನ ಆನಂದವನ್ನು, ಅದಕ್ಕೆ ಕಾರಣವಾದ ಭಗವಂತನನ್ನು, ಕಾಣಲು ಬರಿಯ ಕಣ್ಣಿಗೆ ಸಾಧ್ಯವಿಲ್ಲ. ಏಕೆಂದರೆ ಅದು ಬರಿಯ ಮಣ್ಣಿನ ಕಣ್ಣು. ಆದುದರಿಂದ ಅದು

ದಿವ್ಯೋದ್ದೇಶದ ಪರಮಪದದ ಸಾಧನವಾಗಲಾರದು. ಬರಿಗಣ್ಣಿಗೆ ಕಾಣದ ಭಗವಂತನನ್ನು ಕಾಣುವ ಒಳಗಣ್ಣು ಒಂದಿದೆ. ಪ್ರತಿಯೊಂದು ಜೀವಿಯೂ ಈ ಜಗತ್ತಿನ ಮಹಾಸೌಂದರ್ಯದ ಆನಂದವನ್ನು ಕಾಣಲು, ಹೊಂದಲು ಪ್ರಯತ್ನಿಸಬೇಕು. ಪ್ರಾಮಾಣಿಕವಾದ ಪ್ರಯತ್ನವಿಲ್ಲದೆ ಯಾವುದೇ ಫಲ ಸಿದ್ಧಿಸದೆಂಬುದನ್ನು ಎಲ್ಲರೂ ಬಲ್ಲರು. ನಮ್ಮ ಬಾಹ್ಯೇಂದ್ರಿಯಗಳ ಪರಿಮಿತಿಯೇ ಅದು. ಆದರೆ ಭಗವಂತನ ಅನಂತ ಭೂಮಸ್ವರೂಪ ಅಸದೃಶವಾದುದು.

ಡಾ. ಆರ್.ಆರ್. ದಿವಾಕರ್‌ರವರು "ಕನ್ನಡ ಉಪನಿಷತ್" ಗ್ರಂಥದಲ್ಲಿ ಆನಂದದ ಸ್ವರೂಪವನ್ನು ಒಂದು ಸೂಕ್ತ ಉದಾಹರಣೆಯೊಂದಿಗೆ ವಿವರಿಸಿದ್ದಾರೆ. ಚೆನ್ನಾಗಿ ಹಸಿವಾದಾಗ ಪಂಚಪಕ್ವಾನ್ನದ ಊಟ ದೊರೆತರೆ ಮನುಷ್ಯನಿಗೆ ಅತಿಶಯವಾದ ಆನಂದವಾಗುವುದು. ಆನಂದಕ್ಕೂ ಆತ್ಮಾನಂದಕ್ಕೂ ಎಷ್ಟು ಅಂತರವಿರುವದೆಂಬುದನ್ನು ಗಮನಿಸಬೇಕಾಗಿದೆ. ಭೋಜನದ ಆನಂದದ ಅರಿವಾಗಬೇಕಾದರೆ 'ಭೋಜನ' ಎಂಬ ಅನ್ಯವಸ್ತುವಿನ ಅವಲಂಬನೆ ಅನಿವಾರ್ಯ; ಅರ್ಥಾತ್, ಆನಂದವೂ ಇಲ್ಲಿ ಪರಾವಲಂಬಿಯಾಯಿತು ಎನ್ನುತ್ತಾರೆ. ಆದರೆ ನಿಜವಾದ ಆನಂದವೆಂಬುದು ಎಂದಿಗೂ ಪರಾವಲಂಬಿಯಲ್ಲ. ಅದು ಕೇವಲ ತನ್ನಲ್ಲಿ ತಾನೇ ಸ್ಫುರಿಸುವ ಒಂದು ಸ್ವಾವಲಂಬಿ ಭಾವವಿಶೇಷ. ಅದಕ್ಕೆ ಇತರ ವಸ್ತುಗಳ ಸಂಬಂಧದ ಗೊಡವೆಯೇ ಇಲ್ಲ. ಅದು ಕ್ಷಣಿಕವೂ ಅಲ್ಲ, ಅಲ್ಪವೂ ಅಲ್ಲ. ಅದು ಸನಾತನವಾದದ್ದು.

ಇನ್ನು ಬ್ರಹ್ಮಾನಂದವೆಂಬುದು ಈ ಮಾನುಷ ಆನಂದಕ್ಕಿಂತ ಎಷ್ಟೋ ಲಕ್ಷ ಪಟ್ಟು ದೊಡ್ಡದು ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ. ಬ್ರಹ್ಮಾನಂದ ಪಡೆಯದಿದ್ದರೂ ಪರವಾಗಿಲ್ಲ. ಅದು ವಿಶಿಷ್ಟ ಸಾಧಕರಿಗೆ ಮೀಸಲಾದುದೆಂದು ತಿಳಿದರೂ, ಅಂಥ ಪರಮಾನಂದವನ್ನು ಹೊಂದಲು ಎಲ್ಲರಿಗೂ ಅವಕಾಶವಿದೆ. ಅದನ್ನು ಹೊಂದುವತ್ತ ಆಲೋಚಿಸಬೇಕು, ಎಲ್ಲ ಲೌಕಿಕ ಜಂಜಡಗಳಿಂದ ದೂರವಾಗಬೇಕು. ಇದಕ್ಕೊಂದು ನಿದರ್ಶನವನ್ನು ಗಮನಿಸಬಹುದು. ಒಂದು ಊರಿನಲ್ಲಿ ಒಬ್ಬ ಬಡವನಿದ್ದ. ಆತ ನಿತ್ಯವೂ ಕಾಡಿಗೆ ಹೋಗಿ ಒಣಗಿದ ಕಟ್ಟಿಗೆ ಕಡಿದು ತಂದು ಮಾರಿ ಅದರಿಂದ ಜೀವನ ನಡೆಸುತ್ತಿದ್ದ. ಮಳೆಗಾಲ ಆರಂಭವಾಯಿತು. ಒಂದೇ ಸಮನೆ ದಿನಗಟ್ಟಲೆ ಮಳೆ ಸುರಿಯಲಾರಂಭಿಸಿತು. ಎಂದಿನ ಅಭ್ಯಾಸದಂತೆ ಪ್ರತಿನಿತ್ಯವೂ ಕಾಡಿಗೆ ತೆರಳುತ್ತಿದ್ದ. ಆದರೆ ಒಣಗಿದ ಕಟ್ಟಿಗೆ ಇಲ್ಲದೆ ಬರಿಗೈಲಿ ಹಿಂದಿರುಗುತ್ತಿದ್ದ. ಸಂಸಾರ ಸಾಗಿಸುವುದು ದುಸ್ತರವಾಯಿತು. ಆದರೆ ಬೇರೆ ದಾರಿ ಇರಲಿಲ್ಲ. ಹಾಗೆ ಒಂದು ದಿನ ಕಾಡಿಗೆ ಹೋದ ಆ ಬಡವ ಇಂದಾದರೂ ಕಾಡಿನಲ್ಲಿ ಒಣಗಿದ ಕಟ್ಟಿಗೆ ಸಿಗಬಹುದೆ ಎಂದು ಹುಡುಕತೊಡಗಿದ. ಆಗ ಒಂದು ಮರದ ಕೆಳಗೆ ಧ್ಯಾನಮಗ್ನನಾಗಿದ್ದ ತಪಸ್ವಿಯೊಬ್ಬರನ್ನು ಕಾಣುತ್ತಾನೆ. ಅವನ ಬಳಿಗೆ ತೆರಳಿ ನಮಿಸಿದನು. ಆ ತಪಸ್ವಿ ಬಡವನ ಎಲ್ಲ ಕಥೆಯನ್ನೂ ತಾನೇ ವಿವರಿಸಿ "ನೀನು ನಿತ್ಯದ ಬದುಕಿನ

ನಿರ್ವಹಣೆಗಾಗಿ ಹೆಣಗುತ್ತಿದ್ದೀಯೆ. ಅಲ್ಲವೆ?" ಎಂದನು. ತಪಸ್ವಿಯ ಮಾತು ಕೇಳಿ ಮೂಕವಿಸ್ಮಿತನಾದ ಬಡವನು ಅವರಿಗೆ ಮತ್ತೆ ನಮಸ್ಕರಿಸಿ ತನಗೆ ದಾರಿ ತೋರಬೇಕೆಂದು ಕೇಳಿಕೊಂಡನು.

ತಪಸ್ವಿಯು ಬಡವನಿಗೆ "ನೋಡು. ಈ ದಾರಿಯಲ್ಲಿ ಸುಮಾರು ಹತ್ತು ಮೈಲಿ ಹೋಗು. ಅಲ್ಲೊಂದು ಬೆಟ್ಟವಿದೆ. ಅದರ ಗುಹೆಯಲ್ಲಿ ಬೆಳ್ಳಿಯ ಸಂಪತ್ತಿದೆ. ನಿನಗೆಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಸುಖವಾಗಿರು" ಎಂದನು. ತಪಸ್ವಿ ಹೇಳಿದ ದಾರಿಯಲ್ಲಿಯೇ ನಡೆದ ಆತ ಗುಹೆಯಲ್ಲಿದ್ದ ಬೆಳ್ಳಿಯ ರಾಶಿಯನ್ನು ಕಂಡು ಬೆರಗಾಗಿ ಇಡೀ ಸಂಪತ್ತನ್ನು ತುಂಬಿಕೊಂಡು ತಪಸ್ವಿಯ ಮುಂದೆ ಬಂದು ಕೃತಜ್ಞತೆ ಅರ್ಪಿಸಿದನು. ಅದನ್ನು ನೋಡಿದ ತಪಸ್ವಿ "ನಿನ್ನ ಜೀವನಕ್ಕೆ ಇಷ್ಟು ಸಾಕಲ್ಲವೆ?" ಎಂದನು. ಬಡವನು "ಒಂದು ಇಪ್ಪತ್ತೈದು ವರ್ಷಗಳ ಕಾಲ ಇದರಿಂದ ನೆಮ್ಮದಿಯಾಗಿರಬಹುದು" ಎಂದನು. "ಹಾಗಾದರೆ ನೀನು ಆ ಬೆಳ್ಳಿಯ ಬೆಟ್ಟದಿಂದ ಆಚೆಗೆ ಮತ್ತೆ ಹತ್ತು ಮೈಲಿ ಹೋಗು. ಅಲ್ಲೊಂದು ಬಂಗಾರದ ನಿಧಿ ಇದೆ. ಅದನ್ನು ಪಡೆದುಕೊ ಎಂದನು. ಮತ್ತೆ ಹೋದ ಬಡವ ಬಂಗಾರವನ್ನು ತೆಗೆದುಕೊಂಡು ಬಂದು ತಪಸ್ವಿಗೆ ಕೃತಜ್ಞತೆ ಹೇಳಿದನು. "ಇದು ನಿನ್ನ ಜೀವನಕ್ಕೆ ಸಾಕಲ್ಲವೇ?" ಎಂದ ಪುನಃ ತಪಸ್ವಿ "ಇದು ನನಗೆ ಐವತ್ತು ವರ್ಷದ ಜೀವನಕ್ಕೆ ಸಾಕು" ಎಂದ ಬಡವ. "ಹಾಗಾದರೆ ಬಂಗಾರದ ಬೆಟ್ಟದಿಂದ ಹತ್ತು ಮೈಲಿ ಆಚೆಗೆ ಇನ್ನೂ ಮುಂದೆ ಹೋಗು. ಅಲ್ಲಿ ವಜ್ರದ ಪರ್ವತವಿದೆ" ಎಂದ. ವಜ್ರದ ಪರ್ವತ ತಲುಪಿ ಅಲ್ಲಿಂದ ಬೇಕಾದಷ್ಟು ವಜ್ರವನ್ನು ತೆಗೆದುಕೊಂಡು ತಪಸ್ವಿಯ ಬಳಿ ಬಂದ ಬಡವ ಪುನಃ ಕೃತಜ್ಞತೆ ಅರ್ಪಿಸಿದನು. ಆಗ ಬಡವನು "ಇದು ನನ್ನ ಮತ್ತು ನನ್ನ ಮಕ್ಕಳ ಜೀವನಕ್ಕೆ ಸಾಕು. ನಾನು ನೀವು ತಿಳಿಸಿದ ಈ ದಾರಿಯನ್ನು ನನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೂ ತಿಳಿಸುತ್ತೇನೆ. ಧನ್ಯವಾದಗಳು" ಎಂದು ಹೇಳಿ ಹೊರಟನು.

ಸ್ವಲ್ಪ ದೂರ ಹೋದ ಮೇಲೆ ಬಡವನಿಗೆ ಒಂದು ಅನುಮಾನ ಬಂದಿತು ಹಿಂದಿರುಗಿ ಬಂದು ಅವನು ತಪಸ್ವಿಗೆ ಹೇಳಿದನು: "ನಿಮಗೆ ಬೆಳ್ಳಿ, ಚಿನ್ನ ಹಾಗೂ ವಜ್ರದ ಬೆಟ್ಟಗಳೇ ಗೊತ್ತಿದ್ದರೂ. ಅವುಗಳನ್ನು ಪಡೆಯಲು ಯತ್ನಿಸದೆ ಈ ಮರದ ಕೆಳಗೆ ಕುಳಿತು ಏನು ಮಾಡುತ್ತಿದ್ದೀರಿ?" ಎಂದನು. ತಪಸ್ವಿ ಹೇಳಿದನು: "ಧ್ಯಾನ ಮಾಡುತ್ತಿದ್ದೇನೆ". ಈ ಜಗತ್ತು ಎಷ್ಟು ಸುಂದರವಾಗಿದೆ. ಇದರ ಮೂಲ ಯಾವುದು ಎಂದೆಲ್ಲ ವಿಚಾರ ಮಾಡುತ್ತಿದ್ದೇನೆ" ಎಂದನು. ಬಡವ "ಈ ಜಗತ್ತು ಸುಂದರವೇ? ನನಗೆ ಹಾಗೆ ಕಾಣುತ್ತಿಲ್ಲವಲ್ಲ?" ಎಂದನು. ತಪಸ್ವಿ ಹೇಳಿದನು: "ಸರಿಯಾಗಿ ನೋಡು. ಈ ಮರ ಎಷ್ಟು ಹಸಿರಾಗಿದೆ. ಪಕ್ಷಿಗಳು ಹೇಗೆ ಸಂತೋಷದಿಂದಿವೆ. ನದಿ ಹೇಗೆ ಜುಳುಜುಳನೆ ಹರಿಯುತ್ತಿದೆ. ಪರ್ವತಗಳು ಹೇಗೆ ಸ್ಥಿರವಾಗಿದೆ. ಸರಿಯಾಗಿ ಇವೆಲ್ಲವನ್ನೂ ಗಮನಿಸು" ಎಂದನು. "ಈ ಸೌಂದರ್ಯದ ಮೂಲವನ್ನು ತಿಳಿದರೆ ಏನು ಸಿಗುತ್ತದೆ" ಎಂದು

ಬಡವ ಕುತೂಹಲದಿಂದ ತಪಸ್ವಿಯನ್ನು ಕೇಳಿದನು. ಕ್ಷಣ ಹೊತ್ತು ಸುಮ್ಮನಿದ್ದು, ಬಳಿಕ ಮುಗುಳ್ನಕ್ಕ ತಪಸ್ವಿ ಅದರಿಂದ ಆನಂದ ಸಿಕ್ಕುತ್ತದೆ. ನೋಡು. ನಿನಗೆ ಈಗ ದುಃಖ ಉಂಟಾಗಿರುವುದು ಏಕೆ?. ಜೀವನನಿರ್ವಹಣೆಗಾಗಿ. ಜೀವನನಿರ್ವಹಣೆಯಷ್ಟೇ ಮುಖ್ಯವಲ್ಲ. "ಜೀವ"ದ ನಿರ್ವಹಣೆಯೂ ಅಷ್ಟೇ ಮುಖ್ಯ. ಜೀವನದ ಮೂಲಕ ದೇವನನ್ನು ಕಾಣುವ ಬಗೆ ಇದು. ದೇವನನ್ನು ಕಂಡಾತನಿಗೆ ಹಸಿವು, ನೀರಡಿಕೆ ಯಾವುದೂ ಇರುವುದಿಲ್ಲ. ಬಡತನ, ಸಿರಿತನದ ಹಂಗಿರುವುದಿಲ್ಲ. ಆದುದರಿಂದ ನನ್ನ ಪಾಲಿಗೆ ಕಲ್ಲೂ ಒಂದೇ, ಸಂಪತ್ತೂ ಒಂದೇ" ಎಂದನು. "ಹಾಗಾದರೆ ಅಂಥ ಆನಂದ ನನಗೂ ಬೇಕಲ್ಲ" ಎಂದ ಬಡವ. ತಪಸ್ವಿ : "ನೀನು ಲೋಕದಲ್ಲಿರುವ ಸೌಂದರ್ಯವನ್ನು ಧ್ಯಾನಿಸುತ್ತ ಹೋಗು ನಿನಗೆ ಆನಂದದ ಅನುಭವವಾಗುತ್ತದೆ" ಎಂದನು. ಲೋಕದ ಅನಂತ ಸುಖವನ್ನು ಅರಸುವ ನಿಜವಾದ ರೀತಿ ಇದು.

– ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

# ಸಂಪಾದಕೀಯ

ವರುಷವೈದರೊಳರೆನಿಸಿ ದಶ
ವರುಷ ದಾಸತ್ವವನು ಭಾವಿಸಿ
ವರುಷ ಹದಿನಾರರಲಿ ಪುತ್ರನ ಮಿತ್ರನೆಂದೆನಿಸಿ ।
ಪರಿವಿಡಿಗಳಲಿ ನಡೆಸಿ ಮದ ಮ
ತ್ಸರವ ಮಾಣಿಸಿ ನೆರೆದ ಮಕ್ಕಳ
ನರಮೃಗವ ಮಾಡುವರೆ ಭೂಮೀಪಾಲ ಕೇಳೆಂದ ॥

(ಉದ್ಯೋಗ ಪರ್ವ – ಸಂ.3, ಪ.40)

ಕುಮಾರವ್ಯಾಸ ಭಾರತದಲ್ಲಿ ಧೃತರಾಷ್ಟ್ರನಿಗೆ ನ್ಯಾಯ, ನೀತಿ, ಧರ್ಮಗಳ ವಿಷಯವನ್ನು ತಿಳಿಸುವ ಸಂದರ್ಭದಲ್ಲಿ ಮೇಲಿನ ಮಾತನ್ನು ವಿದುರನು ಹೇಳುತ್ತಾನೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ವಿದುರ ಧೃತರಾಷ್ಟ್ರನಿಗೆ ರಾತ್ರಿಯಿಡೀ ನೀತಿಯನ್ನು ಬೋಧಿಸಿ "ನೂಕಿದರಿವರು ಯಾಮಿನಿಯ". ಅಂದರೆ, ಕತ್ತಲೆಯನ್ನು ಕಳೆಯಲಿಲ್ಲ ನೂಕಿದರು ಎನ್ನುತ್ತಾನೆ, ಕುಮಾರವ್ಯಾಸ. ಆದರೆ ಕತ್ತಲು ಕಳೆದು ಸೂರ್ಯೋದಯವಾದರೂ ಧೃತರಾಷ್ಟ್ರನ ಅಂಧಕಾರ ಕರಗದೆ ಹೋದದ್ದು ನಿಜವಾದ ದುರಂತ.

ಮೇಲಿನ ವಿದುರನೀತಿಯಲ್ಲಿ "ಮಕ್ಕಳನ್ನು ಮೊದಲ ಐದು ವರ್ಷ ಅತಿಶಯವಾಗಿ ಪ್ರೀತಿಸಬೇಕು. ಆಮೇಲೆ ಹತ್ತು ವರ್ಷ ಸೇವಕನಂತೆ ಭಾವಿಸಿ ಬುದ್ಧಿ ಹೇಳಿ ತಿದ್ದಬೇಕು. ಹದಿನಾರು ವರ್ಷದ ನಂತರ ಸ್ನೇಹಿತರಂತೆ ಕಾಣುತ್ತಾ, ವ್ಯವಸ್ಥಿತವಾಗಿ ಬೆಳೆಸಬೇಕು. ಹಾಗೂ ಅವರಲ್ಲಿ ಮದ, ಮತ್ಸರ, ಕಾಮ, ಕ್ರೋಧ ಮುಂತಾದ ಅರಿಷಡ್ವರ್ಗಗಳು ಬೆಳೆಯದಂತೆ ನೋಡಿಕೊಳ್ಳಬೇಕು. ಹಾಗೆ ನೋಡಿಕೊಳ್ಳದಿದ್ದರೆ ಮಕ್ಕಳು ಮೃಗಗಳಂತೆ ಬೆಳೆಯುತ್ತಾರೆ" ಎಂದು ಹೇಳುವ ಮೂಲಕ ಕೌರವರೆಲ್ಲರೂ ನರಮೃಗಗಳಾಗಿರುವ ಸಂಗತಿಯನ್ನು ಸ್ವತಃ ಅವರ ತಂದೆಯಾದ ಧೃತರಾಷ್ಟ್ರನಿಗೆ ವಿದುರನು ತಿಳಿಸುತ್ತಾನೆ.

ಧೃತರಾಷ್ಟ್ರನೇ ಸ್ವತಃ ಲೋಭ, ಮೋಹಗಳಿಗೆ ಒಳಗಾಗಿ, ನೀತಿಯ ಆಳವನ್ನು ಅರಿಯದೇ ಹೋದ. ಅರಿತೂ ಮರೆಯುವಷ್ಟು ಪಾಪಕಾರ್ಯ ಮತ್ತೊಂದಿಲ್ಲ. ಅರಿವಿಲ್ಲದೆ ಎಸಗುವ ತಪ್ಪಿನಿಂದ ಉಂಟಾಗುವ ಅಪಾಯ ಕಡಿಮೆಯಾದುದು;

ಆದರೆ ಅರಿವಿದ್ದೂ ಮೋಹಪಾಶಕ್ಕೆ ಸಿಲುಕಿ ತಪ್ಪಿಗೆ ತಾನೇ ದಾರಿ ಮಾಡಿಕೊಡುವುದು ಹೆಚ್ಚು ಅಪಾಯಕಾರಿ. ಧೃತರಾಷ್ಟ್ರನ ಇಂತಹ ಅಪಾಯಕಾರಿ ನೀತಿಯಿಂದ ಇಡೀ ಕೌರವ ವಂಶವೇ ನಾಶವಾಯಿತು. ತಮ್ಮ ಕಣ್ಣ ಮುಂದೆಯೇ ತಮ್ಮ ಮಕ್ಕಳು, ಮೊಮ್ಮಕ್ಕಳು ನಾಶವಾಗುವುದನ್ನು ನೋಡುವುದು ಯಾವ ಹಿರಿಯರಿಗೇ ಆದರೂ ಅತ್ಯಂತ ಯಾತನಾಮಯವಾದ ಸಂಗತಿ. ಇಂಥ ಸಂದರ್ಭ ಸ್ವತಃ ಅವರೇ ತಂದುಕೊಂಡದ್ದು ಎಂಬುದು ಗಮನಾರ್ಹ.

ಇಂದಿನ ಸಂದರ್ಭದಲ್ಲಿ ಮಕ್ಕಳ ಲಾಲನೆ, ಪಾಲನೆ, ಪೋಷಣೆ ಒಂದು ದೊಡ್ಡ ಸವಾಲಾಗಿದೆ. ಮಕ್ಕಳ ಬೆಳವಣಿಗೆಯಲ್ಲಿ ತಂದೆತಾಯಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸದೆ ಇರುವುದು ಇದಕ್ಕೆ ಕಾರಣವೇ ಅಥವಾ ಆಧುನಿಕ ಸೌಲಭ್ಯ, ಸಲಕರಣೆಗಳು ಮಕ್ಕಳನ್ನು ಹೀಗೆ ಮಾಡಿಬಿಟ್ಟಿವೆಯೇ ಎಂಬ ಜಿಜ್ಞಾಸೆ ಮುನ್ನೆಲೆಗೆ ಬಂದಿದೆ. ಇಂದಿನ ತಂದೆ ತಾಯಿಗಳಿಗೆ ದುಡಿಯುವುದೊಂದೇ ಆದ್ಯತೆಯಾಗಿ ಬಿಟ್ಟಿದೆ. ಪರಿಣಾಮವಾಗಿ ಮಕ್ಕಳ ಪಾಲನೆ ಒಂದು ಅನುಷಂಗಿಕ ವಿಷಯವಾಗಿದೆ. ಮಕ್ಕಳನ್ನು ಸತ್ಪ್ರಜೆಗಳಾಗಿ ರೂಪಿಸಬೇಕಾದದ್ದು ತಮ್ಮ ಆದ್ಯ ಕರ್ತವ್ಯವೆಂಬುದನ್ನು ಅವರು ಮರೆತಿರುವುದು ನಿಜಕ್ಕೂ ದುರ್ದೈವ.

ಒಬ್ಬ ರಾಮ, ಒಬ್ಬ ಮಹಾವೀರ, ಒಬ್ಬ ಶಿವಾಜಿ ಬೆಳೆದು ಪ್ರಸಿದ್ಧರಾದದ್ದು ಅವರ ತಂದೆತಾಯಿಯರ ಪಾಲನೆ, ಪೋಷಣೆಯಿಂದ ಎಂಬುದನ್ನು ಯಾರೂ ಮರೆಯಬಾರದು. ವಾಸ್ತವ ಸಂಗತಿಯೆಂದರೆ ದಾಂಪತ್ಯಕ್ಕೆ ಕಾಲಿಟ್ಟ ದಂಪತಿಗಳಿಗೆ ತಮ್ಮ ವೈಯಕ್ತಿಕ ಹಿತಾಸಕ್ತಿಗಳು, ಭೋಗಲಾಲಸೆಗಳೇ ಮುಖ್ಯವಾಗಿ ಕುಟುಂಬ, ಸಮಾಜ, ದೇಶ ನಗಣ್ಯವಾಗಿದೆ. ಮಕ್ಕಳನ್ನು ಪಡೆಯುವುದು ಕೂಡ ಇಂದಿನ ದಂಪತಿಗಳ ಪಾಲಿಗೆ ಎರಡನೆಯ ಆದ್ಯತೆಯಾಗಿರುವುದನ್ನು ಹಲವೆಡೆ ಕಾಣಬಹುದು. ದುಡಿಮೆ ಎಂಬುದು ವ್ಯಕ್ತಿಗೆ ಶೋಭೆ ತರುತ್ತದೆ, ನಿಜ ಆದರೆ ದುಡಿಮೆಯಷ್ಟೇ ಜೀವನವಲ್ಲ. ಬದುಕುವುದಕ್ಕಾಗಿ ದುಡಿಮೆಯೇ ಹೊರತು, ಅದೇ ಸರ್ವಸ್ವವಲ್ಲ. ದುಡಿಯುವ ತಂದೆತಾಯಿಗಳ ಪಾಲಿಗೆ ಇಂದು ಮಕ್ಕಳನ್ನು ಸರಿಯಾಗಿ ಬೆಳೆಸುವುದು ಒಂದು ಕಷ್ಟದ ಹೊರೆಯೆನಿಸಿದೆ. ಹಾಗೆ ನೋಡಿದರೆ, ದುಡಿಮೆಯ ಫಲ ದುಡಿದವರಿಗೆ ಮಾತ್ರ ದೊರೆಯುವುದಿಲ್ಲ. ಅವರ ಮಕ್ಕಳು ಬೆಳೆಯುವ ಪರಿಸರಕ್ಕೆ ಮತ್ತು ಸಮಾಜಕ್ಕೂ ದೊರೆಯುತ್ತದೆ. ಆದರೆ ಈಗ ಮಕ್ಕಳ ಪೋಷಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅನೇಕರ ಪಾಲಿಗೆ ಮಕ್ಕಳೂ ಒಂದು ಸರಕಾಗಿ ಹೋಗಿದೆ. 'ಮಕ್ಕಳನ್ನು ಪಡೆಯುವುದು ಸದ್ಗತಿಗೆ ದಾರಿ' ಎಂಬ ಅರ್ಥದಲ್ಲಿ ಯಾರೂ ಈ ಸಂಗತಿಗಳನ್ನು ಇಂದು ತೆಗೆದುಕೊಳ್ಳಬೇಕಾಗಿಲ್ಲ. ಆದರೆ 'ಮಕ್ಕಳನ್ನು ಸರಿಯಾಗಿ ಬೆಳೆಸುವುದು ಸದ್ಗತಿಗೆ ದಾರಿ' ಎಂಬುದನ್ನಾದರೂ ಅರಿಯಬೇಕು.

ಆಧುನಿಕ ಕಾಲದಲ್ಲಿ ಮಕ್ಕಳು ಹೇಗೆ ಸರಕಾಗಿ ಬೆಳೆಯುತ್ತಿದ್ದಾರೆ ಎಂಬುದರ ಸ್ಪಷ್ಟ ನಿದರ್ಶನ ನಮ್ಮ ಮುಂದೆ ಢಾಳಾಗಿ ಕಾಣಿಸುತ್ತಿದೆ. ಸರಕಿಗೆ ಯಾವುದೇ ಭಾವನೆಗಳಿರುವುದಿಲ್ಲ. ಭಾವನೆಗಳಿರದ ಬದುಕಿನಲ್ಲಿ ಏನನ್ನು ತಾನೆ ನಿರೀಕ್ಷಿಸಬಹುದು! ಅದೊಂದು ಮರುಭೂಮಿಯಲ್ಲಿ ನೀರಿನ ಒರತೆಯನ್ನು ಹರಿಸುವ ವ್ಯರ್ಥ ಸಾಹಸ ಅಷ್ಟೆ. ನಮ್ಮಲ್ಲಿ ಎಷ್ಟು ಹೃದಯದಾರಿದ್ರ್ಯವಿದೆ ಎಂದರೆ ತಾಯಿ, ತಂಗಿ, ಹೆಂಡತಿ ಎಂಬ ಪದಗಳ ಅರ್ಥವೇ ಮರೆತುಹೋಗಿ ಎಲ್ಲರಲ್ಲೂ ಕಾಮಾಸಕ್ತಿಯನ್ನೇ ಕಾಣುವಂತಾಗಿದೆ. ಕೇವಲ ಕಾಮಾಸಕ್ತಿ ಮಾತ್ರವಲ್ಲ, ಮೃಗೀಯ ವರ್ತನೆಯನ್ನು ಪ್ರದರ್ಶಿಸಲು ಜನ ಪ್ರಾರಂಭಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಎಫ್.ಆರ್. ಲೀವಿಸ್ ಹೇಳುವಂತೆ "ಆಧುನಿಕ ಕಾಲದಲ್ಲಿ ಯಂತ್ರ ನಾಗರಿಕತೆ ಉಂಟುಮಾಡಿರುವ ಪ್ರಭಾವ ಅತ್ಯಂತ ಅಪಾಯಕಾರಿ. ಅದು ತಂದೆ ತನ್ನ ಮಗನೊಡನೆ, ತಾಯಿ ತನ್ನ ಮಗಳೊಡನೆ ಹೇಗೆ ವರ್ತಿಸಬೇಕು ಎಂಬುದನ್ನು ಮರೆಮಾಡಿದೆ. ಎಲ್ಲರೂ ತಮ್ಮನ್ನು ಕೇವಲ ಒಂದು ಯಂತ್ರವೆಂದು ಭಾವಿಸತೊಡಗಿದ್ದಾರೆ" ಎಂಬ ಮಾತು ನಿಜವೇನೋ ಎನ್ನಿಸುತ್ತದೆ. ಈ ಯಂತ್ರನಾಗರಿಕತೆಗಿಂತ ಕೃಷಿಪ್ರಧಾನ ಜಗತ್ತೇ ಹೆಚ್ಚು ಶ್ರೇಷ್ಠವಾದದ್ದು ಎಂದೂ ಆತ ಹೇಳುತ್ತಾನೆ. ಯಂತ್ರನಾಗರಿಕತೆಯ ಫಲ ಇಂದು ನಮ್ಮ ನೈತಿಕ ಬದುಕಿನ ಅಧಃಪತನದಲ್ಲಿ ಪ್ರತಿಬಿಂಬಿತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆರ್ಷೇಯ ಮೌಲ್ಯಗಳು ಮಣ್ಣುಪಾಲಾಗದಂತೆ ನೋಡಿಕೊಳ್ಳಬೇಕಾದುದು ಎಲ್ಲರ ಸಾಮಾಜಿಕ ಜವಾಬ್ದಾರಿ ಆಗಿರುತ್ತದೆ.

**ಡಾ. ಎಂ.ಎಸ್. ನಂದೀಶ್ ಹಂಚೆ**

ಮಕ್ಕಳು ಮರಿಗಳು ಸತ್ತು ನಷ್ಟವಾಗಿ,
ಕಷ್ಟ ದುಃಖ ನೆಲೆಗೊಂಡಿತ್ತೆಂದು
ತನ್ನಿಷ್ಟಲಿಂಗಪೂಜೆಯನಗಲಿಸಿ,
ಬಿಟ್ಟಿಯ ಮಾಡಬಹುದೇನಯ್ಯಾ?
ಜಂಗಮವು ಬಂದು ತನ್ನ ವ್ರತ ನೇಮಕ್ಕೆ ಬೇಡಿದಡೆ
ನಿಮ್ಮ ಉಪದ್ರವೇನೆಂದು ಭಕ್ತಿಯ ಮಾಡಬಹುದೇನಯ್ಯಾ?
ಸಕಲದುಃಖಂಗಳು ತಮ್ಮಿಂದ ತಾವೇ ಬರಲರಿಯವು.
ಭಕ್ತಿಯನ್ನು ಮರೆದು, ಮರವೆಯಲ್ಲಿ ಬೆರೆದು,
ಭವಭವದಲ್ಲಿ ಬರುವುದು ಅದೇ ದುಃಖವು. ನಿಶ್ಚಯವೆಂದಾತ ನಮ್ಮ ಅಂಬಿಗರ ಚೌಡಯ್ಯ.

**– ಅಂಬಿಗರ ಚೌಡಯ್ಯ**

ಪ್ರವಚನಸಾರ

# ವಿಷಯರಸ ತ್ಯಾಗ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಯಾವ ವಸ್ತುವನ್ನು ನಾವು ಪ್ರೀತಿಸುತ್ತೇವೆಯೋ ಅದು ನಮ್ಮ ಕಣ್ಣಿಗೆ ಕಾಣುವಂತೆ ಸ್ಪಷ್ಟವಾಗಿರಬೇಕು. ಭೌತಿಕವಾಗಿ, ಬೌದ್ಧಿಕವಾಗಿ, ಭಾವನಾತ್ಮಕವಾಗಿ ಹೇಗಾದರೂ ಆ ವಸ್ತು ನಮಗೆ ಪ್ರತ್ಯಕ್ಷವಾಗಿರಬೇಕು, ಅನುಭವಕ್ಕೆ ಬಂದಿರಬೇಕು. ಆಗ ನಮ್ಮ ಪ್ರೀತಿಯು ಧಾರಾಕಾರವಾಗಿ ಹರಿಯುತ್ತದೆ. ಪರಮಾನಂದವನ್ನು ತರುತ್ತದೆ.

ಈ ಹೂವನ್ನು ನಾವೆಲ್ಲ ಪ್ರೀತಿಸುತ್ತೇವೆ. ಅದು ನಮ್ಮ ಪಂಚೇಂದ್ರಿಯಗಳಿಗೆ ಗೋಚರ; ಸಂಶಯಕ್ಕೆ ಎಡೆಯಿಲ್ಲದಷ್ಟು ಸ್ಪಷ್ಟ. ಹಾಗೆಯೇ ಪರಮಪ್ರೀತಿಗೆ, ಭಕ್ತಿಗೆ ಪಾತ್ರವಾದ ಸತ್ಯತತ್ತ್ವವು ನಮಗೆ ಸ್ಪಷ್ಟವಾಗಿರಬೇಕು. ಆ ಪರಮಸತ್ಯದ ಭಾವನಾತ್ಮಕ ವೈಚಾರಿಕ ಚಿತ್ರ ಎಷ್ಟು ಸ್ಪಷ್ಟವಾಗುತ್ತದೆಯೋ ಅಷ್ಟೂ ನಮ್ಮ ಭಕ್ತಿಯು ಘನವಾಗುತ್ತದೆ.

ಋಷಿ ಚಂದ್ರೋದಯವನ್ನು ಕಂಡ. ಎಂಥ ಬೆಳಕದು! ಹಾಲು-ಮೊಸರು, ಬೆಣ್ಣೆ-ಬೆಳ್ಳಿಯನ್ನೂ ಮೀರಿಸುವ ಶುಭ್ರತೆ, ಸ್ನಿಗ್ಧತೆ, ಮಧುರತೆ ಆ ಚಂದಿರನ ಬೆಳಕಿನಲ್ಲಿ! ಕತ್ತಲೆಗೂ ಬಾಧೆ ತರದ ಸೌಮ್ಯ ಬೆಳಕದು. ಸಮಸ್ತ ಸೃಷ್ಟಿಗೆ ವಿರಾಮವನ್ನು ಕೊಡುವ ಕತ್ತಲೆಯೂ ಉಳಿದಿರಬೇಕು.  ಜೊತೆಗೆ ಆನಂದದ ಬೆಳಕೂ ಹರಿದು ಬಂದಿರಬೇಕು! ಅದು ಚಂದಿರನ ವೈಶಿಷ್ಟ್ಯ.

ಬೆಳಗನ್ನೊಳಗೊಂಡ ಆ ನೀರವ ಕತ್ತಲೆ. ಪ್ರಶಾಂತ ನಿಸರ್ಗ-ಸ್ವರ್ಗ ಕಂಡು ಋಷಿಯು ಅಂತರ್ಮುಖಿಯಾದ. ನಿಮಗ್ನನಾದ. ಅದೇ ಕ್ಷಣ ಸೃಷ್ಟಿಯ ಸೊಬಗಿನ ಹಿಂದಿರುವ ಮಹಾಸತ್ಯ ಅವನಿಗೆ ಗೋಚರಿಸಿತು. 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ!' ಎಂದ. ಅನಂತರ ಅವನ ಮುಖದಿಂದ ಹೊರಹೊಮ್ಮಿದ್ದೇ ಸಾಮಸಂಹಿತೆಯಾಯಿತು! ಸುಜ್ಞಾನಸಾಗರವಾಯಿತು!! ಆಗ ಋಷಿಯು ಪರವಸ್ತುವನ್ನು ಕುರಿತು ಹೇಳಿದ:

ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ

ಪರವಸ್ತು-ಪರಮಾತ್ಮನು ವಿಶ್ವದ ಹತ್ತು ದಿಕ್ಕುಗಳಿಗೂ ಹರವಿ ಅದರಾಚೆಗೂ ಅನಂತವಾಗಿ ವ್ಯಾಪಿಸಿದ್ದಾನೆ! ಋಷಿಯು ಒಮ್ಮೆ ವಿಶ್ವವನ್ನು ನೋಡಿದ. ಅಲ್ಲಿ ತುಂಬಿ ತುಳುಕಿದ ದಿವ್ಯ ಸೃಷ್ಟಿಸೌಂದರ್ಯವನ್ನು ಕಂಡು ಪರಮಾತ್ಮನು ವಿಶ್ವಭರಿತನೆಂದ. ಮತ್ತೊಮ್ಮೆ ಧ್ಯಾನಸ್ಥನಾಗಿ ತನ್ನಂತರಂಗದಲ್ಲಿ ಅರಿವಿನ ಕಣ್ಣಾಡಿಸಿದ. ಅಲ್ಲಿ ಕೋಟಿಸೂರ್ಯರಿಗೂ ಮಿಗಿಲಾದ ಚಿತ್‌ಪ್ರಭೆಯನ್ನು ಕಂಡ! ಆಗ ಪರಮಾತ್ಮನು ವಿಶ್ವಾತೀತನೂ ಆಗಿದ್ದಾನೆಂದ!!

ಇದೇ ಮಾತನ್ನು ಶರಣರೂ ನುಡಿದರು:

> 'ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ!'
> 'ಅಯ್ಯ ದಶದಿಕ್ಕುಗಳಿಂದ ಅತ್ತತ್ತ ನಿಮ್ಮ ದಶಭುಜಂಗಳು!'

ಹೀಗೆ ಋಷಿ-ಮುನಿಗಳು, ಸಂತರು, ಶರಣರು ಸತ್ಯವನ್ನು ಕಣ್ಣಾರೆ ಕಂಡು ಹೃದಯತುಂಬಿ ಹಾಡಿದರು. ಅದು ವಚನೋಪನಿಷತ್ತು ಮೊದಲಾದ ಪವಿತ್ರ ಗ್ರಂಥಗಳಲ್ಲಿ ಆತ್ಮಾನಂದಸಾಗರವನ್ನೇ ನಿರ್ಮಿಸಿತು! ಅದನ್ನವರು ಸ್ವಾನುಭಾವದಿಂದ ನುಡಿದದ್ದೇ ವಿನಾ ತರ್ಕಿಸಿ ಹೇಳಿದ್ದಲ್ಲ!

ವಸ್ತುವು ಕಾಣದೆ ಇದ್ದಾಗ ತರ್ಕ. ವಿಶ್ವಭರಿತವೂ ವಿಶ್ವಾತೀತವೂ ಆಗಿರುವ ಪರವಸ್ತುವನ್ನು ಋಷಿಯು ದಿಟವಾಗಿ ಕಂಡಿದ್ದ, ಅನುಭವಿಸಿದ್ದ. ಆದ್ದರಿಂದ ತರ್ಕದ ಪ್ರಶ್ನೆಯೇ ಆತನಿಗೆ ಉಳಿಯಲಿಲ್ಲ. ಮೇಲಾಗಿ ಸತ್ಯವು ತರ್ಕಕ್ಕೆ ಎಂದೂ ಸಿಗುವುದೂ ಅಲ್ಲ. 'ನೈಷಾ ತರ್ಕೇಣ ಮತಿರಾಪನೇಯಾ!"

ಋಷಿಗಳಂತೆ ನಮಗೆ ಅಂತರಂಗದ ಕದವನ್ನು ತೆರೆದು ಸತ್ಯದರ್ಶನ ಮಾಡಿಕೊಳ್ಳಲಾಗಲಿಲ್ಲ. ಸತ್ಯವನ್ನು ಕುರಿತು ನೂರಾರು ರೀತಿಯಲ್ಲಿ ತರ್ಕ ಮಾಡಿ ಶಬ್ದಜಾಲವನ್ನೇ ಹರಡಿದೆವು. ಅದೇ ಜಾಲದಲ್ಲಿ ನಾವು ಸಿಕ್ಕು ಹೇಳಿದೆವು: 'ಶಾಸ್ತ್ರಜಾಲಂ ಮಹಾರಣ್ಯಂ ಚಿತ್ತವಿಭ್ರಮಣಕಾರಣಮ್.' ಆ ಶುಷ್ಕ ಶಬ್ದಗಳ ಕೂಡ ಹೋರಾಡಿ ಜಯಶೀಲರಾಗಿ ಹೊರಬಂದ ಪರಮಾಚಾರ್ಯರು, ಪರಮಾನುಭಾವಿಗಳು ಕೊನೆಗೆ 'ನಿಶ್ಶಬ್ದಂ ಬ್ರಹ್ಮಮುಚ್ಯತೇ' ಎಂದು ಸತ್ಯ ಸಾರಿದರು! ಬುದ್ಧಿಭ್ರಮೆಯನ್ನುಂಟುಮಾಡುವ ಮಹಾ ಅರಣ್ಯಸ್ವರೂಪವಾದ ಶಬ್ದಜಾಲದಿಂದ ನಮ್ಮನ್ನು ಪಾರುಮಾಡಿದರು! ಪರಮಾನಂದದ ನೆಲೆಯನ್ನು ತೋರಿದರು!!

ಋಷಿ-ಮುನಿಗಳು, ಸಂತರು-ಶರಣರು ಕಂಡುಂಡು ಕಂಡರಿಸಿದ ಆ ಪರಮ ಸತ್ಯದ ಮೇಲೆ ಪರಿಶುದ್ಧ ಪ್ರೇಮವನ್ನಿಟ್ಟಾಗ ಪರಮಾನಂದ! ಅದು ನಿಜಭಕ್ತಿ! ಅಂಥ ಭಕ್ತಿಯ ಪೋಷಣೆಗೆ ಸತ್ಸಂಗ, ನೆನಹಿನ ಸಂಗ, ಸತ್ಕಾರ್ಯ ಅವಶ್ಯವೆಂದು ಇದುವರೆಗೆ ನೋಡಿದ್ದೇವೆ. ಈಗ ಆ ಸತ್ಕಾರ್ಯದಲ್ಲಿ ನಾವು ಹೇಗಿರಬೇಕೆಂದು ನೋಡುತ್ತೇವೆ.

ಸತ್ಕಾರ್ಯ ಕುರಿತು ಈಶಾವಾಸ್ಯ ಉಪನಿಷತ್ತಿನಲ್ಲಿ ಈ ಭಾವ ವ್ಯಕ್ತವಾಗಿದೆ, "ನಿನ್ನ ಹತ್ತೂ ಬೆರಳಿನಿಂದ ನೂರು ವರುಷ ಕೆಲಸ ಮಾಡು. ಆದರೆ ನಿನ್ನ ಬೆರಳುಗಳಿಗೆ ಒಂದಿಷ್ಟೂ ಮಣ್ಣು ಹತ್ತದಂತೆ ನೋಡಿಕೋ!"

ಪರಮಾತ್ಮನ ಕಾರುಣ್ಯದ ಕೂಸಾಗಿರುವ ಈ ಪ್ರಪಂಚವನ್ನೆಲ್ಲಾ ನಾವು ಪ್ರೀತಿಸಬೇಕು. ಅದಕ್ಕಾಗಿ ಆಯುಷ್ಯದ ತುಂಬಾ ದುಡಿಯಬೇಕು. ಬಂಧು-ಮಿತ್ರರನ್ನು, ದವಸ-ಧಾನ್ಯವನ್ನು, ಧನ-ಕನಕಾದಿಗಳನ್ನೆಲ್ಲ ಸತ್ಯಶುದ್ಧ ಮಾರ್ಗದಿಂದ ಗಳಿಸಬೇಕು. ಸ್ವ-ಪರ ಹಿತಕ್ಕಾಗಿ

ಬಳಸಬೇಕು. ಆದರೆ ಈ ಪ್ರಪಂಚದಲ್ಲಿ ಯಾವುದಕ್ಕೂ ಅಂಟಿಕೊಳ್ಳದೆ ನಿರ್ಲಿಪ್ತನಾಗಿರಬೇಕು. ಅದು ಭಕ್ತಿಗೆ ಪೋಷಕ! ಈ ನಿರ್ಲಿಪ್ತತೆ ತ್ಯಾಗದಿಂದ ಮಾತ್ರ ಸಾಧ್ಯ!!

ತ್ಯಾಗದಲ್ಲಿ ಎರಡು ಬಗೆ. ಒಂದು ವಿಷಯತ್ಯಾಗ. ಇನ್ನೊಂದು ವಿಷಯರಸತ್ಯಾಗ. ಯಾವ ವಸ್ತುಗಳು ನಮ್ಮ ಭಕ್ತಿಸಾಧನೆಗೆ ಆತಂಕವಾಗುತ್ತವೆಯೋ ಅಂಥ ವಸ್ತುಗಳಿಂದ ನಾವು ಸುದೂರ ಸಾಗಬೇಕು. ಅದು ವಿಷಯತ್ಯಾಗ. ಆಗಲೂ ವಿಷಯಗಳು ನೆನಹಿನ ರೂಪದಲ್ಲಿ ಬಂದು ನಮ್ಮನ್ನು ಕಾಡುತ್ತವೆ. ಅದೇ ವಿಷಯವಾಸನೆ ಅಥವಾ ವಿಷಯರಸ. ಅದನ್ನೂ ಬಿಟ್ಟುಬಿಡುವುದು ವಿಷಯರಸತ್ಯಾಗ!! ವಿಷಯತ್ಯಾಗ ಕುರಿತು ತೋಂಟದ ಸಿದ್ಧಲಿಂಗ ಯತಿಗಳ ಒಂದು ವಚನ ಹೀಗಿದೆ:

> ಹೆಣನ ಕಂಡರೆ ನಾಯಿ ಕಚ್ಚದಲ್ಲದೆ ಮಾಬುದೇ?
> ಹೆಣ್ಣವ ಕಂಡರೆ ಮನ ಕರಗಿದಲ್ಲದೆ ಮಾಬುದೇ?
> ಬಿಸಿಯ ಕಂಡರೆ ಬೆಣ್ಣೆ ಕರಗಿದಲ್ಲದೆ ಮಾಬುದೇ?
> ಹುಸಿಯ ಕಂಡರೆ ಲೋಕ ಮೆಚ್ಚುವುದು, ನೆಚ್ಚುವುದು
> ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ!

ಹೆಣವನ್ನು ಕಂಡರೆ ನಾಯಿ ಅದನ್ನು ಕಚ್ಚದೆ ಇರದು. ದೇವಾನುದೇವತೆಗಳೇ ದಕ್ಷಿಣೆಯ ಹಣಕ್ಕೆ, ತಪ್ಪುಕಾಣಿಕೆಗೆ ಪ್ರಸನ್ನರಾಗುತ್ತಾರೆ; ಆಸೆಪಡುತ್ತಾರೆ! ಇನ್ನು ಮನುಷ್ಯನ ಪಾಡೇನು? ತಾನಾಗಿಯೇ ಕರಗುವ ಬೆಣ್ಣೆಯು ಬಿಸಿಯ ಎದುರು ಇಟ್ಟರೆ ಕರಗದೆ ಇರುತ್ತದೆಯೇ? ಸ್ವಭಾವತಃ ಚಂಚಲ ಮನಸ್ಸು ಆಕರ್ಷಕ ವಿಷಯಗಳ ಸನಿಹದಲ್ಲಿ ಜಾರದೆ ಇರುತ್ತದೆಯೇ?

ಆದ್ದರಿಂದ ಪರಮಸತ್ಯವನ್ನು ಹೃದಯಾರೆ ನಂಬಿರುವ ಭಕ್ತನು ದೈಹಿಕವಾಗಿಯೂ, ಮಾನಸಿಕವಾಗಿಯೂ ವಿಷಯವಸ್ತುಗಳಿಂದ ದೂರವಿರಬೇಕು. ವಿಷಯಗಳಿಂದ ನಾವು ದೈಹಿಕವಾಗಿ ದೂರವಾದ ಮಾತ್ರಕ್ಕೆ ಅವುಗಳ ಕಾಟ ಪೂರ್ಣ ತಪ್ಪುವುದೆಂದು ಹೇಳಲಾಗದು. ವಿಷಯಗಳು ಹೊರಗಿದ್ದು ಕಾಡುವುದಕ್ಕಿಂತ, ನಮ್ಮೊಳಗಿದ್ದು ಕಾಡುವುದೇ ಹೆಚ್ಚು! ನಮ್ಮ ಈ ಮನದೊಳಗಿರುವ ವಿಷಯಗಳ ಕಾಟ ಕಳೆಯುವುದು ಅಷ್ಟು ಸುಲಭವಲ್ಲ.

ಒಂದು ಬೀದಿಯ ನಾಯಿಮರಿ. ಅನಾಥ. ತಂಗುಳವೋ ಹಳಸಿದ್ದೋ ಅಲ್ಲಿಷ್ಟು ಇಲ್ಲಿಷ್ಟು ತಿಂದು ಬದುಕಿತ್ತು. ಒಂದು ದಿನ ಅದರ ಭಾಗ್ಯದ ಬಾಗಿಲು ತೆರೆಯಿತು. ಒಬ್ಬ ಶ್ರೀಮಂತ ಅದನ್ನು ನೋಡಿದ. ಮುದ್ದಾದ ನಾಯಿಮರಿ. ತನ್ನ ಭವ್ಯ ಮನೆಗೆ ಒಯ್ದ.

ಅದಕ್ಕೊಂದು ಪುಟ್ಟ ಮನೆ ಕಟ್ಟಿಸಿದ. ಮೆತ್ತನೆಯ ಗಾದಿ ಹಾಸಿದ. ನಾನಾ ವಿಧ ಭಕ್ಷ್ಯ ಭೋಜ್ಯಗಳನ್ನಿತ್ತು ರಾಜವೈಭವದಲ್ಲಿ ಇರಿಸಿದ. ನಾಯಿ ಪ್ರಪಂಚವನ್ನೆಲ್ಲ ಮರೆತು ಸುಖದ ಸುಷುಪ್ತಿಗೆಯಲ್ಲಿ ಹಾಯಾಗಿತ್ತು! ಒಂದು ದಿನ ಅದರ ಕನಸಿನಲ್ಲಿ ದೇವನು ಕಾಣಿಸಿಕೊಂಡ. "ಮರಿಯೇ, ಎಂಥಾ ರಾಜ್ಯಭೋಗ-ಭಾಗ್ಯ ನಿನ್ನದು! ನಿನ್ನ ವೈಭವ ಕಂಡು ನನಗೆ ಅಪಾರ ಸಂತಸ. ಮತ್ತೇನಾದರೂ ಬೇಕಾಗಿದ್ದರೆ ಕೇಳು!" ಎಂದನು ಆ ದೇವನು.

"ದೇವನೆ, ನಿನ್ನ ಕರುಣೆಯಿಂದ ಅದ್ಭುತ ಭೋಗವೈಭವ ದೊರೆತಿದೆ. ಈ ಮನೆಯಲ್ಲಿ ನನಗೆ ಯಾವುದಕ್ಕೂ ಕೊರತೆಯಿಲ್ಲ. ಆದರೆ ಒಂದೇ ಒಂದು ಆಸೆ ನನ್ನನ್ನು ಬಹಳ ದಿನಗಳಿಂದ ಕಾಡುತ್ತಿದೆ" ಎಂದಿತಾ ನಾಯಿಮರಿ. 'ಏನು ನಿನ್ನಾಸೆ?' ಎಂದನು ದೇವನು.

> ಕ್ರಿಮಿಕುಲಚಿತ್ತಂ ಲಾಲಾಕ್ಲಿನ್ನಂ ವರ್ಣರಹಿತಂ
> ಜುಗುಪ್ಸಿತಂ ನರಾಸ್ತಿ ನೀರಸಂ ಅರೂಪಂ

ವರ್ಣರಹಿತ, ನೀರಸ, ಕುರೂಪಾದ ಹುಳು ಮೆತ್ತಿದ, ದುರ್ಗಂಧ ತುಂಬಿದ ಅಸಹ್ಯವಾದ ಒಣಗಿದ ಎಲುಬಿನ ತುಂಡನ್ನು ಬೇಡಿತ್ತಾ ನಾಯಿ!

ಅಂಥಾ ರಾಜವೈಭವದಲ್ಲಿದ್ದ ನಾಯಿಗೆ ಇಂಥಾ ಮಲಿನವಾದ ಎಲುಬನ್ನು ಮರೆಯಲಾಗಲಿಲ್ಲ. ವಿಷಯವಾಸನೆ ಅಷ್ಟು ಬಲಿಷ್ಠ! ಈ ವಿಷಯರಸತ್ಯಾಗದ ಕುರಿತು ಗೀತೆಯಲ್ಲಿ ಒಂದು ಮಾತು:

> ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ |
> ರಸವರ್ಜ್ಯಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ||
>
> ಗೀತಾ (೨.೫೯)

ಆಹಾರ ನಿಗ್ರಹದಿಂದ ಜೀವನಿಗೆ ವಿಷಯಭೋಗದ ಬಲ, ದೈಹಿಕ ಶಕ್ತಿ ಕುಂದುವುದೇ ಹೊರತು ಭೋಗದ ಬಯಕೆ, ಮಾನಸಿಕ ಒಲವು ಕುಂದುವುದಿಲ್ಲ. ಪರಮಸತ್ಯ ವಸ್ತುವಿನ ದರ್ಶನವಾಗುತ್ತಲೇ ಈ ವಿಷಯವಾಸನೆಯನ್ನು ನಿಗ್ರಹಿಸಲು ಸಾಧ್ಯವಾಗುತ್ತದೆ.

ಹುಣಿಸೆಹಣ್ಣಿನ ಮರದಡಿ ಕುಳಿತಾಗ ನಾಲಿಗೆ ಸುಮ್ಮನಿರುವುದೆ? ತುಂಬಿದ ಅಂಗಡಿ ಎದುರು ನಿಂತಾಗ ಅವಶ್ಯವಿಲ್ಲದಿದ್ದರೂ ಏನಾದರೂ ಒಂದು ತೆಗೆದುಕೊಳ್ಳಬೇಕೆನಿಸುವುದಿಲ್ಲವೇ? ವಿಷಯಸಾಮೀಪ್ಯ ಅಷ್ಟು ಶಕ್ತಿಶಾಲಿ! ಆದ್ದರಿಂದಲೇ ಭಕ್ತಿಸಾಧಕನು ವಿಷಯಗಳನ್ನು ಕುರಿತು ಎಚ್ಚರವಾಗಿರಬೇಕು. ನಾನು ಬಹಳ ಶಕ್ತಿಶಾಲಿ, ವೈರಾಗ್ಯಶಾಲಿ ಎಂದು ವಿಷಯಗಳ ಕೂಡ ಸ್ಪರ್ಧೆಗೆ ಇಳಿಯಬಾರದು. ಎಂಥೆಂಥವರನ್ನೂ ವಿಷಯಗಳು ಸೋಲಿಸಲಿಲ್ಲವೇ!

ಮನೆಯಲ್ಲಿರುವ ಕೋಪತಾಪ ದೇವರಮನೆಯಲ್ಲಿ ಬರುವುದಿಲ್ಲ. ಮಠ-ಮಂದಿರಗಳ, ತೀರ್ಥಕ್ಷೇತ್ರಗಳ ಪವಿತ್ರ ಪರಿಸರದಲ್ಲಿ ಸಂಸಾರದ ಜಂಜಾಟ, ವಿಷಯಗಳ ಸೆಳೆತ ಇರುವುದಿಲ್ಲ. ಅಂಥ ನಿರ್ಮಲ ಪರಿಸರ ಪಡೆದು ಭಕ್ತಿಸಾಧಕನು ವಿಷಯ ಹಾಗೂ ವಿಷಯರಸತ್ಯಾಗವನ್ನು ಸಾಧಿಸಬೇಕು.

❑

# ಬೆಳಕಿನ ದಾರಿ ತೋರಿದವರು

**ಡಾ. ಎಂ.ಎನ್. ನಂದೀಶ್ ಹಂಚೆ**

ಬದುಕೇ ಶೂನ್ಯವೆನಿಸತೊಡಗಿತ್ತು. ನನ್ನ ಬದುಕಿನ ಆಧಾರವಾಗಿದ್ದ, ಸರ್ವಸ್ವವೂ ಆಗಿದ್ದ ಯಜಮಾನರನ್ನು ಕಳೆದುಕೊಂಡು ದಿಕ್ಕೇ ತೋಚದಂತೆ ಆಗಿತ್ತು. ಇಂಜಿನಿಯರ್ ಆಗಿದ್ದ ಅವರು ದೇವರು, ಧರ್ಮ, ಸಂಸ್ಕೃತಿ ಎಂದು ಯಾವಾಗಲೂ ಹೇಳುತ್ತಿದ್ದರು. ಮಾತ್ರವಲ್ಲ, ಜೀವನದಲ್ಲೂ ಅದನ್ನು ಸದಾ ಅನುಸರಿಸುತ್ತಿದ್ದ ನನ್ನ ಪತಿದೇವರು ಹಾಸಿಗೆ ಹಿಡಿದು ವರ್ಷಗಳ ಕಾಲ ಮಲಗಿದಾಗಲೇ ದುಃಖವಾಗಿತ್ತು. ದೇವರ ಮೇಲೆ ನಂಬಿಕೆಯೇ ಇಲ್ಲವಾಗಿತ್ತು. ಆತ ಇರುವುದು ನಿಜವೇ ಆಗಿದ್ದರೆ ಇಷ್ಟು ಧಾರ್ಮಿಕರಾಗಿದ್ದ ನನ್ನ ಪತಿಗೆ ಯಾಕೆ ಇಷ್ಟೊಂದು ಕಷ್ಟ ಕೊಡುತ್ತಿದ್ದ ಎಂದು ಆ ಕಾಣದ ದೇವರನ್ನು ನಿತ್ಯವೂ ಶಪಿಸುತ್ತಿದ್ದೆ. ಈ ನಡುವೆ ಅವರು ದೈವಾಧೀನರಾಗಿದ್ದು ಬದುಕಿನಲ್ಲಿ ಒಮ್ಮೆಲೇ ಕತ್ತಲೆ ಆವರಿಸಿದಂತಾಯಿತು. ನನ್ನ ದುರದೃಷ್ಟ, ನನಗೆ ಮಕ್ಕಳ ಭಾಗ್ಯವೂ ಇರಲಿಲ್ಲ. ನನ್ನ ಯಜಮಾನರೇ ನನ್ನ ಸರ್ವಸ್ವವಾಗಿದ್ದರು. ಅವರನ್ನು ಕಳೆದುಕೊಂಡ ಬಳಿಕ ನನಗೆ ಬದುಕಿನಲ್ಲಿ ಇನ್ನೇನೂ ಉಳಿದಿಲ್ಲವೆನಿಸಿತು.

ನಮ್ಮ ಪೂರ್ವಿಕರಿಂದ ಹಾಗೂ ನಾವು ಸಂಪಾದಿಸಿದ್ದ ಅಪಾರ ಸಂಪತ್ತೆಲ್ಲ ಈಗ ಅರ್ಥವಿಲ್ಲದಾಗಿಬಿಟ್ಟಿತ್ತು. ಮನಸ್ಸು ವೈರಾಗ್ಯದ ಕಡೆಗೆ ಆಕರ್ಷಿತವಾಯಿತು. ಎಲ್ಲದರ ಬಗ್ಗೆ ನಿರಾಸಕ್ತಿ, ಜೀವನವೇ ಸಾಕು ಎಂಬ ನಿರ್ಧಾರಕ್ಕೆ ಬಂದೆ. ಯಾರೊಂದಿಗೂ ಮಾತನಾಡಬೇಕು ಎನಿಸುತ್ತಿರಲಿಲ್ಲ. ಒಂದು ಮುಂಜಾನೆ ನನ್ನ ದುಃಖವನ್ನೆಲ್ಲ ನನ್ನ ಗುರುಗಳಾದ ಶ್ರೀ ರಾಜೇಂದ್ರ ಸ್ವಾಮಿಗಳ ಬಳಿ ನಿವೇದಿಸಿಕೊಳ್ಳಬೇಕು ಎಂದು ಶ್ರೀಮಠಕ್ಕೆ ತೆರಳಿದೆ. ಆಗ ತಾನೇ ಪೂಜೆ, ಪ್ರಸಾದ ಮುಗಿಸಿ ಅವರು ಯಾವುದೋ ಕಾಗದವನ್ನು ನೋಡುತ್ತಿದ್ದರು. ನಾನು ಬಂದಿರುವುದನ್ನು ನೋಡಿ ಶ್ರೀಮಠದ ಸೇವಕ ಶಿವರಾಮು "ಇದೇನು ಮೇಡಂ, ಇಷ್ಟು ಬೇಗ ಬಂದಿದ್ದೀರಿ" ಎಂದರು. "ಗುರುಗಳನ್ನು ನೋಡುವುದಿತ್ತು" ಎಂದೆ. "ಬನ್ನಿ, ಒಳಗಿದ್ದಾರೆ" ಎಂದು ಕರೆದುಕೊಂಡು ಹೋದರು. ಶ್ರೀಮಠದಲ್ಲಿ ಎಲ್ಲರಿಗೂ ನಮ್ಮ ಕುಟುಂಬದ ಮೇಲೆ ತುಂಬಾ ಗೌರವವಿತ್ತು. ಶ್ರೀಗಳಿದ್ದ ಪ್ರಾಕಾರವನ್ನು ಪ್ರವೇಶಿಸುತ್ತಿದ್ದಂತೆ ನನ್ನನ್ನು ನೋಡಿ "ಅಯ್ಯೋ, ಇದೇನಮ್ಮ ಇಷ್ಟು ಬೇಗ ಮಠಕ್ಕೆ ಬಂದಿದ್ದೀರಿ, ಏನಾದರೂ ತುರ್ತು ವಿಷಯ ಇತ್ತೇ? ಎಲ್ಲರೂ ಸೌಖ್ಯ ತಾನೇ" ಎಂದರು. ಶ್ರೀಗಳವರ ದರ್ಶನವೂ ಆಗಿ, ಅವರು ಸೌಖ್ಯವೇ ಎಂದು ಕೇಳಿದಾಗ

ದುಃಖ ಒತ್ತರಿಸಿಕೊಂಡು ಬಂತು. ಕಣ್ಣೀರು ಧಾರಾಕಾರವಾಗಿ ಹರಿಯಲಾರಂಭಿಸಿತು. ಶಿವರಾಮು "ಮೇಡಂ ಅಳಬೇಡಿ. ಅಳಬೇಡಿ" ಎನ್ನುತ್ತಲೇ ಇದ್ದ. ಶ್ರೀಗಳು "ಅಳಬೇಡಮ್ಮ. ಸಮಾಧಾನ ಮಾಡಿಕೊ. ಎಲ್ಲರಿಗೂ ಕಷ್ಟ ಇದ್ದದ್ದೇ. ನೀನೇ ಹೀಗೆ ಧೈರ್ಯಗೆಟ್ಟು ಅಳುತ್ತಿದ್ದರೆ ಹೇಗೆ? ಎಷ್ಟು ಬುದ್ಧಿವಂತೆ, ವಿವೇಕ ಇರುವವಳು ನೀನು. ಹೀಗೆ ಅಳುತ್ತಾರೆಯೇ? ನಿನ್ನ ಗಂಡ ಈಗ ಹೋಗಿದ್ದಾನೆ. ನಾಳೆ ನಾವೂ ಅಷ್ಟೇ. ಸಾವು ಯಾರಿಗೂ ತಪ್ಪಿದ್ದಲ್ಲ. ಅಲ್ವಾ" ಎಂದು ಹೇಳುತ್ತಿರುವಂತೆ ಶ್ರೀಗಳ ಕಾಲಿಗೆರಗಿ ನಮಿಸಿ, ಅವರ ಪಾದದ ಬಳಿ ಕುಳಿತೆ. ಶ್ರೀಗಳು "ಮೇಲೇಳು, ಕುರ್ಚಿಯಲ್ಲಿ ಕುಳಿತುಕೋ" ಎಂದು ಒತ್ತಾಯಿಸಿದರು. ಶಿವರಾಮು ಕೂಡ ಬಲವಂತ ಮಾಡಿದ. ಆದರೆ ಭೂಮಿಯವರೆಗೂ ಕುಸಿದುಹೋಗಿದ್ದ ನನಗೆ ಮೇಲೇಳಲು ಆಸಕ್ತಿಯೇ ಇರಲಿಲ್ಲ. ನೆಲದ ಮೇಲ ಗುರುಗಳ ಸನ್ನಿಧಾನದಲ್ಲಿ ಸುಮ್ಮನೆ ಕುಳಿತುಕೊಳ್ಳುವುದೇ ಹಿತವೆನಿಸಿತು. ಶ್ರೀಗಳಿಗೆ "ಇಲ್ಲಿಯೇ ಕುಳಿತುಕೊಳ್ಳುತ್ತೇನೆ" ಎಂದು ವಿನಂತಿಸಿದೆ. ಶಿವರಾಮು ಕೆಲಸದ ನಿಮಿತ್ತ ಹೊರಗೆ ತೆರಳಿದ ಮೇಲೆ ಶ್ರೀಗಳು "ಬಂದ ವಿಚಾರವೇನು?" ಎಂದು ನನ್ನನ್ನು ಕೇಳಿದರು. ನಾನು ನನ್ನ ದುಃಖವನ್ನೆಲ್ಲ ತೋಡಿಕೊಂಡು ವೈರಾಗ್ಯದ ಮಾತುಗಳನ್ನಾಡಿದೆ. "ನನ್ನ ಆಸ್ತಿಯನ್ನೆಲ್ಲ ಶ್ರೀಮಠಕ್ಕೆ ದಾನ ಮಾಡಲು ನಿರ್ಧರಿಸಿದ್ದೇನೆ. ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳನ್ನೂ ತಂದಿದ್ದೇನೆ. ತಾವು ಸ್ವೀಕರಿಸಬೇಕು. ನನ್ನನ್ನು ಎಲ್ಲಾ ಬಂಧನಗಳಿಂದ ಮುಕ್ತಳನ್ನಾಗಿಸಬೇಕು" ಎಂದು ವಿನಂತಿಸಿದೆ. ವಿನಂತಿ ಎನ್ನುವುದಕ್ಕಿಂತಲೂ ಬೇಡಿದೆ ಎನ್ನಬಹುದು. ಶ್ರೀಗಳು "ತಿಂಡಿ ಆಯಿತೆ" ಎಂದರು. ಇಲ್ಲವೆಂದು ತಲೆಯಾಡಿಸಿದೆ. ಆಚೆ ಇದ್ದ ಶಿವರಾಮುವನ್ನು ಕರೆದು, "ಮೊದಲು ಇವರನ್ನು ಕರೆದುಕೊಂಡು ಹೋಗು. ಪ್ರಸಾದ ಮಾಡಿಸು" ಎಂದರು. ನಾನು "ಅದು ಆಮೇಲಾಗಲಿ ಬುದ್ಧಿ. ಮೊದಲು ಇದನ್ನೆಲ್ಲಾ ಸ್ವೀಕರಿಸಿ" ಎಂದೆ. "ಮೊದಲು ನೀನು ಹೋಗಿ ಪ್ರಸಾದ ಮಾಡಿಕೊಂಡು ಬಾಮ್ಮ. ನಾವು ಇಲ್ಲೇ ಇರುತ್ತೇವಲ್ಲ" ಎಂದರು.

ಶ್ರೀಗಳವರ ಬಲವಂತಕ್ಕೆ ಆಚೆ ಹೋಗಿ ಸ್ವಲ್ಪ ಪ್ರಸಾದವನ್ನು ಸ್ವೀಕರಿಸಿ ಬಂದೆ. ಅಷ್ಟರಲ್ಲಿ ಮತ್ತೆ ಕೆಲವರು ಶ್ರೀಗಳನ್ನು ನೋಡಲು ಬಂದಿದ್ದರು. ಅವರೊಡನೆ ಮಾತನಾಡುತ್ತಿದ್ದ ಶ್ರೀಗಳು ನನ್ನನ್ನು ಎಲ್ಲರಿಗೂ ಪರಿಚಯಿಸಿ "ಗೊತ್ತಲ್ಲ ಇವರು. ಲೀಲಮ್ಮ ಎಂದು. ಬಹಳ ಉದಾರಿಗಳು" ಎಂದೆಲ್ಲ ವಿಶೇಷಣಗಳನ್ನು ಬಳಸಿದರು. ಅವರೆಲ್ಲರೂ ಹೋದ ಮೇಲೆ "ಊರಿನ ಕಡೆ ಹೋಗಲಿಲ್ಲವೇ?" ಎಂದರು ಶ್ರೀಗಳು. "ಯಾವುದೂ ಬೇಡ ಎನಿಸಿದೆ. ಎಲ್ಲವನ್ನೂ ಮಠಕ್ಕೆ ನೀಡಿ ಸನ್ಯಾಸ ತೆಗೆದುಕೊಂಡು ಆಶ್ರಮ ಸೇರಿಕೊಳ್ಳಲು ನಿರ್ಧರಿಸಿದ್ದೇನೆ. ಈ ಆಸ್ತಿಯೆಲ್ಲ ಶ್ರೀಮಠಕ್ಕೇ ಸಲ್ಲಬೇಕು ಎಂದು ನಿರ್ಧರಿಸಿದ್ದೇನೆ" ಎಂದೆ. ಮತ್ತೆ ನನ್ನ ಬ್ಯಾಗಿನಲ್ಲಿದ್ದ ಎಲ್ಲಾ ಕಾಗದಪತ್ರಗಳನ್ನು ತೆಗೆಯಲು ಆರಂಭಿಸುತ್ತಿದ್ದಂತೆ ಶ್ರೀಗಳು "ಒಂದು ನಿಮಿಷ. ಆ ಪತ್ರಗಳನ್ನು ತೆಗೆಯಬೇಡ.

ಇರು" ಎಂದರು. ನಾನು "ಯಾಕೆ ಬುದ್ಧಿ" ಎಂದೆ. "ನಾನು ಹೇಳುವ ಮಾತುಗಳನ್ನು ಪೂರ್ತಿ ಕೇಳಿಸಿಕೋ. ಆಮೇಲೆ ಏನು ಮಾಡಬೇಕು ಎಂದು ನಿರ್ಧರಿಸೋಣ" ಎಂದರು.

ಮುಂದುವರಿದು ಅವರು ಹೇಳಿದರು : "ನೋಡು, ಜೀವ ಮತ್ತು ಜೀವನ ಎಂಬುದು ತುಂಬ ದೊಡ್ಡದು. ಭಗವಂತ ನೀಡಿದ ಬದುಕನ್ನು ನಾವು ನಮಗೆ ತೋಚಿದಂತೆ ಬಳಸಬಾರದು. ಅವನು ತೋರಿದಂತೆ ನಡೆಯಬೇಕು. ನಿನಗಿನ್ನೂ ಚಿಕ್ಕ ವಯಸ್ಸು, ದೇಹದಲ್ಲಿ ಶಕ್ತಿ, ಚೈತನ್ಯ ಎಲ್ಲ ಇದೆ. ಗಂಡನನ್ನು ಕಳೆದುಕೊಂಡ ದುಃಖದ ಭರದಲ್ಲಿ ಮನಸ್ಸು ಸಹಜವಾಗಿ ಎಲ್ಲದರ ಬಗ್ಗೆ ನಿರಾಸಕ್ತಿ ತಳೆಯುತ್ತದೆ. ವೈರಾಗ್ಯದ ಕಡೆ ಮುಖ ಮಾಡುತ್ತದೆ. ಆದರೆ ಇದನ್ನು ಅಭಾವವೈರಾಗ್ಯ ಎನ್ನುತ್ತಾರೆ. ವೈರಾಗ್ಯ ಮತ್ತು ಸನ್ಯಾಸ ಎನ್ನುವುದು ಸುಲಭವಲ್ಲ. ಅದು ಸಂಸಾರಕ್ಕಿಂತಲೂ ಕಠಿಣ. ಮತ್ತೊಂದು ಸಂಗತಿಯನ್ನು ತಿಳಿದುಕೋ. ಲೌಕಿಕ ಜಗತ್ತಿನಲ್ಲಿ ಸಂಪತ್ತಿನಿಂದಲೇ ವ್ಯಕ್ತಿಗೆ ಗೌರವ. ಹಣ ಮತ್ತು ಅಂತಸ್ತಿನಿಂದಲೇ ಎಲ್ಲ ನಿರ್ಧಾರ. ಅಂತಹುದರಲ್ಲಿ ಎಲ್ಲವನ್ನೂ ಮಠಕ್ಕೆ ನೀಡಿದರೆ ನಿನ್ನ ಪರಿಸ್ಥಿತಿ ಏನಾದೀತು? ಯಾವುದೇ ಕಾರಣಕ್ಕೂ ನಾವು ನಿನ್ನ ಆಸ್ತಿಯನ್ನು ಸ್ವೀಕರಿಸುವುದಿಲ್ಲ. ನೀನು ನಮಗಲ್ಲ, ಯಾರಿಗೂ ದಾನ ಮಾಡಬೇಡ. ಈ ಸಂಪತ್ತನ್ನು ನೀನೇ ಸದ್ವಿನಿಯೋಗ ಮಾಡು. ನಿನ್ನ ಹಾಗೂ ನಿನ್ನ ಗಂಡನ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡು" ಎಂದು ಸಲಹೆ ನೀಡಿದ್ದರು. ಆಗ ನಾನು "ಸದ್ವಿನಿಯೋಗ ಆಗಲೆಂದೇ ಅಲ್ಲವೆ ಮಠಕ್ಕ ನೀಡುತ್ತಿರುವುದು" ಎಂದೆ. "ನೋಡು, ಎಲ್ಲವೂ ಸಮುದ್ರಕ್ಕೆ ಸೇರಿದರೆ ಅದರಿಂದ ಬಂದ ಲಾಭವೇನು? ಏನೂ ಇಲ್ಲ. ನೀನೇ ಒಂದು ಸರೋವರ ಆಗಬೇಕು. ಅದರಿಂದ ನಿನ್ನನ್ನು ಅವಲಂಬಿಸಿರುವ ಜನ ಬದುಕುತ್ತಾರೆ" ಎಂದು ತಿಳಿಹೇಳಿದರು. "ನಿನ್ನ ಮುಂದಿರುವ ವಿಶಾಲ ಜಗತ್ತಿನಲ್ಲಿ ನಿನಗಿಂತ ಬಹಳ ಜನ, ಬೇರೆ ಬೇರೆ ರೀತಿಯ ಸಂಕಷ್ಟಗಳಲ್ಲಿ ಇದ್ದಾರೆ. ಅವರನ್ನು ನೋಡು. ನೀನು ಸನ್ಯಾಸ, ವೈರಾಗ್ಯದ ಮಾತನ್ನು ಬಿಡು. ಅದು ನಮ್ಮಂಥವರಿಗೆ ಸೇರಿದ್ದು. ಜೀವನದಲ್ಲಿ ಆಸಕ್ತಿ ಕಳೆದುಕೊಳ್ಳಬೇಡ. ನಿನ್ನ ಮತ್ತು ನಿಮ್ಮ ಯಜಮಾನರ ಹೆಸರಿನಲ್ಲಿ ಒಂದು ಟ್ರಸ್ಟ್ ಮಾಡು. ಅದರ ಮೂಲಕ ಯಥಾಮತಿಯಾಗಿ ಸಮಾಜಸೇವೆ ಮಾಡು" ಎಂದರು. ಅವರ ಆ ಹಿತನುಡಿಯ ಮುಂದೆ ನನ್ನ ವೈರಾಗ್ಯದ ಅರ್ಥಹೀನತೆ ಗೊತ್ತಾಯಿತು. ಅವರ ಆಶಯದಂತೆ ಒಂದು ಟ್ರಸ್ಟ್ ಮಾಡಿದೆ. ಅದಕ್ಕೆ ಶ್ರೀಗಳನ್ನೇ ಅಧ್ಯಕ್ಷರನ್ನಾಗಿಸಿದೆ.

(ಮೇಲಿನ ಪ್ರಸಂಗದಲ್ಲಿ ಪ್ರಸ್ತಾಪಿತವಾಗಿರುವವರು ಮೈಸೂರಿನ ಒಬ್ಬರು ಮಹಿಳಾ ರಾಜಕಾರಣಿ)

❑

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರವಿಲಾಸ–ಟೀಕು

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು

ಉ॥ ಪಾಡುವ ಕಿನ್ನರರ್ನಲಿದು ನರ್ತಿಸುವಚ್ಚರಿಯರ್ಪೊದಳ್ದು ಕೊಂ ॥
ಡಾಡುವ ಚಂಡಕೀರ್ತಿಗಳುಘೇಜಯವೆಂದಡಿಗೆಯ್ದು ಮೆಯ್ಯನೀ ।
ಡಾಡುವ ತಾಪಸರ್ಮಣಿದನರ್ಘ್ಯಸುವಸ್ತುವನೊಲ್ದು ಕಾಣ್ಕೆಯಿಂ ।
ನೀಡುವ ನಿರ್ಜರೇಂದ್ರರೊಸದೊಪ್ಪಿದರೋಲಗದೋಳ್ತ್ರಿಶೂಲಿಯಾ ॥

ಟೀಕ ॥ ಪಾಡುವ ಕಿನ್ನರರ್ – ಶಿವಚರಿತ್ರಂಗಳಂ ಗಾನಗೆಯ್ವ ಕಿನ್ನರರ್ – ನಲಿದು – ಸಂತಸಗೊಂಡು, ನರ್ತಿಸುವ – ಕುಣಿಯುವ, ಅಚ್ಚರಿಯರ್ ಅಪ್ಸರಸಿಯರು, ಪೊದಳ್ದು – ರೋಮಾಂಚಗೊಂಡು, ಕೊಂಡಾಡುವ – ಸ್ತೋತ್ರ ಮಾಡುವ, ಚಂಡಕೀರ್ತಿಗಳು – ವೀರದಾಸರು, ಉಘೇ – ಜಯಯೆಂದು, ಅಡಿಗೆ – ಎಯ್ದಿ – ಪಾದಕ್ಕೆಬೀಳಲು, ಮೆಯ್ಯ – ಶರೀರವನ್ನು, ಈಡಾಡುವ –ಅಡ್ಡಕೆಡವಿ ಹೊರಳಿಸುವ – ತಾಪಸರ್ – ಭಕ್ತರಾದ ಋಷಿಗಳು, ಮಣಿದು – ಬಗ್ಗಿ, ಅನರ್ಘ್ಯ – ಬೆಲೆಯಿಲ್ಲದ, ಉತ್ತಮವಾದ, ಸುವಸ್ತುವಂ ಉತ್ತಮ ದ್ರವ್ಯವನ್ನು, ಒಲ್ದು ಒಪ್ಪಿ – ಕಾಣಿಕೆಯಂ ನೀಡಲು – ಉಪಹಾರಂಗೆಯ್ವ, ನಿರ್ಜರೇಂದ್ರರ್ – ದೇವಶ್ರೇಷ್ಠರ್, – ತ್ರಿಶೂಲಿಯ – ಶಿವನ, – ಓಲಗದೋಳ್ – ಸಭೆಯಲ್ಲಿ, ಒಸೆದು – ಪ್ರಸನ್ನರಾಗಿ, ಒಪ್ಪಿದರ್ – ಚನ್ನಾಗಿರ್ದರು – ಉತ್ಪಲಮಾಲಾವೃತ್ತ ॥ ೮೦ ॥

ವ॥ ಮತ್ತಮಾ ಸಭೆ ಘನಾಗಮದಂತೆ ಮಂಜುಲಾಶ್ಯ ಚಂಚತ್ಕಲಾ ನೀಲಕಂಠ ಮಂಡಿತಮುಂ ಸಮುದ್ಗತಸುಮನಃ ಕದಂಬಾಕಲಿತಮುಂ ಛಂದಶ್ಶಾಸ್ತ್ರದಂತೆ ಸಾಗರಮತ್ತೇಭ ಶಾರ್ದೂಲಮುಖ ಬಹುವಿಧಸುವೃತ್ತಗಣಬಂಧುರಮುಂ, ಸದಕ್ಷರನಿಯಮಯತಿ ನಿರಾಜಿತಮುಂ, ವ್ಯಾಕರಣದಂತೆ ವಿತತಾವ್ಯಯ ಪ್ರತ್ಯಯಪ್ರಕೃತಿನಿಯುಕ್ತಮುಂ, ಸಮಸ್ತ ಕಾರಕಕ್ರಿಯಾ ಪದಸಮಾಶ್ರಿತಮುಂ, ನ್ಯಾಯದಂತೆ ಬಹುಗುಣಕರ್ಮ ವಿಶೇಷಸಮವಾಯಸಮನ್ವಿತಮಂ, ಸಸಿದ್ಧಾಂತನಿರ್ಣಯಪ್ರಯೋಜನಜಾತಿರಂಜಿತಮುಂ, ವೇದಾಂತಸಂತಾನದಂತೆ ಕೈವಲ್ಯೋದಿತಶಿವಸಂಕಲ್ಪ ಶ್ವೇತಾಶ್ವತರ ಮೈತ್ರೇಯ ಪರಮಹಂಸ ವಿಭ್ರಾಜಿತಮುಂ, ಪ್ರಣವರುಚಿಸಮುದಿತಸಗುಣಬ್ರಹ್ಮರಮಣೀಯಮುಂ, ಆದಿತ್ಯ ವಸುವಿಸರ್ಗಾನ್ವಿತವಾಗಿಯೂ ಮುಸಿತತಮೋಮಿಳೀತಮುಂ, ಸ್ಫುರಿದಾಮಳ ಕೀಲಾಕ್ಷಾನಳಾಳಿಕದಾರುಕ ರೇಣುಕಾಂತಸ್ಥಿತಿಯುಂ, ಸದಾಶ್ರಿತಾವನಸ್ವಭಾವಮುಂ,

ಸುರಭಿಗಂಧವಾಹಬಂಧುರಮಾಗಿಯುಂ ಸದಾ ನಂದಿಭೃಂಗ್ಯಾಚಿಂತಮುಂ, ಭೀಮ ಧರ್ಮಪ್ರವೀರಪದಾಲಂಬಿತಮಾಗಿಯುಂ ಗುರುಗಾಂಗೇಯಸುರವಿಭವಾನ್ವಿತಮುಂ, ಸವಿಧಗತತಾಪಸಾಟೋಪಮಾಗಿಯುಂ ಸಮುಜ್ವಲಸೌಮ್ಯಾಂಗಾರಕ ವಿರಾಜಿತಮೆನಿಸಿರ್ದ ದಂತುಮಲ್ಲಿದೆ ॥ ೬ ॥

ಟೀಕು॥ ಮತ್ತಂ – ಮತ್ತು, ಆ ಸಭೆಯ – ಆ ಶಿವನೋಲಗವು, ಘನಾಗಮದಂತೆ – ಮೇಘದ ಬರುವಿಕೆಯ ಹಾಗೆ, ವರ್ಷಾಕಾಲದೋಳ್ ೧ ಮಂಜುಮನೋಹರವಾದ – ಲಾಸ್ಯ ನರ್ತನದಿಂದ, ಚಂಚತ್ ಬೆಳಗುವ, ಕಲಾಪ – ಬಾಲದ ಗರಿಗಳುಳ್ಳ, ನೀಲಕಂಠ – ನವಿಲುಗಳಿಂದ, ಮಂಡಿತಂ – ಅಲಂಕರಿಸಲ್ಪಟ್ಟದ್ದು; ೨ ಸಭೆಯು – ಮಂಜುಲ ಮನೋಹರವಾದ, ಆಸ್ಯ ಮುಖವುಳ್ಳ, ಮತ್ತು ಚಂಚತ್ – ಶೋಭಿಸುವ, ಕಲಾಪ – ಚಂದ್ರನುಳ್ಳ, ನೀಲಕಂಠ – ಶಿವನಿಂದ, ಮಂಡಿತಂ – ಅಲಂಕೃತವು, ಮತ್ತು ೧ ಘನಾಗಮವು ಸಮುದ್ಗತ – ಹುಟ್ಟಿದ, ಸುಮನಃ – ಹೂವುಗಳುಳ್ಳ, ಕದಂಬ ಕಡಹದ ಮರಗಳಿಂದಲೂ, ಈಚಲು ಮರಗಳಿಂದಲೂ, ಆಕಲಿತಂ ಕೂಡಿದ್ದು, ೨ ಸಭೆ ಸಮುದ್ಗತ – ಮೇಲಕ್ಕೆ ಎದ್ದ – ಸುಮನಃ ಕದಂಬ – ದೇವಸಂಘದಿಂದ, ಆಕಲಿತಂ – ಕೂಡಿದ್ದು, ಛಂದಶ್ಶಾಸ್ತ್ರದಂತೆ – ೧ ಸಾಗರ – ಮತ್ತೇಭ – ಶಾರ್ದೂಲ ಎಂಬುವದೇ, ಮುಖ – ಮುಂತಾದ್ದು, ಬಹುವಿಧ – ಹಲವು ಬಗೆಯಾದ, ಸುವೃತ್ತ – ಒಳ್ಳೆ ಪದ್ಯಭೇದಗಳಿಂದಲೂ, ಗಣ, ಮ, ಯ, ರ, ಸ, ತ, ಜ, ಭ, ನ, ಎಂಬ ೮ ಗಣಂಗಳಿಂದಲೂ, ಬಂಧುರ – ಚಲುವಾದದು, ೨ ಸಭೆ – ಸಾಗರಮುಖ – ಮತ್ತೇಭಮುಖ, ಶಾರ್ದೂಲಮುಖ, ಬಹುವಿಧ – ಹಲವು ಬಗೆಯಾದ, – ಸುವೃತ್ತ – ಸುಚರಿತ್ರರಾದ, ಗಣಪ್ರಮಥರ ಗಣಗಳಿಂದ, ಬಂಧುರಂ – ವ್ಯಾಪ್ತವು ॥ ೧ ಛಂದಶ್ಶಾಸ್ತ್ರ ಸತ್ ಒಳ್ಳೆಯ, ಅಕ್ಷರ – ಅಕಾರದಿ ವರ್ಣಗಳ, ನಿಯಮ – ಕಟ್ಟಳೆಯಿಂದಲೂ, ಒಳಗದಿಂದಲೂ – ಪಾದಕಿಷ್ಟಕ್ಕರವೇ ಎಂಬ ಕ್ಲುಪ್ತಿಯಿಂದಲೂ, ಪಾದಕ್ಕಿಷ್ಟು ..... ನಿರ್ಬಂಧ ಲಘುಗಳೇ ಎಂಬ ಕ್ಲುಪ್ತಿಯಿಂದಲೂ, ಯತಿ ಯಿಷ್ಟರಕ್ಕೂ ನಿಲ್ಲಿಸಿ ಓದಬೇಕೆಂಬ ವಿಭೇದದಿಂದಲೂ, ವಿರಾಜಿತಂ – ವಿಶೇಷವಾಗಿ ಬೆಳಗುವದು – ೨ ಸಭೆ ಸದಕ್ಷರ – ಪ್ರಣವಾದಿನಿಯಮ – ಇಷ್ಟು ಜಪವಾಗದೆಂಬ ಯೋಗನೀತಿಯುಳ್ಳ, ಯತಿ ಸನ್ಯಾಸಿಗಳಿಂದ, ವಿರಾಜಿತವು ೧ ವ್ಯಾಕರಣವು ವಿತತ – ವಿಸ್ತಾರವಾದ, ಅವ್ಯಯ – ಲಿಂಗವಚನ ವಿಭಕ್ತಿಗಳಿಂದ – ರೂಪಭೇದಗಳಂ ಪಡೆಯದೆ ಇರುವ ಏಕರೂಪವಾದ – ಪದಗಳಿಂದಲು ಪ್ರತ್ಯಯ – ಸುಬಾದಿ ಪ್ರತ್ಯಯಗಳು ತಿಚಾದಿ ಪ್ರತ್ಯಯಗಳು – ಘಾಯಾದಿಗಳು – ಇತ್ಯಾದಿಗಳಿಂದಲೂ – ಪ್ರಕೃತಿ ಪ್ರಾಪದಕದಿಂದಲೂ, ನಿಯುಕ್ತಂ ಕೂಡಿದ್ದು – ೨ ಸಭೆ – ವಿತತ – ವಿಸ್ತಾರವಾದ, ಅವ್ಯಯ – ನಾಶವಿಲ್ಲದ ಅಥವಾ ಕ್ಷಯವಿಲ್ಲದ, ಪ್ರತ್ಯಯ ನಂಬಿಕೆಯುಳ್ಳ, ಪ್ರಕೃತಿ ಸ್ವಭಾವದೊಡನೆ ಅಥವಾ ಪ್ರಜಗಳೊಡನೆ – ಮುಖ್ಯರಾಗಿ ಪ್ರಧಾನರೊಡನೆ, ನಿಯುಕ್ತಕಂ ಕೂಡಿದ್ದು – ೧ ವ್ಯಾಕರಣವು –

ಸಮಾಸಗಳಾದ – ಕಾರಕ ಸುಬಂತ ಪದಗಳು, ಕ್ರಿಯಾಪದ ತಿಜಂತ ಪದಗಳು ಇವುಗಳಿಂದ ಸಮಾಶ್ರಿತಂ – ಸೇರಲ್ಪಟ್ಟದ್ದು, ೨ ಸಭೆಸಮಸ್ತ – ಸಕಲಕ್ಕೂ, ಕಾರಕ ಉತ್ಪಾದಕವಾದ – ಕ್ರಿಯಾಪದ ಕರ್ಮಯೋಗದಿಂದ – ಆಗಮತ್ರಪ್ರಕಾರ – ಕ್ರಿಯಾಪಾದದಿಂದ, ಸಮಾಶ್ರಿತಂ – ಕೂಡಿದ್ದು, ನ್ಯಾಯದಂತೆ – ೧ ತರ್ಕಶಾಸ್ತ್ರವು – ಬಹು ಅನೇಕವಾದಗುಣ – ೨೪ ರೂಪಾದಿಗುಣಗಳು – ಕರ್ಮ ೫ ಭ್ರಮಣಾದಿ ಕರ್ಮಗಳು – ವಿಶೇಷ ನಿತ್ಯದ್ರವ್ಯಗಳಲ್ಲಿರುವ – ವ್ಯಾವರ್ತಕ ಧರ್ಮಗಳನಂತಗಳು, ಸಮವಾಯ – ಜಾತಿವ್ಯಕ್ತ್ಯಾದಿಗಳ ನಿತ್ಯ ಸಂಬಂಧವು, ಇವುಗಳಿಂದ ಸಮನ್ವಿತಂ – ಕೂಡಿದ್ದು ಮತ್ತು – ಸನಿದಾಂತ – ಅಬಾಧಿತಾರ್ಥದಿಂ ಕೂಡಿದ, ನಿರ್ಣಯ ನಿಶ್ಚಯ, ಪ್ರಯೋಜನಫಲಜಾತಿ – ಕಾರ್ಯಸಮಾದಿ ಜಾತಿಪದಾರ್ಥ – ಅಥವಾ ಪರಾಪತ್ರರಾದಿಸಕರ್ಮಾನ್ವಿತವು – ಇವುಗಳಿಂದ ರಂಜತಂ – ಪ್ರಕಾಶಗೊಳಿಸಲ್ಪಟ್ಟದ್ದು, ಕಣಾದಮತದ – ಪ್ರಾಚೀನಕರ್ತರಲ್ಲಿ ಸಿದ್ಧಾಂತನಿರ್ಣಯ ಪ್ರಯೋಜನಾದಿ ಷೋಡಶಪದಾರ್ಥಗಳು, ಗೌತಮನ್ಯಾಯಮತದ ನವೀನಕರ್ತರದಲ್ಲಿ ದ್ರವ್ಯಗುಣಕರ್ಮಾದಿ ಸಪ್ತಪದಾರ್ಥಗಳು, ವಿಚಾರಿಸಲ್ಪಟ್ಟಿವೆ. ೨ ಸಭೆ ಬಹುವಾದ – ಗುಣ – ಸುಗುಣಗಳ – ಕರ್ಮಸತ್ಕರ್ಮಗಳ – ವಿಶೇಷ ಪ್ರಭೇದಗಳ. ಸಮವಾಯು – ಸಮಷ್ಟಿಯೊಡನೆ. ಸಮನ್ವಿತಂ – ಕೂಡಿದ್ದು, ಅಥವಾ ಗುಣಕರ್ಮ ವಿಶೇಷಗಳುಳ್ಳವರ – ಗುಣಾಧಿಕರ ಕರ್ಮಶ್ರೇಷ್ಠರ. ಸಮವಾಯ – ಸಂಗದಿಂದ, ಸಮನ್ವಿತಂ ಕೂಡಿದ್ದು ಮತ್ತು ಸಿದ್ಧಾಂತ – ಪಶುಪತಿಯಾದ ಶಿವನೊಬ್ಬನೇ ಸರ್ವೋತ್ತಮನು. ಮಲಮಾಯಾಕರ್ಮಗಳೆಂಬ ಮೂರು ಪಾಶಗಳಿಂದ ಕಟ್ಟಲ್ಪಟ್ಟಿರುವ ಪಿಪೀಲಿಕಾದಿ ವಿಷ್ಣುಪರಿಯಂತರಾದ ಆತ್ಮಶುಗಳೂ – ಇವರಿಗೆ ಪಶುಪತಿ ಪ್ರಸಾದದಿಂದ ಪಾಶಮೋಚವೇ ಮೋಕ್ಷವು ಎಂಬುವದೇ ಸಿದ್ಧಾಂತವು, ಇದರ ನಿರ್ಣಯ– ನಿಶ್ಚಯದ ಪ್ರಯೋಜನದ – ಶಿವಪದಪ್ರಾಪ್ತಿಯುಳ್ಳ, ಜಾತಿ – ಮಾಹೇಶ್ವರತ್ವವೆಂಬ ಮುಕ್ತಿಮಾರ್ಗಜಾತಿ. ಇವುಗಳಿಂದ ರಂಜಿತವಾಗಿರುವದು – ಶೈವವಿಶಿಷ್ಟಾದ್ವೈತ ಸಿದ್ಧಾಂತ ನಿರ್ಣಯದ – ಪ್ರಯೋಜನವುಳ್ಳ, ಜಾತಿಯವರಾದ – ವೀರಶೈವರಿಂದ ಶಿವಸಭೆಯು ರಂಜಿತವಾಗಿಯಿರುವದು ವೇದಾಂತಸಂತಾನದಂತೆ – ಉಪನಿಷತ್ತ ಪರಂಪರೆಯ ಹಾಗೆ ೧ ಉಪನಿಷತ್ – ಕೈವಲ್ಯೋಪನಿಷತ್ತಿನಿಂದ – ಉದಿತ ಕೂಡಿದ – ಶಿವಸಂಕಲ್ಪ – ಬೋಧಾಯನೋಪದಿಷ್ಟನಿಂದ – ಶಿವಸಂಕಲ್ಪಾಧ್ಯಾಯವು – ಶ್ವೇತಾಶ್ವತರ – ಮೈತ್ರೇಯ ಪರಮಹಂಸಗಳೆಂಬ ಉಪನಿಷತ್ತುಗಳು – ಇವುಗಳಿಂದ ವಿಭ್ರಾಜಿತಂ – ವಿಶೇಷವಾಗಿ ಪ್ರಕಾಶಿಸುವದು, ಮತ್ತು, ಪ್ರಣವ, ಓಂಕಾರದಲ್ಲಿ, ರುಚಿ – ಅನುರಾಗದಿಂದ, ಸಮುದಿತ – ಅಭಿವ್ಯಕ್ತವಾದ, ಸಗುಣಬ್ರಹ್ಮ – ಸಾಕಾರ ತತ್ವಪ್ರತಿಪಾದ – ಶ್ರುತಿವಾಕ್ಯಗಳಿಂದ. ರಮಣೀಯಂ – ಮನೋಹರವಾಗಿರುವುದು, ೨ ಸಭೆಯು – ಕೈವಲ್ಯ – ಶಿವನಿರ್ವಾಣವೆಂಬ ಮುಕ್ತಿಯಾಗಬೇಕೆಂದು – ಉದಿತ ಹುಟ್ಟಿದ – ಶಿವಸಂಕಲ್ಪ – ಶುಭೇಚ್ಛೆಯುಳ್ಳ, ಶ್ವೇತಾಶ್ವತರಮುನಿ – ಮೈತ್ರೇಯಮುನಿ – ಪರಮಹಂಸರಾದ ಸನ್ಯಾಸಿಗಳು

ಇವರಿಂದ, ನಿರ್ಭ್ರಾಜಿತಂ ಮತ್ತು ಪ್ರಪ್ರಕೃಷ್ಟವಾದ ನವ – ಹೊಸತಾದ ರುಚಿ – ಕಾಂತಿಯೊಡನೆ, ಸಮುದಿತ – ಆವಿರ್ಭವಿಸಿದ, ಸಗುಣಬ್ರಹ್ಮ – ಸಕಲಾಹೇಮಕಮನೀಯ – ಗುಣಗಳಿಗೆ ಖನಿಯಾಗಿರುವ ಪರಮೇಶ್ವರನಿಂದ ರಮಣೀಯಂ – ಮನೋಜ್ಞವಾಗಿರುವದು, ಈವರೆಗೂ ಸಾಧಾರಣ ಧರ್ಮಬ್ಧಯದಿಂದುಪಮಾಲಂಕಾರವಾಗಿ ಸಭೆಯು ವರ್ಣಿಸಲ್ಪಟ್ಟಿತು – ಇನ್ನು ವಿರೋಧಾಭಾಸಾಲಂಕಾರದಿಂ ಸಭೆಯು ಬಣ್ಣಿಸುವುದು – ಅದೆಂತೆಂದರೆ – ೧ ವಿರೋಧಾರ್ಥ ಆದಿತ್ಯ ಸೂರ್ಯನ, ವಸು – ಕಿರಣಗಳ, ವಿಸರ – ಪ್ರಸರಣದಿಂದ (ಅಥವಾ ಗುಪಿನಿಂದ), ಅನ್ವಿತಮಾಗಿಯುಂ – ಕೂಡಿದ್ದಾದರೂ, ಅಸಿತ – ಕಪ್ಪಾದ, ತಮಃ ಕತ್ತಲೆಯಿಂದ, ಮಿಳಿತಂ ಕೂಡಿದ್ದು, – (ಬೆಳಕೂ ಕತ್ತಲೆಯೂ ಸೇರಿರುವದು ವಿರುದ್ಧವು); ೨ ಆದಿತ್ಯ – ಆದಿತ್ಯ ದೇವತೆಗಳ, ವಸು ವಸುದೇವತೆಗಳ, ವಿಸರ ಬೃಂದದಿಂ, ಅನ್ವಿತಂ– ಕೂಡಿದ್ದು, ಸಿತ–ತೀಕ್ಷ್ಣವಾದ, ತಮಃ–ತಮೋಗುಣದಿಂದ, ಮಿಳಿತಂ – ಕೂಡಿದ್ದು, ಅಲ್ಲವು ಎಂಬರ್ಥದಲ್ಲಿ ನನ್ ತತ್ಪುರಷ ಸಮಾಸವಾಗಿ ಆದಿಯೊಳಗೆ ಆಕಾರವು ನಂಜಾರ್ಥಕವಾಗಿದೆ. (ಸಭೆಯಲ್ಲಿ ದೇವರ್ಕಳಿರ್ಪರು – ತಮೋಗುಣವಿಲ್ಲವೆಂದರೆ ವಿರೋಧವಿಲ್ಲವು). ೧ ಸ್ಫುರಿತ – ತೋರುತ್ತಿರುವ, ಅಮಲ – ನಿರ್ಮಲವಾದ, ಕೀಲ – ಉರಿಗಳುಳ್ಳ, ಅಕ್ಷ – ಮೈಯುಳ್ಳ, ಅನಲ ಅಗ್ನಿಗಳ – ಅಳಿವೆ ಸಾಲುಗಳುಳ್ಳ, ದಾರು – ಮರಗಳಿಂದಲೂ, ಕರೇಣ–ಹೆಣ್ಣಾನೆಗಳಿಂದಲೂ, ಶಾಂತ–ಮನೋಹರವಾದ, ಸ್ಥಿತಿ – ಇರುವಿಕೆಯುಳ್ಳದ್ದು, ಅಥವಾ – ಸ್ಫುರಿತವಾದ ಅಮಲವಾದಕೀಲಗಳುಳ್ಳ ಅಕ್ಷದೊಳಗಿನ ಆನಲರ ಆಳಿಕ– ಸಾಲುಳ್ಳದ್ದು, ಎಂದರೆ ಮರದೊಳಗೆ ಬೆಂಕಿಯಡಗಿರುವುದೆಂದು ಭಾವವು. ಅಂತಾ ದಾರುಕ – ಮರಗಳು. ರೇಣುಕ – ಮಡಿಗಳು, ಇವುಗಳ ಅಂತಃಸ್ಥಿತಿ ಒಳದಿರ್ಕೆಯುಳ್ಳದ್ದು, ಆದರೂ (ಅಗ್ನಿಯಡಗಿರುವ ಮರಗಳುಳ್ಳದ್ದಾದರೂ) ಅಥವಾ ಅಶ್ಲಿಷ್ಟ ಸರಳಾರ್ಥವು. ಸ್ಫುರಿ– ತೋರುತ್ತಿರುವ – ಆಮಳಕೀ – ನೆಲ್ಲಿ, ಲಾಕ್ಷಾ – ಅರಗಿನ, ಜಾಲಾರಿ – ನಳ – ಜಂಬುದರ್ಭೆಗಳ – ಅಳಿಕ – ಸಾಲುಗಳು, ದಾರು – ಮರಗಳು, ಕರೇಣು, ಹೆಣ್ಣಾನೆಗಳು, – ನೀರು ಇವುಗಳು – ಅತಃಸ್ಥಿತಿ–ತನ್ನೊಳಗಿರುವಿಕೆಯುಳ್ಳದ್ದು ಆದರೂ, ಸದಾ – ಯಾವಾಗಲೂ, ಆಶ್ರಿತ – ಹೊಂದಲ್ಪಟ್ಟ – ಅವನ – ವನವಲ್ಲದೇ ಇರುವ – ಸ್ವಭಾವಮುಂ – ಸ್ವರೂಪವುಳ್ಳದ್ದು, ಮರಗಳಿದ್ದರೂ ವನವಲ್ಲವೆಂಬುವದು ವಿರೋಧವು). ೨ ಪರಿಹಾರವೆಂತೆನೆ – ಸಭೆಯು, ಸ್ಫುರಿತ–ಹೊಳೆಯುತ್ತಲಿರುವ – ಅಮಲ ನಿರ್ಮಲವಾದ – ಅಕ್ಷ – ಮೈಯುಳ್ಳ, ಅನಲ – ಅಗ್ನಿಯೇ, – ಅಳಿಕ – ಹಣೆಂಪಲ್ಲಿವುಳ್ಳವನು. (ಫಾಲಾಗ್ನಿಲೋಚನನಾದ ಶಿವನು). ಅಥವಾ ಸ್ಫುರಿತಾಮಲಕೀಲಾಕ್ಷನು – ಹೊಳೆಯುವಉರಿಗಣ್ಣನು – ಅನಲಾವಳಿಕ, ಬೆಂಕಿಯ ಹಣೆಯವನು – ದಾರುಕನು, ರೇಣುಕನು, ಈ ಪ್ರಮಥರ ಅಂತಃಸ್ಥಿತಿ – ಒಳಗಣ ನಿವಾಸವುಳ್ಳದ್ದು, ಸದಾ – ಯಾವಾಗಲೂ, ಆಶ್ರಿತ ಸೇರಿದವರ – ಅವನ ರಕ್ಷಣವೇ,

ಸ್ವಭಾವಂ ಶೀಲವಾಗಿವುಳ್ಳದ್ದು (ಶಿವನ ಸಭೆಯಲ್ಲಿ ಶಿವನೂ ಪ್ರಮಥರೂ ಇರುವರು. ಅಲ್ಲಿ ಸೇರಿದವರಿಗೆ ರಕ್ಷಣೆಯುಂಟಾಗುವುದೆಂದರೆ ವಿರೋಧವಿಲ್ಲವು). ೧ ಸುರಭಿ ಸಂಪಗೆಹೂವುಗಳ, ಗಂಧವಾಹ – ಗಾಳಿಯಿಂದ, ಬಂಧುರಮಾಗಿಯುಂ – ವ್ಯಾಪ್ತವಾದರೂ, ಸದಾ ಯಾವಾಗಲೂ, ಆನಂದಿ – ಸಂತೋಷವುಳ್ಳ ಭೃಂಗಿ, ಹೆಂಣುತುಂಬೆಯಿಂದ – ಅಚಿಂತಂ, ಚರಿಸಲ್ಪಟ್ಟದ್ದು – ಎಂದು ವಿರೋಧವು – ೨ ಸುರಭಿ ಪರಿಮಳವುಳ್ಳ, ಗಂಧವಾಹ – ಗಂಧವನ್ನು ವಹಿಸಿದ ಪ್ರಮಥರಿಂದಲೂ ಅಥವಾ ಗಾಳಿಯಿಂದ, ಬಂಧುರಂ, ಚಲುವಾಗಿರುವುದು. ಸದಾ – ಯಾವಾಗಲೂ, ನಂದೀಶ್ವರನಿಂದಲೂ ಭೃಂಗೀಶ್ವರನಿಂದಲೂ, ಅಂಚಿತಂಗಮಿಸಲ್ಪಟ್ಟದ್ದು ಪೂಜಿಸಲ್ಪಟ್ಟದ್ದು – ಶಿವಸಭೆ, ೧ ಭೀಮ – ವೃಕೋದರ, ಧರ್ಮ ಯುಧಿಷ್ಠಿರ, ಪ್ರವೀರ, ಮಹಾಶೂರರು – ಅರ್ಜುನಾದಿಗಳು – ಇವರ ಪದರಕ್ಷಣದಿಂದ – ಅಥವಾ ವ್ಯವಸಾಯದಿಂದ ಅಥವಾ ಸ್ಥಾನದಿಂದ, ಆಲಂಬಿತಂ, ಆಶ್ರಿತವಾಗಿಯೂ, ಗುರು – ದ್ರೋಣ, ಗಾಂಗೇಯ – ಗಂಗಾಪುತ್ರನಾದ – ಭೀಷ್ಮ, ಸುರ, ವಿಭವ, ಸುಸ್ವಭಾವನಾದ ಕರ್ಣ ಇವರಿಂದ ಅನ್ವಿತಂ, ಕೂಡದೆಂದು ವಿರೋಧವು. ೨ ಭೀಮ ಧರ್ಮ, ಶಿವಧರ್ಮವುಳ್ಳ ಪ್ರವೀರ ಮಾಹೇಶ್ವರರ, ಪದ, ಅಡಿಗಳಿಂದ, ಆಲಂಬಿತಂ – ಆಶ್ರಿತವು, ಗುರುದೊಡ್ಡ, ಗಾಂಗೇಯ, ಗಂಗಾಸಂಬಂಧನಾದ, ಎಂದರೆ ಗಂಗೆಯ ಶರವಣದಲ್ಲಿ ಹುಟ್ಟಿದ ಕುಮಾರಸ್ವಾಮಿಯ – ಅಥವಾ ಬಂಗಾರವುಳ್ಳ, ಸುರ, ದೇವತೆಗಳ – ವಿಭವ, ಐಶ್ವರ್ಯದಿಂದ, ಅನ್ವಿತಂ, ಕೂಡಿದ್ದು – ೧ ಸವಿಧ, ಸಮೀಪವನ್ನು ಗತ ಹೊಂದಿದ, ತಾಪ, ಉಷ್ಣಸಂತಾಪವುಳ್ಳ, ಸೂರ್ಯನಿಂದ – ಸಾಟೋಪಂ – ಸಿಟ್ಟುಳ್ಳದ್ದಾದರೂ ಅಥವಾ ಆಡಂಬರವುಳ್ಳದ್ದಾದರೂ – ಸಮುಜ್ವಲ, ಹೊಳೆಯುತ್ತಿರುವ ಸೌಮ್ಯ – ಬುಧ, ಅಂಗಾರಕ – ಕುಜ, ಕವಿ, ಶುಕ್ರರಿಂದ, ರಾಜಿಪಂ – ಪ್ರಕಾಶಿಸುವುದು (ಬಿಸಿಲಿನ ಆಟೋಪವಿರುವಾಗ ಬುಧಾಂಗಾರಕ ಶುಕ್ರಗ್ರಹಗಳು ಪ್ರಕಾಶಿಸುವುದು ಲೋಕವಿರುದ್ಧವು). ೨ ಸವಿಧ, ಸಮೀಪವನ್ನು, ಗತ ಹೊಂದಿದ, ತಾಪಸ ಋಷಿಗಳ, ಆಟೋಪಂ, ಆಡಂಬರವುಳ್ಳದ್ದು, ಸಮುಜ್ವಲ, ಬೆಳಗುತ್ತಿರುವ – ಬುಧಾಂಗಾರಕಶುಕ್ರಗ್ರಹಗಳಿಂದ ವಿರಾಜಿಸುವುದು ಸಭೆ ಹೀಗೆ ಇರ್ದುದು. ಅಂತುಮಲ್ಲದೆ –

ಚಂ॥ನಿಯತ ವಿನಾಯಕಾನ್ವಿತವಿದೆಂದೆನಿಸಿರ್ದುಮಹೀನಭೋಗಭಾ ।
ಗ್ಯಯುತಮುಪಾತ್ತಭಾನುವೆನೆ ಸಂದುಮಧಃಕೃತ ಭಾನುವಾ ಮಹಾ ॥
ಜಯಘನಲಕ್ಷ್ಮಿಯಾಗಿಯುಮಚಂಚಲಮಚ್ಯುತ ಶೋಭೆ ತನ್ನೊಳೊ ।
ಪ್ಪಿ ಯುಮಜಡೋದಯ ಸ್ಥಿತಿಯುಮೆಂದೆನಿಸಿರ್ದುದು ತತ್ಸಭಾಗೃಹಂ ॥

ಟೀಕೆ ॥ ಇದು, ೧ ನಿಯತ – ಕ್ಲಪ್ತವಾದ, ವಿನಾಯಕ – ವಿಘ್ನಕರ್ತರಿಂದ, ಅನ್ವಿತಂ – ಕೂಡಿದ್ದು, ಎಂದಿನಿಸಿರ್ದುಂ ಅಹೀನ – ಹೀನವಾಗದ, ಭೋಗ – ಸುಖದಿಂದಲೂ ಭಾಗ್ಯ – ಐಶ್ವರ್ಯದಿಂದಲೂ, ಯುತಂ – ಕೂಡಿದ್ದೆಂದು ವಿರೋಧವು. । ೨ ಸಭೆಯು,

ನಿಯತ – ಕ್ಲುಪ್ತನಾದ, ವಿನಾಯಕ ವಿಘ್ನೇಶ್ವರನಾದ – ಗಣಪತಿಯೊಡನೆ, ಅನ್ವಿತಂ – ಸಂಬಂಧಿಸಿರುವುದು, ಮತ್ತು ಅಹಿ – ಸರ್ಪಗಳ, ಇನ – ಒಡೆಯನಾದ ಶೇಷನಿಂದಲೂ, ಭೋಗ – ನಿತ್ಯಸುಖಾನುಭವದಿಂದಲೂ, ಭಾಗ್ಯ – ಷಡ್ಗುಣೈಶ್ವರ್ಯದಿಂದಲೂ, ಯುತಂ – ಯುಕ್ತವಾದುದೆಂದು ವಿರೋಧಪರಿಹಾರವು ॥ ೧. ಉದಾತ್ತಭಾನುವು ಹೊಂದಲ್ಪಟ್ಟ ಸೂರ್ಯನು, ಎನೆಸಂದುಂ – ಎಂಬಂದಿದುಸಲುವಳಿಯಾದರೂ, ಅಧಃಕೃತಭಾನುವು – ತಿರಸ್ಕರಿಲ್ಪಟ್ಟ ಕಿರಣಗಳುಳ್ಳದ್ದುದೆನೆ ವಿರೋಧವು । ೨ ಸಭೆಯು ಹೊಂದಲ್ಪಟ್ಟ ಕಿರಣ ಗಳುಳ್ಳದ್ದು ಸೂರ್ಯನುಳ್ಳದ್ದು ಅಧಃಕೃತಭಾನು ತನ್ನ ಕಿರಣಗಳಿಂದ ಕೀಳ್ಪಡಿಸಲ್ಪಟ್ಟ ಸೂರ್ಯನುಳ್ಳದ್ದು. (ಸೂರ್ಯನಿಗಿಂತಲೂ ಅತಿಶಯವಾಗಿ ಪ್ರಕಾಶಿಸುವುದು). ಎನಿಪ ಪೂರ್ವೋಕ್ತ ವಿರೋಧಕ್ಕೆ ಆಭಾಸವು ॥ ೧. ಮಹಾಘನಲಕ್ಷ್ಮೀದೇವಿಯಾಗಿಯೂ ಕೂಡ – ಅಚಂಚಲಂ – ಚಂಚಲವಿಲ್ಲದಿರುವಿಕೆಯೆಂದರೆ ವಿರೋಧವು. ೨. ಮಹಾಘನವಾದ ಜಯಲಕ್ಷ್ಮಿಯುಳ್ಳ ಸಭೆಯು ಚಂಚಲವಲ್ಲದೆ ಸ್ಥಿರವಾದದ್ದು ೧ ಅಚ್ಯುತಶೋಭೆ – ವಿಷ್ಣುವಿನ ಕಾಂತಿಯು ತನ್ನೊಳು – ಸಮುದ್ರದಲ್ಲಿ, ಒಪ್ಪಿಯುಂ ಒಪ್ಪಿದರೂ, ತಾನು ಅಜಡೋದಯಸ್ಥಿತಿ – ನೀರೂರುವ ಸ್ಥಿತಿಯಿಲ್ಲದ್ದು. (ವಿಷ್ಣುವಿರ್ಪ ಕಡಲಿನಲ್ಲಿ ನೀರಿಲ್ಲವೆಂದು ವಿರೋಧವು) ೨ ಅಚ್ಯುತ ಚ್ಯುತವಾಗದ (ಕ್ಷರಣವಿಲ್ಲದ – ಶಾಶ್ವತವಾದ), ಶೋಭ – ಕಾಂತಿಯು, ತನ್ನೊಳು ಸಭೆಯಲ್ಲಿ ಒಪ್ಪಿದೆ, ಅಜಡೋದಯಸ್ಥಿತಿ – ಜಡಉದಯ ಸ್ಥಿತಿಯಿಲ್ಲದ್ದು (ಮೂಢರು ಕಾಣಿಸುವ ಸ್ಥಳವಿಲ್ಲದ್ದು) ॥ ಎಂದು ತತ್ಸಭಾಗ್ಯಹಂ – ತತ್ – ಆಶಿವನ, ಸಭಾಮಂದಿರವು, ಎನಿಸಿರ್ದುದು – ಎನ್ನಿಸಿಕೊಂಡಿರ್ದುದು ॥ ಚಂಪಕಮಾಲಾವೃತ್ತ ॥ ೮೧ ॥

ಮತ್ತಮಲ್ಲಿ ಮನೋಜ್ಞಾತರರೆನಿಸಿ ನಿರುಪಮಾನವಿಭವಂ ಭತ್ತುಪುಟಮಿಟ್ಟ ಕುಂದಣದಿಂ ಕೋಟಿ ಮಡಿ ಮಿಗಿಲೆನಿಪ ನಿಜಕಳೇವರದಲಿ ಪುದಿದೆತ್ತಂ ಪತ್ತುಗೆಗೊಂಡು ಪಸರಿಸೆ ಗಜಾಜಿನಂ ತಳತಳಿಪ ಸುವರ್ಣಾಂಬರದಂತೆ ಶೋಭಿಸೆಯುಂ ತೊಡೆದ ಭಸಿತಲೇ ಪಂ ಕಾಶ್ಮೀರಾಂಗರಾಗದಂತೆ ರಂಜಿಸಿಯುಂ ಮಣಿಕಲಿತ ಫಣಿಕುಂಡಲಂ ಕನತ್ಕನಕ ಕರ್ಣಾಭರಣದಂತೆ ಕಮನೀಯಮಾಗಿಯುಂ ತೊಟ್ಟ ಕಪಾಲಮಾಲಾಭರಣಂ ಮಿಸುಪ ಮಿಸುನಿಯಾಭರಣದಂತೆ ತೊಳತೊಳಗಿಯುಂ. ನಿಜತನುಸಹಜಸುಗಂಧದಿಂ ಕಳ್ತು ಕೊರಲ ಗರಳಂ ತಳೆದ ಮೃಗಮದರೇಖೆಯೆನಿಸಿ ಮೆರೆಯೆಯುಂ, ಶಾಂತರಸ ಸಂಗಳಿಸಿದಳಿಕವಿಳಸಿತ ಶಿಖಿನಯನಂ ಗೈರಿಕಲಲಾಮಮನನುಕರಿಸೆಯುಂ ಕರಕೋಕನಮದದರುಣ ರುಚಿ ಮುಸುಂಕಿದಪಾಲಂ ಮಣಿಮಯ ಪಾತ್ರೆಯೊಪ್ಪಮನಪ್ಪು ಕೈದು ವಿರಾಜಿಸೆಯು, ಮನನ್ಯಸಾಮಾನ್ಯ ವಿಭವಮಂತ್ರೈಲೋಕ್ಯಮಂ ಪಿಂಗನಾಳ್ವ ಪರಮಸೌಭಾಗ್ಯ ಯೋಗ್ಯಲಕ್ಷಣಂ ತನ್ನೊರ್ಬನೊಳ್ನೆಲಸಿನಿಂದಂದೆಂಬ ಬಗೆಗಡರ್ಪಾಗಿ ಮಿಸುಪ ಖಂಡ ೨ ಪರಮೈಶ್ವರ್ಯ ವಿಭ್ರಾಜಿತಂ, ಸಕಲಕಲ್ಯಾಣ ಗುಣಮಣಿಗಣರತ್ನಾಕರಂ. ಜಗದಂಡಕರಂಡ ಖಂಡನಿರ್ಮಾಣ ಪ್ರವೀಣನುಂ । ತ್ರೈಗುಣ್ಯಾವಾಸನಾತೀತಂ,

ಪ್ರತ್ರಯೀಸೀಮಂತಿನೀ ಸೀಮಂತರತ್ನಾಭರಣಂ ನಿರತಿಶಯಮಮಗಳ ಕಳಾಕೇಳೀನಿವಾಸಂ ಶಕ್ತಿಲತಾಕಂದಳಿತೆ ಪ್ರಪಂಚಪಲ್ಲವಂ ಪ್ರಣವಪಂಕೇರುಹಪರಮಹಂಸಂ ಜನ್ಮಜರಾರುಜಾಮರಣವರ್ಜಿತವಿಮಳಕಳೇಬರಂ ಭಜಕಭವಾಮಯ ನಿವಾರಣ ಮಲಣಾಭಿಪಕ್ಷಕ್ತಮನುಂಭಕ್ತಜನ ಮನೋರಥ ಪಾರಿಜಾತನಪಾದ್ಯಂತ ನಿಮಿದಾರಹಿತಂ ಸರ್ವಜ್ಞಂ ನಿತ್ಯತೃಪ್ತಂ ಸ್ವತಂತ್ರನಲುಪ್ತಾನಂತಶಕ್ತಿಯುಕ್ತ ನದ್ವಿತೀಯವೈಭವಂ ಭೋಗಮೋಕ್ಷಪ್ರದಾಯಕ ನರಿಚಿನ್ನ ಸಚಿದಾನಂದಮಯಂ ಸಕಲಹೃದಯಗುಹಾನಿವಾಸ ನವಾಙ್ಮನಸಗೋಚರಂ ವಿಶ್ವಾದಿಕಂ ವಿಶ್ವಸೇವ್ಯನುಮಾಸಹಿತಂಮುಕ್ತಿಯ ಮುಗುಳಂತೆ ಚಿತ್ತಿನ ಬಿತ್ತಿನಂತೆ ಸತ್ಯದ ಸಾರದಂತೆ ನಿತ್ಯತೆಯ ನಿಲುವಿನಂತೆ ಆನಂದಸಾಗರದಂತೆ ಪರಿಪೂರ್ಣತೆಯ ಪರಮಸೀಮೆಯಂತೆ ಕರುಣೆಯ ಕಡಲಂತೆ ಧರ್ಮದ ಪೆರ್ಮೆಯಂತೆ ಸಿಂಗರದಸೀಮೆಯಂತೆ ಮಂಗಳದ ಮಹಿಮೆಯಂತೆ ಕಾಂತಿಯ ಕರುವಿನಂತೆ ಶಾಂತಿಯ ಸರ್ವಸ್ವದಂತೆ ಸರ್ವದೇವತಾ ಸಾರ್ವಭೌಮನನವಧಿವಿಭವನಿದ್ವಿತೀಯನೊಪ್ಪುತಿರ್ದನಂತುವಲ್ಲದೆ ‖ ೭ ‖

ಟೀಕೆ ‖ ಮತ್ತಂ, ಅಲ್ಲಿ – ಆ ಸಭಾಗೃಹದೊಳುವ, ಮನೋಜ್ಞತರಂ – ಅತ್ಯಂತ ರಮಣೀಯಂ ಎನಿಸಿ ನಿರುಪಮಾನವಿಭವಂಚಿತ್ತು – ಸಮಾನವಿಲ್ಲದ ಐಶ್ವರ್ಯವನ್ನು ಪಡೆದು ಪುಟಮಿಟ್ಟ ಕುಂದಣದಿಂ, ಅತ್ಯುತ್ತಮವಾದ ಶುದ್ಧ ಬಂಗಾರಕ್ಕಿಂತಲೂ, ಕೋಟಿಮಡಿ – ಕೋಟಿ ಪಾಲು ಮಿಗಿಲೆನಿಪ ಶ್ರೇಷ್ಠವೆನಿಸುವ, ನಿಜಕಳೇವರದಲಿ – ತನ್ನ ಮೂರ್ತಿಯಲ್ಲಿ, ಪುದಿದು – ತುಂಬಿ, ಎತ್ತಂ ಆವ ಕಡೆಯಲ್ಲಿಯೂ, ಪತ್ತುಗೊಂಡು – ಹೊದ್ದಿಕೊಂಡು, ಪಸರಿಸೆ – ಹರಡಿಕೊಳ್ಳಲಾಗಿ, ಗಜಾಜಿನಂ – ಆನೆಯತೊಗಲು ತಳತಳಿಪ – ಹೊಳಹೊಳೆವ, ಸುವರ್ಣಾಂಬರದಂತೆ – ಭಂಗಾರದ ದುಕೂಲದ ಹಾಗೆ, ಶೋಭಿಸೆಯುಂ – ಪ್ರಕಾಶಿಸುತ್ತಿರಲು (ಹಿರಣ್ಯವರ್ಣನಾದ ಶಿವನ ಮೈಯಲ್ಲಿ ಹೊದಿಕೆಯಾದ ಗಜಚರ್ಮವು ಶಿವಶರೀರಕಾಂತಿಯಿಂದ ತನ್ನ ಸಹಜವಾದ ಕಪ್ಪು ಬಣ್ಣವ ಕಾಣಿಸದ ಬಂಗಾರದ ಸರಿಗೆಯ ದುಪ್ಪಟ್ಟಿಯ ಹಾಗೆ ಹೊಳೆಯುತ್ತಿತ್ತು ಎಂಬುವುದರಿಂದ ಶಿವಮೂರ್ತಿಪ್ರಕಾಶವು ಲೋಕೋತ್ತರವಾದ ಅತಿಶಯವಂ ಪಡೆದಿರುವದೆಂದು ಭಾವವು) ಹಾಗೆಯೇ ತೊಡೆದ – ಪೂಸಿಕೊಂಡ, ಭಸಿತಲೇಪ – ವಿಭೂತಿಯರಂಗೆರಗಲು, ಕಾಶ್ಮೀರಾಂಗರಾಗದಂತೆ – ಕುಂಕುಮಕೇಸರದ ಗಂಧದ ಹಾಗೆ, ರಂಜಿಸೆಯುಂ – ಶೋಭಿಸಲು, ಮಣಿಕಲಿತ – ರತ್ನಗಳಿಂ ಕೂಡಿದ, ಫಣಿಕುಂಡಲಂ – ಹೆಡರೂಪವಾದ? ಕರ್ಣಾಭರಣವು, ಕನತ್ – ದೇದೀಪ್ಯಮಾನವಾದ, ಕರ್ಣಾಭರಣದಂತೆ – ಕಿವಿದೊಡವಿನೋಪಾದಿಯಲ್ಲಿ, ಕಮನೀಯಮಾಗಿಯುಂ – ಮಂಜುಳವಾಗಲು, ತೊಟ್ಟ – ಧರಿಸಿದ, ಕಪಾಲಮಾಲಾಭರಣಂ – ತಲೆಬುರುಡೆಗಳ ಸರದ ಭೂಷಣವು, ಮಿಸುಪ – ಬೆಳಗುತ್ತಿರುವ ಮಿಸುನಿಮಾಭರಣದಂತೆ – ಹೊನ್ನಿನೊಡವೆಯಂತೆ, ತೊಳದೊಳಗೆಯುಂ – ಕಳಕಳಿಸುತ್ತಿರಲು, ನಿಜತನು – ತನ್ನ

ಮೈಯ, ಸಹಜಸುಗಂಧದಿಂ ಸ್ವಾಭಾವಿಕ ಪರಿಮಳದಿಂದ, ತಳ್ತು – ವ್ಯಾಪ್ತವಾಗಿ, ಕೊರಲ ಗರಳಂ – ಗಂಟಲವಿಷವು ತಳೆದ ಮೃಗಮದ ರೇಖೆಯಂತೆ – ಧರಿಸಿದ ಕಸ್ತೂರಿಕಾಪತ್ರಕದಂತೆ ಎನಿಸಿ ಮೆರೆಯೆಯುಂ – ಬೆಳಗುತ್ತಿರಲು ಶಾಂತಿರಸ – ಉಪಶಮಾನಂದವು. ಸಂಗಳಿಸಿದ – ಕೂಡಿದ. ಅಲಿಕವಿಲಸಿತ – ಹಣೆಯಲ್ಲಿ ಹೊಳೆಯುವ. ಶಿಖಿನಯನಂ – ಉರಿಗಣ್ಣು. ಗೈರಿಕಲಲಾಮಂ – ಕಾವಿಯ ಬೊಟ್ಟನ್ನು. ಅನುಕರಿಸೆಯುಂ – ಹೋಲುತ್ತಿರಲು ಕರಕೋಕನದದ – ಹಸ್ತವೆಂಬ ಚೆನ್ನೈದಿಲೆಯ. ಅರುಣರುಚಿ – ಕೆಂಬೊಗರು ಮುಸುಕಿದ – ಮುಚ್ಚಿಕೊಂಡ. ಕಪಾಲಂ – ಬ್ರಹ್ಮನ ತಲೆಯೊಳ್. ಮಣಿಮಯ ಪಾತ್ರೆಯ – ರತ್ನಮಯ ಭಾಜನದ. ಒಪ್ಪಮಂ – ಸೊಬಗನ್ನು. ಅಪ್ಪುಗೆಯ್ದು – ಪಡೆದು. ವಿರಾಜಿಸೆಯುಂ – ಪ್ರಕಾಶಿಸುತ್ತಿರಲು. ಅನನ್ಯಸಾಮಾನ್ಯ – ಇತರರಿಗೆ ಸಾಧಾರಣವಲ್ಲದ. ವಿಭವಮಂ – ವ್ಯಾಪಕತ್ವವನ್ನು. ತ್ರೈಲೋಕ್ಯಮಂಪಿಡೆ ಆಳ್ವ – ಮೂರು ಲೋಕಗಳನ್ನೂ ಕೊರತೆಗೊಳ್ಳದೆ ಪಾಲಿಸುವ. ಪರಮಸೌಭಾಗ್ಯ – ಉತ್ಕೃಷ್ಟವಾದ ಐಶ್ವರ್ಯಕ್ಕೆ. ಯೋಗ್ಯಲಕ್ಷಣಂ – ತಕ್ಕ ಗುರ್ತು. ತನ್ನೋರ್ವನೋಳ್ – ತನ್ನೊಳಗೊಬ್ಬನಲ್ಲಿಯೇ. ನೆಲಸಿ ಸಂದುದೆಂಬ – ನಿಂತುಸಲುವಳಿಯಾಗಿದೆಯೆಂಬ. ಬಗೆಗೆ – ರೀತಿಗೆ. ಆಡರ್ಪಾಗಿ – ಆಶ್ರಯಳಾಗಿ. ಮಿಸುಪ – ಪ್ರಕಾಶಿಸುವ. ಅಖಂಡ – ಅವಿಚ್ಛಿನ್ನವಾದ. ಪರಮೈಶ್ವರ್ಯ – ಸರ್ವೋತ್ತಮಪ್ರಭಾವದಿಂದ. ವಿಭ್ರಾಜಿತಂ – ವಿಶೇಷವಾಗಿ ಬೆಳಗುವನಾಗಿಯೂ ಸಕಲಕಲ್ಯಾಣಗುಣ – ಸಮಸ್ತ ಶಿವಧರ್ಮಗಳೆಂಬ. ಮಣಿಗಣ – ರತ್ನರಾಶಿಗಳಿಗೆ. ರತ್ನಾಕರಂ – ಕಡಲಾಗಿರುವನಾಗಿಯೂ. ಜಗದಂಡಕರಂಡ – ಬ್ರಹ್ಮಾಂಡವೆಂಬ ಬುರುಡೆಯ. ಖಂಡ – ಓಡುಗಳ. ನಿರ್ಮಾಣ – ಸೃಷ್ಟಿಯಲ್ಲಿ. ಪ್ರವೀಣನುಂ – ಜಾಣನಾಗಿಯೂ. ತ್ರೈಗುಣ್ಯವಾಸನಾ – ಸತ್ವರಸ್ತಮೋ ಗುಣಗಳೆಂಬ ಸಂಸ್ಕಾರಗಳನ್ನು. ಅತೀತಂ – ಮೀರಿದವನಾಗಿಯೂ. ತ್ರಯೀಸೀಮಂತಿನೀ – ವೇದತ್ರಯವೆಂಬ ಹೆಂಗಸಿನ. ಸೀಮಂತ – ಬೈತಲೆಗೆ. ರತ್ನಾಭರಣಂ – ಮಣಿಭೂಷಣಪ್ರಾಯನಾಗಿಯೂ – ನಿರತಿಶಯ – ಆವುದಕ್ಕಿಂತಲೂ ಅತಿಶಯ ಎಲ್ಲವೂ ಅಂತಾದ್ದ ಮಂಗಳಕಳಾ – ಭದ್ರವರ್ಚಸ್ಸಿಗೆ. ಕೇಳೀನಿವಾಸಂ ಕ್ರೀಡಾಗೃಹಪ್ರಾಯನಾಗಿಯೂ. ಶಕ್ತಿಲತಾ – ಮಾಯಾಶಕ್ತಿಯೆಂಬ ಬಳ್ಳಿಯ. ಕಂದಳಿತ – ಚಿಗುರಿದ. ಪ್ರಪಂಚ – ಜಗತ್ತೆಂಬ. ಪಲ್ಲವಂ – ಕೊನರುಳ್ಳವನಾಗಿಯೂ. ಪ್ರಣವಪಂಕೇರುಹ – ಓಂಕಾರವೆಂಬತಾವರೆಗೆ. ಪರಮಹಂಸಂ – ಉತ್ಕೃಷ್ಟವಾದ ಅಂಚೆವಕ್ಕಿಯೆಂಬ. ಅಪರಮಹಂಸಂ – ಪರಮಾತ್ಮಸ್ವರೂಪನಾಗಿಯೂ. ಜನ್ಮ – ಹುಟ್ಟುವಿಕೆ. ಜರಾ – ಮುದಿತನ. ರುಜಾ – ರೋಗ. ಮರಣ – ಸಾವುಗಳಿಂದ. ವರ್ಜಿತ – ಬಿಡಲ್ಪಟ್ಟ. ನಿಮಲ – ಶುದ್ಧವಾದ ಕಳೇಬರಂ – ಮೂರ್ತಿಯುಳ್ಳವನಾಗಿಯೂ. ಭಜಕ – ಭಕ್ತರ – ಭವಾಮಯ – ಸಂಸಾರವೆಂಬರೋಗದ. ನಿವಾರಣ – ಪರಿಹಾರದಲ್ಲಿ

(ಮುಂದುವರಿಯುವುದು)

# ವಚನ ಸಾಹಿತ್ಯದಲ್ಲಿ ನೈತಿಕತೆ – ಒಂದು ಅವಲೋಕನ

ಎಚ್.ಎಸ್. ಸಿದ್ಧಗಂಗಪ್ಪ

(ಹಿಂದಿನ ಸಂಚಿಕೆಯಿಂದ)

ಆದಯ್ಯ ಒಬ್ಬ ಮಹಾಶರಣ. ವ್ಯಕ್ತಿ ನೀತಿವಂತನಾದರೆ ಅವನ ಬದುಕು ಇತರರಿಗೆ ಸಹ್ಯವಾಗುತ್ತದೆ ಎಂಬುದನ್ನು ತನ್ನ ವಚನದಲ್ಲಿ ಸರಳವಾಗಿ, ನೇರವಾಗಿ ಪ್ರಸ್ತಾಪಿಸಿದ್ದಾನೆ.

ಕಾಮದ ಸೀಮೆಯ ಕಳೆಯದನ್ನಕ್ಕ
ಕೋಪದ ಕೂಪ ಹೂಳದನ್ನಕ್ಕ
ಲೋಭದ ಲಾಭ ಕ್ಷಯಿಸದನ್ನಕ್ಕ
ಮೋಹದ ಗಾಯನಂಬದನ್ನಕ್ಕ
ಮದದುನ್ಮದ ಕೆದರನ್ನದಕ್ಕ
ಮಚ್ಚರದ ಕೆಚ್ಚು ಬಿಚ್ಚದನ್ನಕ್ಕ
ಸೌರಾಷ್ಟ್ರ ಸೋಮೇಶ್ವರಲಿಂಗವೆಂತು ಸಾಧ್ಯಪ್ಪುದಯ್ಯಾ?

ಇವನ ವಚನದ ಕೆಲವು ವಿಚಾರಗಳು ಸದಾಕಾಲ ಚಿಂತನೆಗೆ ಒಳಪಡುವಂತಹವು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವು ಮನುಷ್ಯನ ಆರು ವೈರಿಗಳೆಂದು ನಮ್ಮ ಸಂಸ್ಕೃತಿ ಮೊದಲಿನಿಂದಲೂ ನಂಬಿಕೊಂಡು ಬಂದಿದೆ. ಆದರೆ ಶರಣ ಸಂಸ್ಕೃತಿ ಇದಕ್ಕೆ ಹೆಚ್ಚು ಒತ್ತು ನೀಡಿತು. ಆದಯ್ಯ ಅದನ್ನೇ ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ. ಅವನ ಪ್ರಕಾರ ಈ ಅರಿಷಡ್ವರ್ಗಗಳನ್ನು ಗೆಲ್ಲದೆ ಸೌರಾಷ್ಟ್ರ ಸೋಮೇಶ್ವರ ಲಿಂಗದ ದರ್ಶನ ಸಾಧ್ಯವಿಲ್ಲವೆನ್ನುತ್ತಾನೆ.

ಆದಯ್ಯ ತನ್ನ ಮತ್ತೊಂದು ವಚನದಲ್ಲಿ ಯಾವುದು ಅನೈತಿಕತೆ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ. ಅವನ ಪ್ರಕಾರ –

ಹಣ ಬಂಗಾರ ವಸ್ತ್ರ ಕಪ್ಪಡ
ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು
ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ
ಕೊಟ್ಟಡೆ ಮುಟ್ಟದ ಭಾಷೆ
ಪರಧನ ಪರಸತಿಗೆ ಅಳುಪದ ಭಾಷೆ
ಇಂತಿವಕಳುಪಿದೆನಾದಡೆ ಸೌರಾಷ್ಟ್ರ ಸೋಮೇಶ್ವರಾ
ನಿಮ್ಮಾಣೆ ನಿಮ್ಮ ಪ್ರಮಥರಾಣೆ

ಎಂದಿದ್ದಾನೆ. ಈ ವಚನ ಇಂದಿಗೂ ಪ್ರಸ್ತುತವಾಗುತ್ತದೆ. ದಿನಬೆಳಗಾದರೆ ಪತ್ರಿಕೆಗಳಲ್ಲಿ, ದೂರದರ್ಶನ, ರೇಡಿಯೋಗಳಲ್ಲಿ ಪ್ರಕಟವಾಗುವ ಪ್ರಸಾರವಾಗುವ ಸುದ್ದಿಗಳಲ್ಲಿ ಬಹುಪಾಲು ಲೂಟಿ, ಭ್ರಷ್ಟಾಚಾರ, ಕೊಲೆ, ಅನ್ಯಾಯ, ಮೋಸ ಇವೇ ಸ್ಥಳವನ್ನು ಆಕ್ರಮಿಸಿಕೊಂಡಿವೆ. ಇದು ನಿಜಕ್ಕೂ ಆರೋಗ್ಯಕರ ಲಕ್ಷಣವಲ್ಲ. ಈ ಪ್ರವೃತ್ತಿ ಹೀಗೆಯೇ ಮುಂದುವರಿದರೆ ಸಮಾಜದಲ್ಲಿ ಅಶಾಂತಿ ಬೇರೂರುತ್ತದೆ. ಇದು ನಮ್ಮ ಸಂಸ್ಕೃತಿಯ ಅವನತಿಗೆ ನಾಂದಿಯಾಗುತ್ತದೆ. ಇದಕ್ಕೆಲ್ಲ ಪರಿಹಾರವೆಂದರೆ ಶರಣರ ಸಂದೇಶಗಳ ಅನುಪಾಲನೆ. ಹಣ, ಬಂಗಾರ, ವಸ್ತ್ರ, ಒಡವೆಗಳು ನಾವು ತಿರುಗಾಡುವ ದಾರಿಯಲ್ಲಿ ಬಿದ್ದಿದ್ದರೂ ಅವುಗಳನ್ನು ಕಂಡರೂ ಬಯಸಿ ಎತ್ತಿಕೊಳ್ಳಲಾರೆ ಎಂದು ನಡೆದು ತೋರಿಸಿದ, ಪರಧನ, ಪರಸತಿಗೆ ಬಯಸುವುದಿಲ್ಲವೆಂದು ಹೇಳಿದ ಶರಣರು ನಮಗೆ ಆದರ್ಶವಾಗಬೇಕು.

ಸೌಜನ್ಯ, ವಿನಯವಂತಿಕೆಯನ್ನು ಶರಣರು ತಮ್ಮ ದಿನನಿತ್ಯದ ನಡೆನುಡಿಗಳಲ್ಲಿ ಆಚರಿಸಿ ತೋರಿಸಿದರು. ಅವರಲ್ಲಿ ಸದಾ ನೈತಿಕ ಪ್ರಜ್ಞೆ ಜಾಗೃತವಾಗಿರುತ್ತಿತ್ತು. ಬಸವಣ್ಣನವರ ಈ ವಚನ ಮನೆಗೆ ಬಂದ ಅತಿಥಿಗಳು, ಅವರು ಯಾರೇ ಆಗಿರಲಿ, ಅವರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಮಾರ್ಗದರ್ಶನ ನೀಡುತ್ತದೆ.

> ಏನು ಬಂದಿರಿ ಹದುಳವಿದ್ದಿರಿ ಎಂದರೆ
> ನಿಮ್ಮೈಸಿರಿ ಹಾರಿಹೋಹುದೆ?
> ಕುಳ್ಳಿರಿ ಎಂದರೆ ನೆಲ ಕುಳಿಹೋಹುದೆ?
> ಒಡನೆ ನುಡಿದಡೆ ಸಿರಿ ಹೊಟ್ಟೆಯೊಡೆವುದೆ
> ಕೊಡಲಿಲ್ಲದ್ದರೊಂದು ಗುಣವಿಲ್ಲದಿದ್ದಡೆ
> ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವರು

ಈ ವಚನದಲ್ಲಿನ ದಿವ್ಯ ಸಂದೇಶವನ್ನು ಅರ್ಥ ಮಾಡಿಕೊಂಡು ಅನುಸರಿಸಿದರೆ ಮಾನವ–ಮಾನವರ ನಡುವಣ ಪ್ರೀತಿ ವಿಶ್ವಾಸದ ಸಂಬಂಧ ಮತ್ತಷ್ಟು ನಿಕಟವಾಗುತ್ತದೆ. ಆದರೆ ಹಣ, ಅಧಿಕಾರ, ಅಹಂಕಾರ ಇವುಗಳ ಮದದಿಂದ ಪ್ರೀತಿ, ಸೌಜನ್ಯವನ್ನು ಮರೆತಿರುವವರನ್ನು ಕಂಡ ಬಸವಣ್ಣನವರು ನಯವಾಗಿಯೇ ಛೇಡಿಸಿದ್ದಾರೆ. ಕೊಡುವ ಔದಾರ್ಯವಿಲ್ಲದಿದ್ದರೂ ನುಡಿಯುವ ಸೌಜನ್ಯವಾದರೂ ಬೇಡವೆ ಎಂದು ಪ್ರಶ್ನಿಸುತ್ತಾರೆ. ಅಧಿಕಾರ, ಐಶ್ವರ್ಯ ನೀರಿನ ಮೇಲಿನ ಗುಳ್ಳೆಯಷ್ಟೇ ನಶ್ವರ ಎಂಬುದನ್ನು ಪರೋಕ್ಷವಾಗಿ ವ್ಯಕ್ತಪಡಿಸಿ ಸನ್ಮಾರ್ಗದಲ್ಲಿ ನಡೆಯುವಂತೆ ಉಪದೇಶಿಸಿದ್ದಾರೆ.

ಜಗತ್ತಿನಲ್ಲಿರುವ ಸರ್ವಧರ್ಮಗಳ ಮೂಲ ಆಶಯ ಸುಭದ್ರವಾದ ನೈತಿಕ ನೆಲೆಗಟ್ಟು. 'ಅಹಿಂಸೆ' ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ ಈ ಮೊದಲಾದ ಮಾನವೀಯ ಉದಾತ್ತ ಗುಣಗಳನ್ನು ಬಹುಶಃ ಎಲ್ಲ ಧರ್ಮಗಳೂ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಪಾದಿಸುವುದರ ಜೊತೆಗೆ ಆಚರಿಸುತ್ತಾ ಬಂದಿವೆ. ಪ್ರತಿಯೊಂದು ಧರ್ಮವೂ

ವಿಶ್ವಕ್ಕೆ ಬೆಳಕು ನೀಡಬೇಕಾದರೆ, ತನ್ನ ಧರ್ಮದ ತಾತ್ವಿಕ ವಿವೇಚನೆ, ಧಾರ್ಮಿಕ ಆಚರಣೆ, ನೈತಿಕ ನಿಯಮಗಳೆಂಬ ಮೂರು ಅಗತ್ಯಗಳನ್ನು ಗಮನಿಸಬೇಕಾಗುತ್ತದೆ. ಬೌದ್ಧರಲ್ಲಿ ಪಂಚಶೀಲಗಳಾಗಿ, ಜೈನರಲ್ಲಿ ಪಂಚಾಣುವ್ರತಗಳಾಗಿ, ವೀರಶೈವರಲ್ಲಿ ಪಂಚಾಚಾರಗಳಾಗಿ, ವೈದಿಕರಲ್ಲಿ ವ್ರತಗಳಾಗಿ ನೈತಿಕತೆಯು ಹಾಸುಹೊಕ್ಕಾಗಿವೆ.

ಶರಣಧರ್ಮ ತನ್ನ ಆಚರಣೆಯಲ್ಲಿ ನೀತಿಗೆ ಉನ್ನತ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ನೈತಿಕ ನಿಷ್ಠೆಯಿಲ್ಲದ ಧರ್ಮ ತುಂಬಾ ಅಪಾಯಕಾರಿ ಎಂಬುದು ಶರಣರ ನಂಬಿಕೆಯಾಗಿತ್ತು. ಇಂದಿನ ಆಧುನಿಕ ಸಮಾಜದಲ್ಲಿ ಕಂಡುಬರುತ್ತಿರುವ ಏರುಪೇರುಗಳ ಪ್ರತ್ಯಕ್ಷ ದರ್ಶನ ನಮ್ಮ ಕಣ್ಮುಂದೆ ಇದೆ. ದಿನನಿತ್ಯದ ಬದುಕಿನಲ್ಲಿ ಉಂಟಾಗುತ್ತಿರುವ ನಿರಾಶೆ, ನಿರುತ್ಸಾಹ ಇವುಗಳನ್ನು ಮೆಟ್ಟಿ ಮುಂದುವರಿಯಲು ಮಾರ್ಗದರ್ಶನ ಬೇಕಾಗುತ್ತದೆ. ಕೆಲವು ಶಾಶ್ವತ ಮೌಲ್ಯಗಳನ್ನವಲಂಬಿಸಿ ಜೀವನದಲ್ಲಿ ಅಚಲವಾದ ಗುರಿ ಕಂಡುಕೊಳ್ಳುವ ಪ್ರಯತ್ನ ಧರ್ಮ ಮತ್ತು ನೀತಿಗೆ ಸಂಬಂಧ ಕಲ್ಪಿಸಿವೆ.

ಶರಣರು ಬೋಧಿಸಿದುದು ಎಲ್ಲರಿಗೂ ಸಾಧ್ಯವಾಗಬಹುದಾದ ವ್ಯಾವಹಾರಿಕ ಧರ್ಮ. ಅದು ನೈತಿಕ ಧರ್ಮ. ಸಿದ್ಧಾಂತಗಳ ಸಾರ್ಥಕತೆ ಅವು ಆಚಾರದಲ್ಲಿ ಪರ್ಯವಸಾನವಾದಾಗ ಮಾತ್ರ. ಇದೇ ಅರ್ಥದಲ್ಲಿ ಷಟ್‌ಸ್ಥಲ, ಅಷ್ಟಾವರಣಗಳನ್ನು ಆಚಾರಗಳೆಂದೇ ಕರೆದಿರುವವರು. ಆಚಾರದೊಡನೆ ವಿಚಾರವೂ ಸೇರಿಕೊಂಡಾಗ ಅದು ಅಂತರಂಗದ ಅರಿವಾಗಿ ಪರಿಪಕ್ವಗೊಳ್ಳುತ್ತದೆ. ಭಕ್ತಿಭಂಡಾರಿ ಬಸವಣ್ಣನವರು ಹೇಳುವಂತೆ :

> ಭಕ್ತಿ ಎಂಬ ಪೃಥ್ವಿಯ ಮೇಲೆ
> ಗುರುವೆಂಬ ಬೀಜವಂಕುರಿಸಿ ಲಿಂಗವೆಂಬ ಎಲೆಯಾಯಿತ್ತು.
> ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು.
> ಆಚಾರವೆಂಬ ಕಾಯಾಯಿತ್ತು ನಿಷ್ಪತ್ತಿಯೆಂಬ ಹಣ್ಣಾಯಿತು

ಸಾಧಕನ ಜೀವನ ಬೆಳೆದು ಬರುವ ಪರಿ ಇದು. ಶರಣರ ಸಾಧನೆಗೆ ನೈತಿಕ ಆಧಾರಸ್ತಂಭಗಳೆನಿಸಿದ ಪಂಚಾಚಾರಗಳು ಮೂಲತಃ ನೈತಿಕ ನಿಯಮಗಳನ್ನು ಕುರಿತವು. ಇವುಗಳ ಸ್ವರೂಪವನ್ನು ಚನ್ನಬಸವಣ್ಣ :

> ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ
> ಪಂಚಾಚಾರದ ಆಚರಣೆಯಂತೆಂದಡೆ
> ಲಿಂಗವಲ್ಲದೆ ಅನ್ಯವರಿಯದಿಹುದೇ ಲಿಂಗಾಚಾರ
> ಸಜ್ಜನ ಕಾಯಕದಲ್ಲಿ ತಂದು ಗುರುಲಿಂಗ ಜಂಗಮಕ್ಕೆ ನೀಡಿ
> ಸತ್ಯಶುದ್ಧನಾಗಿರುವುದೇ ಸದಾಚಾರ
> ಶಿವಭಕ್ತರಲ್ಲಿ ಕುಲಗೋತ್ರ ಜಾತಿ ವರ್ಣಾಶ್ರಮವನರಸದೆ
> ಅವರೊಕ್ಕುದ ಕೊಂಬುದೇ ಶಿವಾಚಾರ.

ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ
ಶಿವಶರಣರೇ ಹಿರಿಯರಾಗಿ ತಾನೇ ಕಿರಿಯನಾಗಿ
ಭಯಭಕ್ತಿಯಿಂದ ಆಚರಿಸುವ ಭೃತ್ಯಾಚಾರ
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ ಸಲಹಯ್ಯ
ಪ್ರಭುವೇ ಕೂಡಲಚನ್ನಸಂಗಮದೇವಾ

ಪಂಚಾಚಾರಗಳು ಶರಣ ಸಿದ್ಧಾಂತಕ್ಕೆ ನೈತಿಕ ತಳಹದಿಯನ್ನು ಹಾಕಿಕೊಟ್ಟಿವೆ. ಈ ಐದು ಆಚರಣೆಗಳ ಮೂಲಕ ಶರಣರು ಪ್ರತಿಪಾದಿಸಿದ ನೈತಿಕನಿಷ್ಠೆಯು ಅವರು ಜೀವನವನ್ನು ಕಂಡ ಪೂರ್ಣದೃಷ್ಟಿಯ ಸಂಕೇತ. ವಿಶ್ವಕಲ್ಯಾಣದತ್ತ ಗಮನವಿಟ್ಟು ಸಮಾನ ತತ್ವಗಳನ್ನು ಬಿತ್ತರಿಸುವ ಪಂಚಾಚಾರಗಳು ವಿಶ್ವಹಿತಭಾವನೆಯನ್ನು ಹೊಂದಿವೆ.

ಲಿಂಗಾಂಗಸಾಮರಸ್ಯ ಶರಣಧರ್ಮ ಸಾಧನೆಯ ಪರಮಸಿದ್ಧಿ. ಜ್ಞಾನಯೋಗಿ ಚನ್ನಬಸವಣ್ಣ ನುಡಿದಿರುವಂತೆ "ಲಿಂಗವಲ್ಲದೇ ಅನ್ಯವನು ಅರಿಯದಿಹುದೆ ಲಿಂಗಾಚಾರ" 'ಲಿಂಗಾಚಾರ' ಎನ್ನುವುದು ಧಾರ್ಮಿಕ ಸಾಧನೆಯ ಪ್ರಾರಂಭದಿಂದ ಹಿಡಿದು ಸಾಧನೆಯ ಶಿಖರದವರೆಗೆ ಇಷ್ಟಲಿಂಗವು ಸಾಧಕನ ಪಾಲಿನ ಅವಿಭಾಜ್ಯ ಅಂಗವಾಗಿದೆ. ಇದರಿಂದ ಶರಣರು ವೈಯಕ್ತಿಕ ವಿಕಾಸದ ಜೊತೆ ಸಾಮಾಜಿಕ ಸಮಾನತೆಯನ್ನುಜಾರಿಗೆ ತಂದರು. ವರ್ಗ, ವರ್ಣ, ಜಾತಿ, ಮತ ಪಂಥಗಳ ತಾರತಮ್ಯವನ್ನು ಬೇರು ಸಹಿತ ಕಿತ್ತೆಸೆದು ಲಿಂಗದ ಕಳೆ, ಲಿಂಗದ ನುಡಿ, ಲಿಂಗದ ನೋಟ, ಲಿಂಗದ ಕೂಟ ಸಮನಿಸುವುದೇ ಲಿಂಗಾಚಾರ. ಇದರ ಪರಿಣಾಮವಾಗಿ ಸಮಾಜದ ದೃಷ್ಟಿಯಲ್ಲಿ ಅಸ್ಪೃಶ್ಯರೆನಿಸಿದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಹರಳಯ್ಯ, ಧೂಳಯ್ಯ, ಶಿವನಾಗಮಯ್ಯ ಮುಂತಾದವರೆಲ್ಲರೂ ಶಿವಶರಣರಾದರು. ಇವರೆಲ್ಲ ವೈಯಕ್ತಿಕ ಸಾಧನೆಯ ಮೂಲಕ ಧಾರ್ಮಿಕ ಸಮಾನತೆಯನ್ನು ಪಡೆದರು. ಇಷ್ಟಲಿಂಗವೆಂಬ ಅರುಹಿನ ಕುರುಹನ್ನು ಹಿಡಿದು ಸಾಮಾಜಿಕ ಮತ್ತು ಧಾರ್ಮಿಕ ಸಮತೆಯಲ್ಲಿ, ನಿಯಮಪಾಲನೆಯಲ್ಲಿ ಸಂಪೂರ್ಣ ಯಶಸ್ವಿಯಾದರು.

ಲಿಂಗಾಚಾರದ ಮುಂದಿನ ಮೆಟ್ಟಿಲು ಸದಾಚಾರ, ಪರಿಶುದ್ಧ ಸಾತ್ವಿಕ ಜೀವನಕ್ಕೆ ಆಧಾರಭೂತವಾದದ್ದು, ಲಿಂಗಾಚಾರದ ಸಾರ್ಥಕತೆ, ನೈತಿಕ ಜೀವನಕ್ಕೆ ಕೊಟ್ಟ ಮಹತ್ವ ವ್ಯಕ್ತವಾಗುವುದು ಸದಾಚಾರದಲ್ಲಿ.

ಕಾಮವುಳ್ಳವಂಗೆ ಲಿಂಗದ ಕ್ಷೇಮವಿನ್ನೆಲ್ಲಿಯದೋ
ಕ್ರೋಧವುಳ್ಳವಂಗೆ ಜಂಗಮದ ಪ್ರೇಮವಿನ್ನೆಲ್ಲಿಯದೋ
ಮದಮತ್ಸರವುಳ್ಳವಂಗೆ ಪ್ರಸಾದದ ಪ್ರೇಮವಿನ್ನೆಲ್ಲಿಯದೋ
ಇಂತೀ ಗುಣವಂತರಲ್ಲದೆ ಸಹಜ ಸದ್ಭಕ್ತಿ ನೆಲೆಗೊಳ್ಳದಯ್ಯಾ

ಶರಣರ ಈ ನುಡಿಗಳಲ್ಲಿ ಲಿಂಗಾಚಾರವು ನೈತಿಕ ಜೀವನದ ನೆಲೆಗಟ್ಟಿನ ಮೇಲೆ ದೃಢವಾಗಿ ನಿಲ್ಲಬೇಕೆಂಬ ಧ್ವನಿ ಇದೆ. ಕಾಮ, ಕ್ರೋಧ, ಮದ ಮತ್ಸರಗಳೆಂಬ ದುರ್ಗುಣಗಳು ಸಾಧಕನ ಲಿಂಗಭಕ್ತಿಗೆ ಸಂಚಕಾರ ತರುವಂತಹವು ಎಂಬುದನ್ನು

ಸೂಚ್ಯವಾಗಿ ಹೇಳಲಾಗಿದೆ. ಇಂತಹ ದುರ್ಗುಣಗಳಿಂದ ದೂರವಿದ್ದು ಲಿಂಗಪೂಜೆಯಲ್ಲಿ ನಿರತರಾಗಬೇಕೆಂದು ಅಕ್ಕಮಹಾದೇವಿ ಭಾವಪರವಶಳಾಗಿ ಹೇಳುತ್ತಾಳೆ.

ಸಜ್ಜನಳಾಗಿ ಮಜ್ಜನಕ್ಕೆರೆವೆ
ಶಾಂತಳಾಗಿ ಪೂಜೆಯ ಮಾಡುವೆ
ಸಮರತಿಯಿಂದ ನಿಮ್ಮ ಹಾಡುವೆ

ಎಂದು ದಿಟ್ಟ ಪ್ರತಿಜ್ಞೆ ಮಾಡಿದ್ದಾಳೆ. ಆಕೆಯ ನೈತಿಕ ಜೀವನನಿಷ್ಠೆ ಈ ವಚನದಲ್ಲಿ ತುಂಬ ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಂಡಿದೆ.

ಸತ್ಯಶುದ್ಧಶೀಲ ಎಂಬುದು ಸದಾಚಾರದಲ್ಲಿ ಕಂಡುಬರುವ ಮತ್ತೊಂದು ನಿಷ್ಠೆ. ಸತ್ಯವೇ ಶಿವನ ಆವಾಸಸ್ಥಾನ ಎಂದು ಭಾವಿಸಿದ್ದ ಶರಣರು "ಸತ್ಯದ ಮನೆಯಲ್ಲಿ ಶಿವನಿರ್ಪನಲ್ಲದೆ ಅಸತ್ಯದ ಮನೆಯಲ್ಲಿ ಶಿವನಿರ್ಪನೆ" ಎಂದು ಹೇಳುವ ಮೂಲಕ ಸತ್ಯಕ್ಕೆ ಮಹತ್ವದ ಸ್ಥಾನ ನೀಡಿದ್ದಾರೆ. ಇಂಥ ಸಂದರ್ಭದಲ್ಲಿ 'ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ಪ ಲಿಂಗ ಘಟಸರ್ಪ'ವಾಗುವುದೆಂಬ ನೈತಿಕ ನಿಷ್ಠೆ ಅವರ ಮನದಲ್ಲಿ ನೆಲೆಗೊಂಡಿತ್ತು.

ಲಿಂಗಾಚಾರ, ಸದಾಚಾರಗಳು ಸಾಧಕರನ್ನು ಭಕ್ತಿಸ್ಥಳಕ್ಕೆ ಅರ್ಹರನ್ನಾಗಿಸಿ ಅಲ್ಲಿಂದ ಶಿವಾಚಾರ ಗಣಾಚಾರದೆಡೆಗೆ ಮುನ್ನಡೆಯುವ ದೃಷ್ಟಿಯನ್ನು ತಂದುಕೊಡುತ್ತದೆ. ಶಿವಾಚಾರವೆಂದರೆ ಸಕಲ ಜೀವಿಗಳಲ್ಲಿ ಶಿವಸ್ವರೂಪವನ್ನು ಕಂಡು ಅವೆಲ್ಲವೂ ಶಿವನ ಪ್ರಸಾದವೆಂದು ಅರಿಯುವುದು. 'ಶಿವಾಚಾರವೆಂಬುದು ಬಾಳ ಬಾಯಿಧಾರೆ'. 'ಸಾಮಾಜಿಕ ಸಮತೆ ಶಿವಾಚಾರದ ಒಂದು ಪ್ರಮುಖ ಮುಖ. ಈ ಸಾಮಾಜಿಕ ಸಮತೆ ಆಧ್ಯಾತ್ಮಿಕ ಅನುಭಾವದ ಆಧಾರದ ಮೇಲೆ ನೆಲೆ ನಿಲ್ಲಬೇಕು. ಭಾವಶುದ್ಧಿಯಿಂದ ಭಕ್ತಿ ನೆಲೆಗೊಂಡು ಶಿವನ ಕರುಣೆಯನ್ನು ಪಡೆದವರೆಲ್ಲರೂ ಶಿವಸ್ವರೂಪರು. ಶಿವಾಚಾರಿಯಾದವನಿಗೆ ವ್ಯಕ್ತಿ ಮತ್ತು ಸಮಾಜವೆರಡೂ ಶಿವಸ್ವರೂಪಿಗಳೆನಿಸುತ್ತವೆ. 'ಸರ್ವಂ ಲಿಂಗಮಯಂ ಜಗತ್' ಎಂಬುದನ್ನು ಬೌದ್ಧಿಕವಾಗಿ ಮಾತ್ರವಲ್ಲ, ಅನುಭವಪೂರ್ವಕವಾಗಿ ಅರಿವಿಗೆ ತಂದುಕೊಡುವುದು ಶಿವಾಚಾರ.

'ಗಣಾಚಾರವೆಂದರೆ 'ಶಿವಾಚಾರದ ನಿಂದೆಯ ಕೇಳದಿಹುದು' ಅಷ್ಟೇ ಅಲ್ಲ 'ಅಷ್ಟಾವರಣಗಳ ಮೇಲೆ ನಿಂದೆ ಕುಂದುಗಳು ಬಂದರೆ ಗಣಸಮೂಹದೊಡಗೂಡಿ ಆ ಸ್ಥಲವ ತ್ಯಜಿಸುವದೇ ಗಣಾಚಾರ. 'ನೀತಿ' ಎನ್ನುವ ಮಾತು ಇಲ್ಲಿ ವ್ಯಾಪಕವಾದ ಅರ್ಥ ಪಡೆಯುತ್ತದೆ. ಏಕದೇವೋಪಾಸನೆ, ಏಕನಿಷ್ಠೆ ಗಣಾಚಾರದ ಪ್ರಮುಖ ಅಂಶಗಳು. ಗಣಾಚಾರವೆಂಬುದು ಶ್ರೇಷ್ಠವಾದುದನ್ನು ಮಾತ್ರ ಪುರಸ್ಕರಿಸುತ್ತೇನೆಂಬ ಸತ್ಯನಿಷ್ಠೆಯಿಂದ ಪ್ರೇರಿತವಾದದ್ದು, ಸಮಾಜದ ಸಮಷ್ಟಿಹಿತಸಾಧನೆಯ ದೃಷ್ಟಿಯಿಂದ ಕೈಗೊಳ್ಳುವ ಶಿವಪರವಾದ ಕಾರ್ಯಗಳೆಲ್ಲವೂ ಗಣಾಚಾರಗಳೇ.

ಭೃತ್ಯಾಚಾರ ಪಂಚಾಚಾರದ ಕೊನೆಯ ಮೆಟ್ಟಿಲು. ಇದು ಅಹಂಕಾರನಿರಸರಕ್ಕೆ ಕಾರಣವಾದ ಪ್ರಾರಂಭದ ದೆಸೆ. 'ಶಿವ ಭಕ್ತರಿಗಿಂತ ಹಿರಿಯರಿಲ್ಲ ಎನಗಿಂತ ಕಿರಿಯರಿಲ್ಲ' ಎಂಬ ವಿನೀತ ಮನೋಭಾವ, ಭೃತ್ಯಾಚಾರಕ್ಕೆ ಗುರುತು. ಸಾಧಕನು ತನ್ನ ಅಹಂಕಾರವನ್ನು ನಿರಸನಗೊಳಿಸಿಕೊಂಡು ಪ್ರಸಾದಿ ಪ್ರಾಣಲಿಂಗಿ ಸ್ಥಳಗಳನ್ನೇರಿ ಶರಣ ಐಕ್ಯಸ್ಥಲಗಳ ನಿಲುವಿಗೆ ಬಂದಾಗಲೂ ಈ ಭೃತ್ಯಾಚಾರ ಜೊತೆಜೊತೆಯಲ್ಲಿಯೇ ಮುನ್ನಡೆದಿರುತ್ತದೆ. 'ರೂಪಕನೊಬ್ಬ ದೇಶವ ಕೊಟ್ಟರೆ ಆಶೆಮಾಡಿ ಅವನ ಹೊರೆಯಲ್ಲಿರಬೇಡ'. 'ಮಾದಾರನು ಶಿವಭಕ್ತನಾಗಿದ್ದರೆ ಅಲ್ಲಿ ತೊತ್ತಾಗಿರು' ಎಂದು ಹೇಳುವಲ್ಲಿ 'ಅಹಂ' ಅಳಿದು "ಸೋಹಂ" ತಲದೋರಿದ ಹಂತದಲ್ಲಿಯೂ ಅತ್ಯಂತ ಜಾಗರೂಕತೆ ಅತ್ಯಾವಶ್ಯಕ ಎಂಬುದನ್ನು ಶರಣರು ಮನಗಂಡಿದ್ದರು.

ಶರಣರ ಭಕ್ತಿಸಾಧನೆಯಲ್ಲಿ ಬರುವ 'ತ್ರಿವಿಧ ದಾಸೋಹ' ಭೃತ್ಯಾಚಾರಕ್ಕೆ ಕಿರೀಟವಿಟ್ಟಂತೆ. ಒಡೆಯರ ಸೊಮ್ಮನ್ನು ಒಡೆಯರಿಗರ್ಪಿಸಿ, ನಿರ್ಲಿಪ್ತ ಭಾವನೆಯಿಂದ ತನ್ನನ್ನೂ ಅರ್ಪಿಸಿಕೊಂಡಾಗ ದಾಸೋಹಕ್ಕೆ ಒಂದು ಬೆಲೆ ಬರುತ್ತಿದೆ. "ಸೋಹಂ" ಎಂಬುದು ಅಂತರಂಗದ ಗಮ್ಯ'. 'ಶಿವೋಹಂ' ಎಂದೊಡೆ ಬಹಿರಂಗದ ಅಹಂಕಾರ. 'ಈ ಉಭಯವನಳಿದು ದಾಸೋಹಂಭಾವವ ಕರುಣಿಸಿ ಬದುಕಿಸಯ್ಯ' ಎಂದು ಶರಣರು ಭಗವಂತನನ್ನು ವಿನೀತಭಾವದಿಂದ ಬೇಡಿಕೊಂಡಿದ್ದಾರೆ. ತಾವು ನಂಬಿದ ಆದರ್ಶಗಳಿಗಾಗಿ, ಅವುಗಳ ಸಾಧನೆಗಾಗಿ ಸರ್ವಸ್ವವನ್ನೂ ಅರ್ಪಿಸಿಕೊಳ್ಳುವ ಈ ಕಠೋರ ನಿಷ್ಠೆಯೇ ಭೃತ್ಯಾಚಾರದ ಒಳತಿರುಳು.

ಶರಣರು ತಮ್ಮ ಜೀವನದುದ್ದಕ್ಕೂ ಕೈಗೊಂಡ ಪಂಚಾಚಾರ, ನೈತಿಕತೆ ನೆಲಗಟ್ಟಿನ ಮೇಲೆ ಆಧರಿಸಿ ವ್ಯಕ್ತಿ, ಸಮಾಜಗಳ ಹಿತವನ್ನು ಕಾಪಾಡಿ, ಸಮನ್ವಯತೆ ಹಾಗೂ ಸೌಹಾರ್ದತೆಯ ಬೀಜವನ್ನು ಬಿತ್ತುವ ಆದರ್ಶ ಮೌಲ್ಯಗಳೆನಿಸಿವೆ.

ಶರಣರು ಮಾತಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿರುವುದು ಅವರ ಹಲವಾರು ವಚನಗಳಿಂದ ತಿಳಿದುಬರುತ್ತದೆ. ಮಾತು ಅವರ ದೃಷ್ಟಿಯಲ್ಲಿ ಭಾಷೆಯಾಗಿತ್ತು; ನೈತಿಕತೆಗೆ ಹಿಡಿದ ದರ್ಪಣವಾಗಿತ್ತು. ಅವರು ನುಡಿದಂತೆ ನಡೆದು ಲೋಕಮಾನ್ಯವಾದರು. ಲೋಕವಂದಿತರಾದರು. ಅವರಿಗೆ ನಡೆ–ನುಡಿ ಎಂಬುದು ಹಾಲಿಗೆ ಜೇನು ಬೆರೆತಂತೆ. ಅಂತಹ ಸುಂದರ ಬದುಕನ್ನು ಬಾಳಿ ಮಹಾಪುರುಷರೆನಿಸಿದರು. ಅವರಾಡುತ್ತಿದ್ದ ಒಂದೊಂದು ಮಾತು ಸುಸಂಸ್ಕೃತ ಜೀವನಕ್ಕೆ ಭಾಷ್ಯ ಬರೆದಂತಿತ್ತು. ಶರಣರು ನಡೆ–ನುಡಿಯ ಸಮನ್ವಯಕ್ಕೆ ಹೆಚ್ಚು ಒತ್ತು ಕೊಟ್ಟರು. ಬೆಲೆ ಕೊಟ್ಟರು.

ವ್ಯಕ್ತಿಯು ತನ್ನ ಮನಸ್ಸಿನಲ್ಲಿ ಪ್ರತಿಕ್ಷಣವೂ ಮೂಡುವ ಭಾವನೆಗಳು, ತಾಕಲಾಟಗಳು, ಎಲ್ಲವನ್ನು ಮಾತಿನ ಮೂಲಕವೇ ವ್ಯಕ್ತಪಡಿಸುತ್ತಾನೆ. ವ್ಯಕ್ತಿ ಒಳ್ಳೆಯವನು, ಕೆಟ್ಟವನು ಎಂಬುದು ಅವನ ಮಾತಿನ ಮೂಲಕವೇ ವ್ಯಕ್ತವಾಗುತ್ತದೆ. ಅನುಭಾವ–ಅನುಭವ ಎರಡೂ ಮಾತಿನ ಮೂಲಕವೇ ವ್ಯಕ್ತಗೊಳ್ಳುತ್ತದೆ.

ಬಸವಾದಿ ಶರಣರು ತಮ್ಮ ವಚನಗಳಲ್ಲಿ ನಡೆ–ನುಡಿಯ ಬಗ್ಗೆ ವಿಸ್ತಾರವಾಗಿ ಚಿಂತನೆ ಮಾಡಿದ್ದಾರೆ. ಬಸವಣ್ಣನವರು ತಮ್ಮ ವಚನವೊಂದರಲ್ಲಿ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯ

ಹೇಳಿರುವುದು 'ಮಾತಿಗೆ' ಬರೆದ ಪ್ರೌಢ ಭಾಷ್ಯವಾಗಿದೆ. ಅಂತೆಯೇ ಮತ್ತೊಂದು ವಚನದಲ್ಲಿ ಅವರು–

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗವು ಘಟಸರ್ಪದಂತೆ

ಎನ್ನುವ ಎಚ್ಚರಿಕೆಯನ್ನೂ ನೀಡಿದ್ದಾರೆ. ನಡೆ–ನುಡಿ ಯವುದಾದರೂ ಒಂದು ತನ್ನ ಮೌಲ್ಯವನ್ನು ಕಳೆದುಕೊಂಡರೂ ಆ ವ್ಯಕ್ತಿ ನಂಬಿಕೆ ಕಳೆದುಕೊಳ್ಳುತ್ತಾನೆ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ.

ಮಾತೆಂಬುದು ಜ್ಯೋತಿರ್ಲಿಂಗ
ಸ್ವರವೆಂಬುದು ಪರತತ್ವ
ತಾಳೋಷ್ಠಸಂಪುಟವೆಂಬುದು ನಾದಬಿಂದು ಕಳಾತೀತ
ಗುಹೇಶ್ವರನ ಶರಣರು.

ಅಲ್ಲಮಪ್ರಭು ನುಡಿಯ ಮಹತ್ವವನ್ನು ವಿವರಿಸುತ್ತಾ ಮಾತು ಜ್ಯೋತಿರ್ಲಿಂಗ ಎಂದು ಹೇಳುವ ಮೂಲಕ ಮಾತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದ್ದಾರೆ.

ಶರಣರ ಪರಿಕಲ್ಪನೆಯಲ್ಲಿ ನಡೆ–ನುಡಿ ಹೊರನೋಟಕ್ಕೆ ಸಾಮಾನ್ಯ ಶಬ್ದಗಳಂತೆ ಕಂಡರೂ, ಒಳಹೊಕ್ಕು ನೋಡಿದಾಗ ಅದು ಜ್ಞಾನ–ಕ್ರಿಯೆಗಳ ಸಂಬಂಧ ಸಮನ್ವಯವಾಗಿದೆ. ಮೋಳಿಗೆಯ ಮಹಾದೇವಿಯಕ್ಕ ನಡೆ–ನುಡಿಯ ಪರಿಕಲ್ಪನೆಯನ್ನು ತಾತ್ವಿಕ ನೆಲೆಗಟ್ಟಿನಲ್ಲಿ ವಿವೇಚಿಸಿದ್ದಾಳೆ.

ನೀರು ನೆಲವಿಲ್ಲದೆ ಇರಬಹುದೆ!
ಬೀಜ ನೆಲೆಯಿಲ್ಲದೆ ಹುಟ್ಟಬಹುದೆ!
ಜ್ಞಾನ ಕ್ರಿಯೆಯಿಲ್ಲದೆ ಅರಿಯಬಹುದೆ!

ಈ ವಚನದಲ್ಲಿ ಕ್ರಿಯೆ ಎಂಬುದು ನಡೆಯ ಸಂಕೇತವಾಗಿದೆ. ಜ್ಞಾನ ನುಡಿಯ ಸಂಕೇತವಾಗಿದೆ. ಈ ಹಿನ್ನೆಲೆಯಲ್ಲಿ ಅರಿವು, ಆಚರಣೆಗಳ ಸಂಬಂಧವೇ ವಚನಕಾರರ ದೃಷ್ಟಿಯಲ್ಲಿ ನಡೆ ನುಡಿಯಾಗಿವೆ.

ಶರಣರು ಸಮಗ್ರ ಜೀವನದ ಪರಿಶುದ್ಧತೆಯ ಮೂಲಕ ಆದರ್ಶ ಸಮಾಜವನ್ನು ರೂಪಿಸಿ, ಶಾಂತಿ ನೆಮ್ಮದಿಯಿಂದ ಜೀವನ ನಡೆಸುವ ಆಶಯವನ್ನು ಹೊಂದಿದ್ದರು. ನಡೆ–ನುಡಿಗಳು ಭಕ್ತನು ಅನುಸರಿಸಬೇಕಾದ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿ ಪರಿಗಣಿಸಿರುವುದು ಶರಣರ ವಚನಗಳಲ್ಲಿ ಕಂಡುಬರುತ್ತದೆ.

ಭಕ್ತನ ನಡೆ ಶುದ್ಧ ಭಕ್ತನ ನುಡಿ ಶುದ್ಧ, ಭಕ್ತನ ತನು ಶುದ್ಧ
ಭಕ್ತನ ಮನ ಶುದ್ಧ, ಭಕ್ತನ ಭಾವ ಶುದ್ಧ
ಭಕ್ತನ ಸರ್ವಕ್ರಿಯೆಯೆಲ್ಲಾ ಶುದ್ಧ
ಅಖಂಡೇಶ್ವರ ನೀ ಒಲಿದ ಸದ್ಭಕ್ತನ
ಕಾಯವೇ ಕೈಲಾಸವಯ್ಯಾ

ಎಂದಿದ್ದಾರೆ. ಅಂದರೆ ಶರಣರ ನಡೆನುಡಿಗಳಲ್ಲಿ, ತನುಮನಗಳಲ್ಲಿ ನೈತಿಕ ಪ್ರಜ್ಞೆಯನ್ನು ಕಾಯ್ದುಕೊಳ್ಳಬೇಕೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ನೈತಿಕತೆಯನ್ನು ಕುರಿತಂತೆ ಶರಣ ಸಾಹಿತ್ಯದಲ್ಲಿ ವಿಪುಲವಾದ ಉದಾಹರಣೆಗಳು ಸಿಗುತ್ತವೆ. ಈ ವಚನಗಳನ್ನು ಅರಗಿಸಿಕೊಂಡರೆ ನಮ್ಮ ಬದುಕು ಬಂಗಾರವಾಗುವುದರ ಜೊತೆಗೆ ಆದರ್ಶ ಸಮಾಜ ನಿರ್ಮಾಣವಾಗುತ್ತದೆ. ಶರಣರು ತತ್ತ್ವ, ನೀತಿ, ಪ್ರಾಮಾಣಿಕತೆಯಿಂದ, ಇತರರಿಗೂ ನೋವಾಗದಂತೆ, ನುಡಿದಂತೆ ನಡೆದು ನಮಗೆ ದಾರಿದೀಪವಾಗಿದ್ದಾರೆ. ಅವರು ನಡೆದ ಹಾದಿಯಲ್ಲಿ ಕೊಂಚ ದೂರವನ್ನಾದರೂ ನಾವು ಕ್ರಮಿಸಿದರೆ ಸಮಾಜದಲ್ಲಿ ತಾಂಡವವಾಡುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರೆಯುವುದರಲ್ಲಿ ಸಂದೇಹವಿಲ್ಲ.

❑

ಸಚ್ಚಿದಾನಂದ ಸದ್ಗುರು ತೋರಿದರೆ
ಕಂಡೆನಯ್ಯಾ ಸತ್ಯಸದಾಚಾರವ.
ಸಚ್ಚಿದಾನಂದ ಸದ್ಗುರು ತೋರಿದರೆ
ಕಂಡೆನಯ್ಯಾ ಭಕ್ತಿ ಜ್ಞಾನ ವೈರಾಗ್ಯವ.
ಸಚ್ಚಿದಾನಂದ ಸದ್ಗುರು ತೋರಿದರೆ
ಕಂಡೆನಯ್ಯ ನಿತ್ಯಲಿಂಗಾಂಗಸಂಗಸಮರಸವ.
ಸಚ್ಚಿದಾನಂದ ಸದ್ಗುರು ತೋರಿಸಿದರೆ
ಕಂಡೆನಯ್ಯಾ ಅಖಂಡೇಶ್ವರಾ ನಿಮ್ಮ ಶ್ರೀಚರಣಕಮಲವ

– ಷಣ್ಮುಖಸ್ವಾಮಿ

# ವಚನ ಸಾಹಿತ್ಯದಲ್ಲಿ ಶಾಂತಿ ಮತ್ತು ಸಾಮರಸ್ಯ

**ಹುಸ್ಕೂರು ಅಂಬಿಕಾ ಶಿವನಂಜಪ್ಪ**

(ಹಿಂದಿನ ಸಂಚಿಕೆಯಿಂದ)

ಕೆಲವೇ ಕೆಲವರ ಕೈಯಲ್ಲಿ ದೇಶದ ಸಂಪತ್ತು ಕೇಂದ್ರೀಕೃತವಾಗಿರುವುದೇ ನಾಡಿನ ಬಡತನಕ್ಕೆ ಕಾರಣವಾಗಿದೆ. ಇಂತಹ ಅಸಮಾನತೆ ತುಂಬಿರುವ ಸಮಾಜದ ವ್ಯವಸ್ಥೆಯನ್ನು ಸರಿದಾರಿಗೆ ತರಲು ವಚನಕಾರರು ಬಳಸಿಕೊಂಡಿದ್ದೇ ಕಾಯಕ, ದಾಸೋಹ ತತ್ತ್ವಗಳು ಮತ್ತು ಜಾತಿನಿರ್ಮೂಲನೆ, ಮಹಿಳಾ ಸಮಾನತೆ, ಸಾಮಾನ್ಯ ಭಾಷಾ ಬಳಕೆ ಹೀಗೆ ಈ ಎಲ್ಲಾ ಬದಲಾವಣೆಗಳಾದಲ್ಲಿ ನಾಡಿನ ಜನಜೀವನದಲ್ಲಿ ಶಾಂತಿ, ಸಾಮರಸ್ಯ ಉಳಿಯಬಹುದೆಂಬ ಆಶಯದೊಂದಿಗೆ ಹೋರಾಡಿದವರು.

ಇಂತಹ ಹೋರಾಟಗಳಿಂದ ಸಮಾಜವನ್ನು ಸ್ವಚ್ಛಗೊಳಿಸಿದ ಹಲವಾರು ನಿದರ್ಶನಗಳು ನಮ್ಮ ಕಣ್ಣ ಮುಂದಿದ್ದರೂ ಇಂದು ಕೂಡ ಸಮಾಜ ದಾರಿತಪ್ಪುತ್ತಿರುವುದನ್ನು ನಾವು ಕಾಣಬಹುದು. ಆದರೆ ಕೋವಿಡ್–೧೯ ವೈರಾಣುವಿನಿಂದ ಅಹಾರಕ್ಕಾಗಿ ಪರದಾಡುತ್ತಿರುವ ಲಕ್ಷಾಂತರ ಜನರ ನೋವು, ಹಸಿವುಗಳ ಪರಿಸ್ಥಿತಿಯಲ್ಲಿ ಎಲ್ಲಾ ಕ್ಷೇತ್ರದ ನಾಯಕರುಗಳು ಸಹಾಯಹಸ್ತ ನೀಡಿರುವ, ನೀಡುತ್ತಿರುವ ಹಲವಾರು ಉದಾಹರಣೆಗಳೂ ನಮ್ಮ ಮುಂದಿವೆ. ಅದರಲ್ಲೂ ಇತ್ತೀಚೆಗೆ ನಿಧನರಾದ ಪುನೀತ್ ರಾಜ್‌ಕುಮಾರ್ ಅವರು ಮಾಡಿದ ಸಮಾಜಸೇವೆಯನ್ನು, ಎಲ್ಲವೂ ಇದ್ದೂ ಇಲ್ಲದಂತಿದ್ದ ಅವರ ವ್ಯಕ್ತಿತ್ವನ್ನು ಪ್ರಪಂಚವೇ ಕೊಂಡಾಡುತ್ತಿದೆ. ಹಣ ಅಧಿಕಾರ ಬಂಗಲೆಗಳಿಂದ, ನಾನು ಎಂಬ ಅಹಂಕಾರದಿಂದ ಕೋಟೆ ಕಟ್ಟಿಕೊಂಡವರು ಈ ಜಗತ್ತಿನ ನೆನಪಿನಲ್ಲಿ ಉಳಿಯುವುದಿಲ್ಲ. ಸಾಮಾನ್ಯ ಜನರ ಕೂಲಿ ಕಾರ್ಮಿಕರ ಮಧ್ಯೆ ಸರಳ ವ್ಯಕ್ತಿಯಾಗಿ, ವೃತ್ತಿತಾರತಮ್ಯವಿಲ್ಲದೆ ಬದುಕಿದವರು ಮಾತ್ರ ಜಗತ್ತಿರುವ ತನಕವೂ ಜೀವಂತವಾಗಿ ಉಳಿಯಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟವರು. ಯಾವ ಕಾಲೇಜಿನ ಮೆಟ್ಟಿಲನ್ನೂ ಹತ್ತದೆ ನಾಡಿನ ಸಂಸ್ಕಾರವನ್ನು ತಮ್ಮದಾಗಿಸಿಕೊಂಡು ಸರಳತೆ ಮೆರೆದವರು. ಇಂತಹ ಬದಲಾವಣೆಗಳನ್ನೇ ವಚನಕಾರರು ಬಯಸಿದ್ದು.

ಇಂದಿನ ಯುವಪೀಳಿಗೆಗೆ ಕೃಷಿ ಸಂಸ್ಕೃತಿಯನ್ನು ಪರಿಚಯಿಸಬೇಕು. ರೈತರ ಬದುಕು, ಅವರ ಶೋಚನೀಯ ಸ್ಥಿತಿಗತಿಗಳ ಬಗ್ಗೆ ಅರಿವು ಮೂಡಿಸುವ ಕೆಲಸಗಳಾಗ

ಬೇಕು. ನಾಡಿಗೆ, ನಾಡಿನ ಜನತೆಗೆ ಬೇಕಾಗುವ ಕೃಷಿಯ ಅವಶ್ಯಕತೆಗಳನ್ನು ಮನದಟ್ಟು ಮಾಡಿಸಬೇಕು. ಕೃಷಿಯ ಚಾರಿತ್ರಿಕ ಪರಂಪರೆಯನ್ನು ಉಳಿಸದಿದ್ದಲ್ಲಿ ಕಂಪ್ಯೂಟರ್‌ನಿಂದಲೇ ಬೆಳೆಗಳನ್ನು ಉತ್ಪಾದಿಸಲಾಗುವುದಿಲ್ಲ ಎಂಬ ಅರಿವು ಮೂಡದಿದ್ದರೆ ನಾಡಿನ ಸ್ಥಿತಿ ತುಂಬಾ ಹದಗೆಡುತ್ತದೆ. ಆಹಾರದ ಕೊರತೆಯಿಂದ ದೇಶ ಬಳಲಬಹುದು. ಹೀಗಾಗಲೇ ಪರಂಪರೆಯನ್ನು ಮರೆತು, ಆಧುನಿಕತೆಯ ರಸ್ತೆಯಲ್ಲಿ ಸಾಗಿಬಿಟ್ಟಿದ್ದೇವೆ. ಮುಂದಾದರೂ ಎಚ್ಚೆತ್ತುಕೊಂಡು ಕೃಷಿ ಮತ್ತು ಕೃಷಿಕರನ್ನು ಉಳಿಸಿಕೊಳ್ಳಬೇಕು. ರೈತನ ಕಷ್ಟಕ್ಕೆ ಸ್ಪಂದಿಸುವ, ಪ್ರಕೃತಿಯೊಡನೆ ಮೈತ್ರಿಯನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಚಿಂತನೆಗಳು ಕಾರ್ಯರೂಪಕ್ಕೆ ಬರಬೇಕು. ಕುವೆಂಪು ಅವರ ಆಶಯದಂತೆ ಸಂಸ್ಕೃತಿ ಮತ್ತು ನಾಗರಿಕತೆ ಒಟ್ಟಿಗೆ ಸಾಗಿದಲ್ಲಿ ಸಮಾಜದ ನೆಮ್ಮದಿಯನ್ನು ಕಾಣಬಹುದು.

ಇದಕ್ಕೆಲ್ಲಾ ಪರಿಹಾರವೆಂದರೆ ಮತದಾರನು ಪ್ರಜ್ಞಾವಂತನಾಗಬೇಕು. ನಾಡಿನ ಸಮಸ್ತ ಸಮಸ್ಯೆಗಳಿಗೂ ಪ್ರತಿಯೊಬ್ಬ ಪ್ರಜೆಯೂ ಕಾರಣಕರ್ತನಾಗಿರುತ್ತಾನೆ. ನಾವುಗಳು ಪೂರ್ವಾಗ್ರಹಪೀಡಿತರಾಗದೆ ಸಮಾಜಮುಖಿಗಳಾಗಿ ಸಮಾನತೆಯಿಂದ ಬಾಳುವುದನ್ನು ಕಲಿಯಬೇಕು. ಪ್ರಜ್ಞಾಪೂರ್ವಕ ಬದುಕು ಸಮಾಜದ ಸ್ವಾಸ್ಥ್ಯಕ್ಕೆ ದಾರಿ ಮಾಡಿಕೊಡುತ್ತದೆ.

ಬಸವಣ್ಣನವರ ಆಶಯದಂತೆ "ಅನ್ಯರಿಗೆ ಅಸಹ್ಯ ಪಡದೆ, ತನ್ನನ್ನು ತಾನು ಬಣ್ಣಿಸದೆ.." ನಮ್ಮ ಬದುಕಿಗೆ ಪ್ರಾಮಾಣಿಕವಾಗಿ ನಾವು ಬದುಕಬೇಕು. ಬೇರೆಯವರನ್ನು ಶೋಷಣೆ ಮಾಡುವ ಸಮಯವನ್ನು ಸದಾಚಾರಗಳಿಗೆ ಮೀಸಲಿಡಬೇಕು. ಉತ್ತಮ ಕೆಲಸಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು.

"ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವೆಲ್ಲವನು". ಪಶುಪಕ್ಷಿಗಳೇ ಹಂಚಿ ತಿನ್ನುವಾಗ, ಒಗ್ಗಟ್ಟಿನಿಂದ ಬದುಕುವಾಗ ಜನಸಾಮಾನ್ಯರಾದ, ಬುದ್ಧಿಜೀವಿಗಳೆನಿಸಿದ ನಾವು ಜಾಗೃತರಾಗಬೇಕು. ಬಡವ-ಬಲ್ಲಿದ, ವಿದ್ಯಾವಂತ-ಅವಿದ್ಯಾವಂತ, ಅಧಿಕಾರಿ - ನೌಕರ ಇದ್ಯಾವುದೂ ಪ್ರಕೃತಿಯ ಮುಂದೆ ಮುಖ್ಯವಲ್ಲ. ಎಲ್ಲರೂ ಸಮಾನರೆ. ಕೋವಿಡ್-೧೯ ಮಾತ್ರವಲ್ಲ, ದೇಶದ ಎಲ್ಲಾ ಸಮಸ್ಯೆಗಳು ಮತ್ತು ಕೊರೋನ ಎಂಬ ವೈರಸ್ ಜೀವನಪರ್ಯಂತ ಮನುಕುಲಕ್ಕೆ ಒಂದು ನೀತಿಪಾಠವಾಗಿದೆ. ಮುಂದಾದರೂ ಮನುಷ್ಯ ಹಂಚಿತಿನ್ನುವ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ಸಂಪತ್ತನ್ನು ಕ್ರೋಡೀಕರಿಸುವ, ಅದನ್ನು ರಕ್ಷಿಸುವ ಹೊಯ್ದಾಟದಲ್ಲೇ ತನ್ನ ಆಯಸ್ಸನ್ನು ಮುಗಿಸುವವರು ಎಚ್ಚರಗೊಳ್ಳಬೇಕು.

ಮನುಷ್ಯಜನ್ಮ ಎಂಬುದು ಒಂದು ಸುಂದರ ಜಗತ್ತಿನ ಅನಾವರಣ. ಇರುವಷ್ಟು ಕಾಲ ನಂಬಿಕೆ, ವಿಶ್ವಾಸ, ಪ್ರಾಮಾಣಿಕ, ಪರಿಶ್ರಮ, ಪರಿಶುದ್ಧ ಬದುಕನ್ನು ಬದುಕಬೇಕು. ಮುಂದಿನ ತಲೆಮಾರುಗಳಿಗೆ ಉತ್ತಮ ಹೆಜ್ಜೆಗುರುತುಗಳನ್ನು ಬಿಟ್ಟು ಪಯಣಿಸಬೇಕು. ಯಾಂತ್ರಿಕವಾದ ಜೀವನಶೈಲಿಯಲ್ಲಿ ಕಳೆದುಹೋಗಬಾರದು.

ಬದುಕಿನ ಓಡುವ ಭರದಲ್ಲಿ ಸಾಮಾನ್ಯರ ಅಥವಾ ಸಮಾಜದ ಭಾವನೆಗಳನ್ನು ಅರ್ಥ ಮಾಡಿಕೊಳ್ಳದ ಕ್ಷಣಿಕ ಸುಖಕ್ಕೆ, ಬಣ್ಣದ ಬದುಕಿಗೆ ಕಾತರಿಸಿ ನಗು, ಸಂಭ್ರಮಗಳನ್ನು ಕಾಲಲ್ಲಿ ಹೊಸಕಿ ಪಯಣವನ್ನು ಮುಗಿಸಬಾರದು. ನಮ್ಮೂರು, ನಮ್ಮವರು ಎಂಬ ಭಾವಸಮಾಧಿಯ ಮೇಲೆ ನಾನು ನನ್ನದು ಎಂಬ ಸೌಧ ಕಟ್ಟಿ, ತೊಡೆ ತಟ್ಟಿ, ಕಟ್ಟಿಗೆಯಲ್ಲಿ ಸುಟ್ಟು ಭಸ್ಮ ಮಾಡುವ ಬದಲಿಗೆ, ಮುಂದಿನ ಕೋಟ್ಯಾಂತರ ಜೀವರಾಶಿಗೆ ನಾವು ಬಿಟ್ಟು ಹೋಗುವ ಪವಿತ್ರವಾದ ಸಂಪತ್ತು ನಮ್ಮ ಮೌಲ್ಯಯುತ ಬದುಕಿನ ಜೀವಂತ ನೆನಪುಗಳಾಗಿರಬೇಕು. ಆ ನೆನಪಿನ ಹಣತೆಯಲ್ಲಿ ಮುಂದಿನ ತಲೆಮಾರಿನಿಂದ ಮತ್ತೊಂದು ದೀಪ ಹಚ್ಚುವ ಕೆಲಸ ನಿರಂತರ ಸಾಗಬೇಕು. ನಾವು ಹಣತೆ ಹಚ್ಚಿ ಲಕ್ಷಾಂತರ ಜೀವರಾಶಿಗಳಿಗೆ ದಾರಿದೀಪವಾಗಬೇಕೆ ವಿನಾ ದಾರಿ ತಪ್ಪಿಸುವ ಕಗ್ಗತ್ತಲಾಗಬಾರದು.

ಮಾನವಕುಲದ ದಿಕ್ಕು ತಪ್ಪಿದ ನಡಾವಳಿಗಳೇ ಶಿಶು ಅತ್ಯಾಚಾರ, ಶಿಕ್ಷಣ ಕಲಿಸಿ ಮಾರ್ಗ ತೋರಬೇಕಾದ ಗುರುವೇ ಅನಾಚಾರದ ಕೂಪದಲ್ಲಿ ಸಿಲುಕಿಕೊಂಡಿರುವ, ಹೆತ್ತವರನ್ನೇ ಬೀದಿಪಾಲು ಮಾಡುವ ಮಕ್ಕಳ ಅನಾಗರಿಕ ವರ್ತನೆ ಮುಂತಾದವುಗಳೇ ನಮ್ಮ ದುಃಸ್ಥಿಗೆ ಕಾರಣ. ಮುಂದಾದರೂ ಜನತೆ ಎಚ್ಚೆತ್ತುಕೊಳ್ಳದಿದ್ದರೆ ನಾನಾ ಸಂಕಷ್ಟಗಳನ್ನು ಎದುರಿಸಬೇಕಾದೀತು. ಮನುಷ್ಯ ಜಗತ್ತು ಸೃಷ್ಟಿಸಿದ ನಿಯಮಾವಳಿಗಳೇ ಆತನಿಗೆ ಮುಳುವಾಗುತ್ತಿರುವುದಂತು ದುರಾದೃಷ್ಟಕರ. ಮಂಗನಿಂದ ಮಾನವನಾದ ಇತಿಹಾಸ ಭವ್ಯವಾದದ್ದು. ಮನುಕುಲ ನಾಗರಿಕತೆಯತ್ತ ಸಾಗಿದ್ದು ತಪ್ಪಲ್ಲ. ಈ ಪಯಣದುದ್ದಕ್ಕೂ ಆದ ಬದಲಾವಣೆಗಳು, ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಅಡಿಗಲ್ಲಾಗಬೇಕೇ ಹೊರತು ಜನಸಾಮಾನ್ಯರ ಬದುಕಿಗೆ ಮಾರಕವಾಗಬಾರದು. ಸರ್ಕಾರವಾಗಲೀ, ಸಮಾಜವಾಗಲೀ ಯಾವುದೇ ಬದಲಾವಣೆಗಳನ್ನು ಬಯಸಿ, ಬದಲಿಸಿದರೂ ಕೊನೆಗೆ ಕೂಲಿ ಕಾರ್ಮಿಕರು ಯಥಾ ಸ್ಥಿತಿಯಲ್ಲಿಯೇ ಕೂಲಿಗಾಗಿ, ಕೂಳಿಗಾಗಿಯೇ ಜೀವನಪೂರ್ತಿ ಜೀವವನ್ನು ಸವೆಸುತ್ತಾರೆ. ಸಾಲದಲ್ಲಿಯೇ ಹುಟ್ಟಿ ಕೊನೆಗೆ ಸಾಲದಲ್ಲಿಯೇ ಸಮಾಧಿಯಾಗುತ್ತಾರೆ.

ದಿಕ್ಕು ತಪ್ಪುತ್ತಿರುವ ಇಂದಿನ ವ್ಯವಸ್ಥೆಯನ್ನು ಸರಿದಾರಿಗೆ ತಂದು ಸಮಾನ ಮನಸ್ಕರನ್ನು ಸೃಷ್ಟಿಸುವ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ವ್ಯವಸ್ಥೆಯನ್ನು ಶುದ್ಧಿಗೊಳಿಸುವ, ಬಡವರ, ಪ್ರಾಮಾಣಿಕರ, ರೈತಾಪಿ ವರ್ಗದವರ, ನೊಂದವರ ಪರ ಧ್ವನಿ ಎತ್ತುವ ನಾಯಕರ, ಪರಿಶುದ್ಧ ಚಿಂತಕರ ಅಗತ್ಯ ನಮ್ಮ ವ್ಯವಸ್ಥೆಗೆ ಅನಿವಾರ್ಯವಾಗಿದೆ. ನನ್ನ ಚಿಂತನೆಯ ಮಟ್ಟದಲ್ಲಿ ನಾಯಕರೆಂದರೆ ಯಾರು? ಎಂಬ ಚಿಂತನಾಕ್ರಮದಲ್ಲಿ ಮೂಡಿದ ನೂರು ಪ್ರಶ್ನೆಗಳಿಗೆ ನಾನೇ ಕಂಡುಕೊಂಡ ಉತ್ತರವಿದು. ಒಬ್ಬ ಸಮರ್ಥ ಜನನಾಯಕ ಪರಿಪೂರ್ಣ ವ್ಯಕ್ತಿಯಾಗಿ, ಶಕ್ತಿಯಾಗಿ, ಚಿಂತಕರಾಗಿ ಈ ಜಗತ್ತು ಕಂಡ ವಿಶಾಲ ಚಿಂತನೆಯ ಸಮಾಜವನ್ನು ಸಮತೂಕದಲ್ಲಿ ಕಾಯ್ದುಕೊಳ್ಳಬಲ್ಲ ಧೀಮಂತ

ನಡೆಯ, ಒಳಹೊರಗುಗಳ ಶುಚಿತ್ವ ಕಾಯ್ದುಕೊಂಡ ಮಹಾನ್ ಮಾನವತಾವಾದಿಯಾಗಿರಬೇಕು.

ಈ ನಾಡಿನ ನಾಯಕನಾಗುವ ಯೋಗ ಬಂದಾಗ ಆತ ತ್ಯಾಗಿಯಾಗಿ ನಾನು, ನನ್ನದು ಎಂಬ ಸ್ವಾರ್ಥವನ್ನು ತೊರೆದು ನಿಂತಾಗ ಸಾವಿರ ವರ್ಷ ಶಾಶ್ವತವಾಗಿ ಜನಮಾನಸದಲ್ಲಿ ನೆಲೆನಿಲ್ಲಬಹುದು. ಮನುಕುಲದ ಉದ್ಧಾರದ ಮೊದಲು ತನ್ನೆಲ್ಲಾ ಭಾವಶುದ್ಧತೆಯನ್ನು ಕಾಯ್ದುಕೊಳ್ಳಬೇಕು. ಯಾವುದೇ ವ್ಯಕ್ತಿಯ, ಧರ್ಮದ, ಜಾತಿಯ, ಸಮೂಹದ, ರಾಜಕೀಯ ಹಿತಾಶಕ್ತಿಯ ಕೈಗೊಂಬೆಯಾಗದೇ ತನ್ನ ಮನದ ಮಾರ್ಗದಲ್ಲಿ ಲೋಕಕಲ್ಯಾಣದ ಕರ್ಮದಲ್ಲಿ ತನ್ನೆಲ್ಲ ಬದುಕನ್ನು ಕಂಡುಕೊಂಡಾಗ ಮಾತ್ರ ಒಬ್ಬ ಪ್ರಬಲ ನಾಯಕ ತನ್ನೊಳಗಿನ ನಾಯಕನಿಗೆ ನ್ಯಾಯ ದೊರಕಿಸಬಲ್ಲವನಾಗಿರುತ್ತಾನೆ. ಹಸಿದು ಬಂದವರಿಗೆ ಉಣಬಡಿಸುವ ಅವಕಾಶ ದೊರೆತಾಗ ಸದುಪಯೋಗ ಮಾಡಿಕೊಂಡವನೇ ಅನ್ನದಾತನಾಗುತ್ತಾನೆ. ಜ್ಞಾನದಾಹದಿಂದ ಅರಸಿ ಬಂದಾಗ ಬೊಗಸೆ ಜ್ಞಾನ ನೀಡುವವನೇ ಮಹಾನ್ ಗುರುವಾಗುತ್ತಾನೆ. ದಣಿದು ಬಂದವರಿಗೆ ನೆರಳು ಕೊಡುವ ಮರವೇ ಮಾನವನಿಗೆ ಉದಾಹರಣೆಯಾಗುವಾಗ ಮರ್ಮವರಿತಿರುವಾಗ ನಾಗರಿಕನಾದ ಮಾನವ ಅನಾಗರಿಕತನದಿಂದ ವರ್ತಿಸಿದರೆ ಪ್ರಕೃತಿಯ ವಿಕೋಪಕ್ಕೆ ಗುರಿಯಾಗದಿರುತ್ತಾನೆಯೇ?

ಒಟ್ಟಾರೆ ವಚನಕಾರರು ತಮ್ಮ ವಚನಗಳ ಮೂಲಕ ಸತ್ಯಶುದ್ಧ ಕಾಯಕ ಮತ್ತು ದಾಸೋಹದ ಮೂಲಕ ಸಮಾನತೆಯನ್ನು ತರಲು ಹೋರಾಡಿದವರು. "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ..." ಎಂದು ಹೇಳುವ ಬಸವಣ್ಣ ಕಾಯಕದ ಮೂಲಕ ಜಾತಿಯನ್ನು ಗುರುತಿಸಿದರೂ ಕೂಡ ಮೇಲುಕೀಳೆಂಬ ತಾರತಮ್ಯವಿರಬಾರದು ಎಂದರು, ಕಾಯಕವೇ ಕೈಲಾಸವೆಂದರು. "ಆವ ಕಾಯಕವ ಮಾಡಿದಡೂ ಒಂದೇ ಕಾಯಕವಯ್ಯಾ.." ಎಂದು ಗಂಗಮ್ಮನೆಂಬ ಶರಣೆ ಕಾಯಕ ತತ್ತ್ವದ ಮೂಲಕ ವೃತ್ತಿಯ ಗೌರವವನ್ನು, ಘನತೆಯನ್ನು ಎತ್ತಿಹಿಡಿದು ಶಾಂತಿ, ಸಾಮರಸ್ಯವನ್ನು ಕಂಡುಕೊಂಡು ಸಮಾಜದಲ್ಲಿ ಸಮಾನತೆಯನ್ನು ತರಲು ಹೋರಾಡಿದವರು. ಸರ್ವರ ಅಭ್ಯುದಯಕ್ಕೆ ಶ್ರಮಿಸಿದವರು. "ಲೋಕದ ಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂದ ವಚನಕಾರರು ಮೊದಲು ತಮ್ಮನ್ನು ತಾವು ಪ್ರಶ್ನಿಸಿಕೊಂಡವರು. ಆ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ, ಸಮಾಜದ ವ್ಯವಸ್ಥೆಯನ್ನು ವಿಶ್ಲೇಷಿಸುವ, ಜನರಲ್ಲಿ ಜಾಗೃತಿ ಮೂಡಿಸುವುದರೊಟ್ಟಿಗೆ ಜೀವನ ಮೌಲ್ಯಗಳು, ಬದುಕಿನ ನಾನಾ ವಿಚಾರಗಳಿಗೆ ಬೆಳಕು ನೀಡುವ ಮೂಲಕ ಸ್ವಸ್ಥಸಮಾಜವನ್ನು ಕಟ್ಟಲು ಹೊರಟವರು. ಆ ಮೂಲಕ ಸಮಾಜದಲ್ಲಿ ಶಾಂತಿ, ಸಾಮರಸ್ಯ ನೆಲೆಗೊಳ್ಳುವಂತೆ

ಮಾಡುವಲ್ಲಿ ವಚನಕಾರರು ಮುಂಚೂಣಿಯಲ್ಲಿದ್ದರು. ಶಾಂತಿ, ಸಾಮರಸ್ಯದ ಸಂಕೇತವಾಗಿ ಮಾನವೀಯ ಮೌಲ್ಯಗಳನ್ನು ಬಿತ್ತುವ ಉದ್ದೇಶದಿಂದ ಅನುಭವಮಂಟಪದಲ್ಲಿ ಜಾತಿ, ಧರ್ಮ, ಮತಪಂಥಗಳನ್ನು ಮೀರಿ ಎಲ್ಲ ಕಡೆಯಿಂದಲೂ ಜನಸಾಗರವೇ ಹರಿದು ಬರುವಂತೆ ಮಾಡಿದುದು, ವಚನ ಸಾಹಿತ್ಯದ ಹೆಗ್ಗಳಿಕೆ. ಅನುಭವಮಂಟಪದಲ್ಲಿ ಎಲ್ಲ ಸಮುದಾಯದವರೂ ಸಮಾವೇಶಗೊಂಡು ಚರ್ಚೆ, ಸಂವಾದಗಳ ಮೂಲಕ ತಮ್ಮ ತಮ್ಮ ಅನಿಸಿಕೆಗಳನ್ನು ಚಿಂತನೆಗಳನ್ನು ವಚನಗಳ ಮೂಲಕ ಅಭಿವ್ಯಕ್ತಿಸಿದ ಬಹು ದೊಡ್ಡ ಕ್ರಾಂತಿಯ ಮೂಲಕ ಮಾನವರ ನಡುವಣ ವೈಮನಸ್ಸು, ಅಸಮಾನ ಮನಃಸ್ಥಿತಿಗಳನ್ನು ಹೋಗಲಾಡಿಸಿ ಶಾಂತಿ ಸಾಮರಸ್ಯದಿಂದ ಬದುಕು ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟಿದ್ದು ವಚನಕಾರರ ವಚನಸಾಹಿತ್ಯದ ವಿಶ್ವಪ್ರಜ್ಞೆಗೆ ಸಾಕ್ಷಿಯಾಗಿದೆ. ❑

ಇಂದೆನ್ನ ಮನೆಗೆ ಒಡೆಯರು ಬಂದಡೆ
ತನುವೆಂಬ ಕಳಶದಲುದಕವ ತುಂಬಿ,
ಕಂಗಳ ಸೋನೆಯೊಡನೆ ಪಾದಾರ್ಚನೆಯ ಮಾಡುವೆ.
ನಿತ್ಯ ಶಾಂತಿಯೆಂಬ ಶೈತ್ಯದೊಡನೆ ಸುಗಂಧವ ಪೂಸುವೆ.
ಅಕ್ಷಯ ಸಂಪದವೆಂದರಿದು ಅಕ್ಷತೆಯನೇರಿಸುವೆ.
ಹೃದಯಕಮಲ ಪುಷ್ಪದೊಡನೆ ಪೂಜೆಯ ಮಾಡುವೆ.
ಸದ್ಭಾವನೆಯೊಡನೆ ಧೂಪವ ಬೀಸುವೆ.
ಶಿವಜ್ಞಾನ ಪ್ರಕಾಶದೊಡನೆ ಮಂಗಳಾರತಿಯನೆತ್ತುವೆ.
ನಿತ್ಯತೃಪ್ತಿಯೊಡನೆ ನೈವೇದ್ಯವ ಕೈಕೊಳಿಸುವೆ.
ಪರಿಣಾಮದೊಡನೆ ಕರ್ಪೂರ ವೀಳೆಯವ ಕೊಡುವೆ.
ಪಂಚಬ್ರಹ್ಮದೊಡನೆ ಪಂಚಮಹಾವಾದ್ಯವ ಕೇಳಿಸುವೆ.
ಹರುಷದೊಡನೆ ನೋಡುವೆ,
ಆನಂದದೊಡನೆ ಕುಣಿಕುಣಿದಾಡುವೆ,
ಪರವಶದೊಡನೆ ಹಾಡುವೆ, ಭಕ್ತಿಯೊಡನೆ ಎರಗುವೆ,
ನಿತ್ಯದೊಡನೆ ಕೂಡಿ ಆಡುವೆ.
ಚೆನ್ನಮಲ್ಲಿಕಾರ್ಜುನಾ, ನಿಮ್ಮ ನಿಲವ ತೋರಿದ ಗುರುವಿನಡಿಯಲ್ಲಿ ಅರನಾಗಿ ಕರಗುವೆ.

– ಅಕ್ಕಮಹಾದೇವಿ

# ಶಿವನಾಟದ ಸವಿಯುಂಡ ಕುಂಬಾರ ಗುಂಡಯ್ಯ

ಧರ್ಮಣ್ಣ ಕುಂಬಾರ

ಇತಿಹಾಸದ ಪುಟ ಸೇರಿದ ಹರಪ್ಪ ಮೊಹೆಂಜೋದಾರ ಸೇರಿದಂತೆ ಮಣ್ಣಿನಡಿ ಹೂತುಹೋಗಿರುವ ಈ ಜಗದ ನಾನಾ ವೈಭವಪೂರ್ಣ ನಾಗರಿಕತೆಗಳ ಕುರುಹುಗಳಾಗಿವೆ. ಇತಿಹಾಸಕಾರರು ನೆಲವನ್ನು ಬಗೆದಾಗ ಅವರಿಗೆ ಸಿಗುವ ಅತ್ಯಮೂಲ್ಯ ವಸ್ತುಗಳಲ್ಲಿ ಕುಂಬಾರಿಕೆಯ ಮಡಿಕೆ–ಕುಡಿಕೆಗಳೇ ಅತ್ಯಂತ ಪ್ರಧಾನವಾದದ್ದು. ಇವೇ ಭಾರತದ ಇತಿಹಾಸದ ಪ್ರಮುಖ ಕೊಂಡಿಗಳು. ಶತಶತಮಾನಗಳಿಂದಲೂ ಮಣ್ಣಿನಡಿ ಇದ್ದರೂ ಹಾಳಾಗದೆ ಇತಿಹಾಸ ಅಧ್ಯಯನಕಾರರಿಗೆ ಸಿಗುವ ಅನರ್ಘ್ಯ ರತ್ನಗಳು. ಈ ನಾಗರಿಕತೆಯ ಹುಟ್ಟಿನೊಂದಿಗೆ ತಾನು ಹುಟ್ಟಿ ಮಣ್ಣು, ನೀರು, ಬೆಂಕಿಗಳಂತಹ ಪಂಚಭೂತಾತ್ಮಗಳನ್ನೇ ಮೂಲ ಬಂಡವಾಳವನ್ನಾಗಿಸಿಕೊಂಡು ಜನ್ಮ ತಳೆದ ಈ ಜಗದ ಏಕಮೇವ ವೃತ್ತಿ ಎಂದರೆ ಅದು ಕುಂಬಾರಿಕೆ ಮಾತ್ರ!

ಕುಂಬಾರಿಕೆಯ ಕಾಯಕದಲ್ಲಿ ಶಿವನನ್ನು ಕಂಡ ಮಹಾಶರಣರು ಗುಂಡಯ್ಯನವರು. ಈ ಶರಣರು ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಬಾಳಿದವರು. ಬಸವಣ್ಣನವರ ಸಮಕಾಲೀನರು. ವೃತ್ತಿಯಿಂದ ಕುಂಬಾರರಾಗಿದ್ದು ಮಣ್ಣಿನಿಂದ ತಯಾರಿಸಿದ ವಸ್ತುಗಳನ್ನು ರೈತರಿಗೆ ಮಾಡಿಕೊಡುತ್ತಿದ್ದರು. ಶರಣ ಕುಂಬಾರ ಗುಂಡಯ್ಯನವರ ಧರ್ಮಪತ್ನಿ ಶರಣೆ ಕೇತಲಾದೇವಿ.

ಕಾಯಕವೇ ಪೂಜೆ, ಕಾಯಕವೇ ಧರ್ಮಾಚರಣೆ ಎಂದು ನಂಬಿದ್ದ ಗುಂಡಯ್ಯ ಶರಣರು ತನು–ಮನ–ಧನದಿಂದ ಕಾಯಕವನ್ನು ನಿರ್ವಹಿಸುತ್ತಿದ್ದರು. ಜನಸಾಮಾನ್ಯರ ನಂಬಿಕೆಗೆ ಹತ್ತಿರವಾಗಿರುವ ಪವಾಡಗಳು, ಪುಣ್ಯಪುರುಷರ, ಮಹಾಪುರುಷರ, ಭಕ್ತರ ಶರಣರ ಜೀವನದಲ್ಲಿ ತುಂಬಿವೆ. ಅವುಗಳನ್ನು ವೈಜ್ಞಾನಿಕವಾಗಿ ಒರೆಗಲ್ಲಿಗೆ ಹಚ್ಚುವ ಕಾರಣವಿಲ್ಲ. ಅದೊಂದು ನೀತಿಯ ನೆಲೆಯನ್ನು ತೋರಿಸುತ್ತದೆ. ಮನಸ್ಸಿಗೆ ಮುದವನ್ನು ನೀಡುತ್ತದೆ.

ಕಾಯಕವನ್ನು ಮಾಡಿ ಉಪಜೀವನವನ್ನು ಸಾಗಿಸುವ ಅಧಿಕಾರವು ಸಕಲರಿಗೂ ಸಮನಾಗಿರುವುದರಿಂದ, "ಒಬ್ಬ ವಕೀಲನ ಕಾಯಕಕ್ಕೆ ಇರುವ ಬೆಲೆ, ಒಬ್ಬ ಕ್ಷೌರಿಕನ ಕಾಯಕಕ್ಕೂ ಇದೆ" ಎಂಬ ಮಹಾತ್ಮಾ ಗಾಂಧೀಜಿಯವರ ಹೇಳಿಕೆ ಶರಣರ ಆದರ್ಶವನ್ನು ಬೆಂಬಲಿಸುತ್ತದೆ. ಶರಣರು ಕಾಯಕದಲ್ಲಿ ಶ್ರೇಷ್ಠ–ಕನಿಷ್ಠವೆಂಬ ತಾರತಮ್ಯವನ್ನು ತೊಡೆದು ಹಾಕಿದವರು. ಕಸಗುಡಿಸುವುದರಿಂದ ಹಿಡಿದು ಕತ್ತಿ ತಿರುಗಿಸುವವರೆಗೆ ಕೆಲಸದ ಸ್ವರೂಪ ಬೇರೆಯಾದರೂ ಮಾನವನ ಜೀವನಕ್ಕೆ ಅವೆಲ್ಲವುಗಳ ಅವಶ್ಯಕತೆ ಇದೆಯೆಂದು ಶರಣರು

ತಿಳಿದಿದ್ದರು. ಅಂತೆಯೇ ಗಂಡುಹೆಣ್ಣೆಂಬ ಭೇದವನ್ನು ಕೂಡ ಶರಣರು ಒಪ್ಪಲಿಲ್ಲ. ಸರಿಯಾದ ಅವಕಾಶಗಳನ್ನು ಕಲ್ಪಿಸಿದರೆ ಹೆಣ್ಣು ಮತ್ತು ಗಂಡು ಕೂಡ ಸರಿಸಮನಾಗಿ ನಿಲ್ಲಬಲ್ಲರೆಂಬುದನ್ನು ಶರಣರು ತೋರಿಸಿದ್ದಾರೆ. ಇಂಥ ಪರಂಪರೆಯಿಂದ ಪ್ರಭಾವಿತರಾಗಿ ಅಂದಿನ ಸಮಾಜದ ಬಹುಸಂಖ್ಯೆಯ ಜನರು ಶರಣಧರ್ಮವನ್ನು ಅನುಸರಿಸಿದ್ದರು. ಸಮಗಾರ, ಬಡಿಗೇರ, ಕುಂಬಾರ, ಕಮ್ಮಾರ ಮೊದಲಾದ ಹಲವು ವೃತ್ತಿಯವರು ನಡೆ-ನುಡಿ ಒಂದಾಗಿ ಬದುಕಲು ಕಟಿ ಬದ್ಧರಾಗಿದ್ದರು. ಇವರಲ್ಲಿ ಗುಂಡಯ್ಯನು ವೃತ್ತಿಯಿಂದ ಕುಂಬಾರನಾದರೂ ಪ್ರವೃತ್ತಿಯಿಂದ ಶರಣರಾಗಿ ಹೆಸರು ಮಾಡಿದ್ದಾರೆ.

ಬಸವಣ್ಣನವರು, ಚನ್ನಬಸವಣ್ಣವರು, ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿಯರಂತೆ ಕಾಯಕ ಮತ್ತು ಬುದ್ಧಿಮತ್ತೆಯಲ್ಲಿಯೂ ಪ್ರಸಿದ್ಧಿ ಪಡೆದವರು ಕೆಲವರು. ಮುಗ್ಧ ಭಕ್ತಿಯಿಂದ ಬೆಳೆದವರು. ಕೆಲವರು ಜ್ಞಾನಯೋಗ, ಸಂಸಾರಯೋಗ, ಭಕ್ತಿಯೋಗ, ಕಾಯಕಯೋಗಗಳನ್ನು ಒಂದುಗೂಡಿಸಿಕೊಂಡು ನಡೆದವರು ಕೆಲವರು. ಭಕ್ತಿ ಕಾಯಕ ಯೋಗಗಳಿಂದ ಹೆಸರುವಾಸಿಯಾದವರೂ ಇದ್ದಾರೆ. ಇಂಥ ಮುಗ್ಧ ಭಕ್ತರ ಸಾಲಿಗೆ ಗುಂಡಯ್ಯನವರೂ ಸೇರುತ್ತಾರೆ.

ಕಾಯಕವೆ ಶಿವಭಕ್ತಿ ಕಾಯಕವೆ ಶಿವಭಜನೆ
ಕಾಯಕವೆ ಲಿಂಗ ಶಿವಪೂಜೆ-ಶಿವಯೋಗ
ಕಾಯಕವೆ ಕಯ್ಯ ಕೈಲಾಸ

ಗುಂಡಯ್ಯನ ಕನಸಿನ ಕಾಯಕವೇ ಮಣ್ಣು ಕರಣಗಳನ್ನು ಹದಮಾಡಿದಂತೆ ಅರಲು ಮಿದ್ದುತ್ತಿದ್ದನು. ತಿಗುರಿಯ ಹಲ್ಲುಗಳೇ ಅರಿಷಡ್ವರ್ಗಗಳಂತಿದ್ದವು. ಅವನ ನಿಷ್ಠೆಯೇ ತಿಗುರಿ. ಕೈಯಾರೆ ಅದನ್ನು ಮುಟ್ಟಿ ತಿರುಗಿಸುವ ಜೀವವೇ ಅವನು ಮಾಡುವ ಭಕ್ತಿಯಾಗಿತ್ತು. ಮತ್ತೊಂದು ರೀತಿಯಲ್ಲಿ ಅವನ ಅಂತರಂಗವೇ ತಿಗರಿಯಾಗಿ ಚಿಂತೆ ತುಂಬಿದ ಬಾಳನ್ನೇ ಕಸುಬು ಮಾಡಿ ಶಿವನಿಷ್ಠೆಯನ್ನು ತಿಗರಿಯ ಕ್ರಿಯೆಯನ್ನಾಗಿ ಮಾಡಿದಾಗ ಶಿವಭಕ್ತಿಯೇ ಗಡಿಗೆಯ ರೂಪವನ್ನು ತಾಳಿ ನಿಂತಂತಾಗುತ್ತಿತ್ತು.

ಗುಂಡಯ್ಯ ಮೂರುಲಿಂಗದ ಕಳೆಯನ್ನು ಬೀರುತ್ತ ಆ ಕಳೆಯನ್ನು ತನ್ನೊಳಗೆ ತೋರುತ್ತ ಕಾಯಕದಲ್ಲಿ ನಿರತರಾಗುತ್ತಿದ್ದರು. ಅವರಿಗೆ ಕಾಯಕವೇ ಶಿವಭಜನೆ, ಕಾಯಕವೇ ಲಿಂಗಪೂಜೆ, ಕಾಯಕವೇ ಶಿವಯೋಗ, ಕಾಯಕವೇ ಕೈಲಾಸವಾಗಿತ್ತು.

ಗುಂಡಯ್ಯ ಭಕ್ತಸ್ಥಲದಿಂದ ಪ್ರಾಣಲಿಂಗಿಯಾಗಿದ್ದನ್ನು ಪ್ರಾಣಲಿಂಗದಲ್ಲಿ ಶಿವಬೆಳಕು ಕಾಣುತ್ತ ನಿರಂತರ ಕಾಯಕದಲ್ಲಿ ನಿರತರಾಗಿರುತ್ತಿದ್ದರು. ಇತ್ತ ಅವರ ಧರ್ಮಪತ್ನಿ ಶರಣೆ ಕೇತಲದೇವಿ ಮನೆಗೆಲಸ ಮುಗಿಸಿಕೊಂಡು ಕುಂಬಾರಸಾಲೆಗೆ ಬರುತ್ತಿದ್ದಳು. ಅರಲು ಕಲ್ಪಿಸಿಕೊಂಡು ಹೆಂಚುಗಳನ್ನು ಮತ್ತು ಒಲೆಗಳನ್ನು ಮಾಡುತ್ತಿದ್ದಳು.

ಸಂಜೆಯವರೆಗೂ ಕುಂಬಾರಸಾಲೆಯಲ್ಲಿದ್ದು ನಂತರ ಮನೆಗೆ ಬಂದು ಮನೆಗೆಲಸದಲ್ಲಿ ತೊಡಗುತ್ತಿದ್ದಳು. ಅಡುಗೆ ಮಾಡಿ ಗುಂಡಯ್ಯನವರು ಬರುವವರೆಗೂ ಓದು-ಬರಹದಲ್ಲಿ ನಿರತಳಾಗುತ್ತಿದ್ದಳು. ಆಗಾಗ ವಚನವನ್ನೂ ಬರೆಯುತ್ತಿದ್ದಳು. ಅವಳು ಬರೆದ ಒಂದು ವಚನ ಹೀಗಿದೆ;

ಹದ ಮಣ್ಣಲ್ಲದೆ ಮಡಿಕೆಯಾಗಲಾರದು,
ವ್ರತಹೀನನ ಬೆರೆಯಲಾಗದು,
ಬೆರೆದಡೆ ನರಕ ತಪ್ಪದು,
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ

ಈ ವಚನ ಗಂಡ-ಹೆಂಡತಿ ಮಾಡಬೇಕಾದ ನಿತ್ಯನಿಯಮವಾದ ಕಾಯಕವನ್ನು ಕುರಿತು ಹೇಳಿದ್ದಾಗಿದೆ. ಮಣ್ಣಿನ ಹದ ತಪ್ಪಿದರೆ ಮಡಿಕೆಯಾಗದು. ಅಂತೆಯೇ ಹದವನರಿತ ನಿಯಮಾಚರಣೆ ಬೇಕು. ಅದಿಲ್ಲದೇ ಜೀವನದಲ್ಲಿ ಅರ್ಥವಿಲ್ಲ. ಕಾರಣ, ತನ್ನ ಗಂಡನಾದರೂ ವ್ರತಾಚರಣೆ ಮೀರದೆ ನಡೆದರೆ ಸರಿ, ಇಲ್ಲದಿದ್ದರೆ ಅಂಥವರ ಸಂಗ ಅಸಹನೀಯವೆಂದು ತಿಳಿದಿದ್ದಳು. ಇಂಥ ಎಚ್ಚರಿಕೆಯನ್ನು ಗುಂಡಯ್ಯನವರಿಗೂ ನೀಡುತ್ತಿದ್ದಳು. ಏಕೆಂದರೆ ತನ್ನ ಪತಿ ಕಾಯಕವನ್ನು ಅಚಲ ನಿಷ್ಠೆಯಿಂದ ನಡೆಸಿಕೊಂಡು ಹೋಗಲಿ ಎಂಬ ಬಯಕೆ ಆಕೆಯದಾಗಿತ್ತು.

ಮಡಕೆಗಳ ಬಾರಿಸುತ ತೊಡಗಿದ್ದ ಕುಣಿತದೊಳು
ಹೆಡೆಯೆತ್ತಿ ನಾಗಮಣಿಯಂತೆ ಗುಂಡಯ್ಯ
ತಡೆತಡೆದು ಹೆಜ್ಜೆ ಹಾಕುತಲಿ

ಗುಂಡಯ್ಯನು ಮಡಕೆಯನ್ನು ತಟ್ಟುತ್ತ ಓಲಾಡುತ್ತಿದ್ದಂತೆ ಅವರೊಳಗಿನ ಲಿಂಗರೂಪಿ ಶಿವನು ಕೂಡಾ ಆವನಂತೆಯೇ ನಲಿದಾಡುತ್ತಿದ್ದನು. ಹೀಗೆ ಹಲವಾರು ದಿನ ಶರಣರು ಒಲವಿನಿಂದ ಬಾರಿಸುವದು, ಪ್ರಾಣಲಿಂಗಿಯಾದ ಗುಂಡಯ್ಯನ ಜೊತೆಗೆ ಶಿವನು ನಲಿಯುವದು ನಡೆದೇ ಇತ್ತು. ಆಗ ಕೈಲಾಸದಲ್ಲಿ ಗಿರಿಜೆಯು ಕೌತುಕದಿಂದ ಹೀಗೆ ಕೇಳಿದಳು : "ನಿಮ್ಮನ್ನು ಮರೆಸಿದ ಭಕ್ತನಾರು. ನನಗೆ ತಿಳಿಯುವ ಆತುರವಾಗಿದೆ. ಇದೊಂದು ಹೊಸ ಪರಿ. ಆ ಕುಣಿತವನ್ನು ನೋಡುವ ಆಸೆಯಾಗಿದೆ". ಆಗ ಶಿವನು "ದೇವಿ, ನಿನಗೂ ಆ ಅದ್ಭುತವನ್ನು ತೋರುತ್ತೇನೆ. ನಡೆ" ಎಂದನು. ತರುವಾಯ ಶಿವನು ಗಿರಿಜೆಯೊಡನೆ ಭೂಲೋಕಕ್ಕೆ ಬಂದು ಗಡಿಗೆಯ ನಾದದೊಡನೆ ಒಂದಾಗಿದ್ದ ಗುಂಡಯ್ಯನ ಮನೆಯ ಮುಂದೆ ನಿಂತನು. ಹೆಡೆಯೆತ್ತಿದ ನಾಗಮಣಿಯಂತೆ ಗುಂಡಯ್ಯನು ಕುಣಿಯುತ್ತಿದ್ದನು ; ಶಿವನು ಬಂದು ನಿಂತಿದ್ದನ್ನೂ ತಿಳಿಯದೆ ಕಾಯಕದ ಗುಂಗಿನಲ್ಲಿ ಮಡಕೆಯನ್ನು ಬಾರಿಸುತ್ತ ಕುಣಿದಾಡುತ್ತಿದ್ದನು.

ಗುಂಡಯ್ಯನ ಹೊಸ ನೃತ್ಯವನ್ನು ಕಂಡ ಶಿವನು ಮೈಮರೆತು ತಾನೂ ತನ್ನ ಕರಗಳನ್ನೆತ್ತಿಕೊಂಡು ಕುಣಿಯತೊಡಗಿದನು.

ಗುಂಡಯ್ಯನನ್ನು ಎಚ್ಚರಿಸಲು ಶಿವನು ಅವನೊಳಗಾಡುತ್ತಿದ್ದ ಪ್ರಾಣಲಿಂಗವನ್ನು ಹಿಡಿದು ಎತ್ತಿದನು. ಶಿವರೂಪಿ ಲಿಂಗವು ಗುಂಡಯ್ಯನ ಎದೆ ಸೇರಿತು. ಆಗ ಗುಂಡಯ್ಯನು ಕಣ್ತೆರೆದನು. ಶಿವನನ್ನು ಎದುರಿಗೆ ಕಂಡು ಅತಿ ಸಂತೋಷದಿಂದ ಶಿವನಿಗೆ ಪ್ರದಕ್ಷಿಣೆ ಹಾಕಿದನು. ಆನಂದಿಸುತ್ತ, ಹಾರೈಸುತ್ತ, ಹೊಗಳುತ್ತ, ಓಲಾಡುತ್ತ ಗುಂಡಯ್ಯನು ಶಿವನ ಪಾದಗಳಿಗೆ ಎರಗಿದನು. ಶಿವನು ಗುಂಡಯ್ಯನನ್ನು ಹಿಡಿದೆತ್ತಿ ಆಲಂಗಿಸಿದನು.

ಈ ಮೂರು ಲೋಕದೊಳು ಹೂಮಾಲೆ ನಿನಗೀವೆ
ಭೂಮಿಯೊಳು ನಿನಗೆ ಮೆಚ್ಚಿದೆನು ಎಲೆ ಗುಂಡ
ಸೀಮೆ ಮೀರಿಹುದು ಶಿವಭಕ್ತಿ
ಶಿವಲೋಕದೊಳು ನಿನಗೆ ಶಿವಪದವ ಉಣಿಸುವೆನು
ಶಿವಗಣಕೆ ಸಾರಿ ಹೇಳುವೆನು ಗುಂಡಯ್ಯ
ಶಿವಶರಣನೆಂದು ನಡೆ ಮೊದಲು

ಶಿವನು ಅವನ ಭಕ್ತಿಗೆ ಮೆಚ್ಚಿ ನಸುನಕ್ಕು ಪ್ರೇಮದಿಂದ ನನ್ನ ನೆಚ್ಚಿನ ಭಕ್ತ ಗುಂಡಯ್ಯನೆ, ನಿನ್ನ ಭಕ್ತಿಗೆ ಮೆಚ್ಚಿಹೆನು. ಮೂರು ಲೋಕದ ಹೂಮಾಲೆ ನಿನಗಿದೆ. ನಿನಗೆ ಶಿವಪದವನ್ನು ಕರುಣಿಸುವೆನು. ನಿನ್ನ ಭಕ್ತಿಯನ್ನು ಶಿವಗಣಕೆ ಸಾರಿ ಹೇಳುವೆನು. ನನ್ನೊಡನೆ ನಡೆ ಶಿವಲೋಕಕ್ಕೆ" ಎಂದನು. ಆಗ ಗುಂಡಯ್ಯನು "ನನಗೆ ಕೈಲಾಸ ಬೇಡ. ನನ್ನ ಕಾಯಕ ಕೆಡದಿರಲಿ. ನನಗೆ ಕಾಯಕವನ್ನು ಕರುಣಿಸು" ಎಂದು ಬೇಡಿಕೊಂಡನು. ಗುಂಡಯ್ಯನ ಆ ಬೇಡಿಕೆಯನ್ನು ಕೇಳಿ ಶಿವನು ನಸುನಕ್ಕು ಮಿಂಚಿ ಬಯಲಾದನು.

ಬೇಡೆನಗೆ ಕೈಲಾಸ ಬಾಡುವುದು ಕಾಯಕವು
ನೀಡೆನಗೆ ಶಿವನೆ ಕಾಯಕವ - ಕುಣಿದಾಡಿ
ನಾಡ ಹಂದರಕೆ ಹಬ್ಬಿಸುವೆ

ಶರಣ ಗುಂಡಯ್ಯನವರು ಕಾಯಕ ಮಾಡಿ ಷಟ್‌ಸ್ಥಲಗಳನ್ನು ಸಾಧಿಸಿ ಸಮರಸ ಭಕ್ತಿಯಲ್ಲಿ ಐಕ್ಯರಾದರು. ಶಿವನು ಭಕ್ತನನ್ನು ಕರೆದೊಯ್ಯಲು ಪುಷ್ಪಕವಿಮಾನವನ್ನು ತಂದನು. ಗುಂಡಯ್ಯನೊಡಗೂಡಿ ಶಿವನು ಪುಷ್ಪಕವನ್ನು ಏರುತ್ತಿರುವಾಗ ದೇವಲೋಕದಿಂದ ಹೂಮಳೆ ಸುರಿಯುತ್ತಿತ್ತು.

ಗುಂಡ ತಿಗರಿಯ ತಿರುವಿ ದುಂಡಧಾರಿಯು ಕುಣಿದು
ಥಂಡಿ ಬೀಳುತಲಿ ಬೆಳವಲಕೆ ಕುಂಬಾರ
ಗಿಂಡಿ ರಸಗಾಳಿ ಬೀಸುತಲಿ

ಶರಣರು ಜಗದ ನೂರಾಸೆಯನ್ನು ಸುಟ್ಟು ಗುಂಡಯ್ಯನವರ ಮನವನ್ನು ಹಿಂಡಿ ಸೋಸಿ ಮಾಡಿದ ಮಡಿಕೆಯಿಂದ ಶಿವಭಕ್ತಿ ರಸಗಾಳಿ ಶಿವಸಾರವನ್ನು ಗುಂಡಯ್ಯನು ಜನತೆಗೆ ಕೊಟ್ಟನು. ಅವನ ಭಕ್ತಿಯ ಹಿರಿಮೆಯಿಂದ ಇಂದಿಗೂ ಅವನ ನಾಡಿಗೆ ಕುಂಬಾರಗಿಂಡಿ ರಸಗಾಳಿ ಬೀಸುತ್ತದೆ. ಆದರಿಂದ ಕುಂಬಾರ ಗಾಳಿಯೆಂದು ಕರೆದು ಹಳ್ಳಿಗರು ಕುಂಬಾರ ಗುಂಡಯ್ಯನ ನೆನಹನ್ನು ನಿತ್ಯಜೀವನದಲ್ಲಿ ನಿಲ್ಲಿಸಿಕೊಂಡಿದ್ದಾರೆ ಆ ರಸಗಾಳಿ ವರ್ಷದಲ್ಲೊಮ್ಮೆ ಬೀಸಿದರೆ ಗುಂಡಯ್ಯನ ಭಕ್ತಿಯ ರಸಗಾಳಿ ಹಗಲಿರುಳು ಬೀಸುತ್ತಿದೆ. ಬೀಸುತ್ತಿರಲಿ. ಹಿಂಗಾರು ಬೆಳೆ ಸಾಗಿ ಮುಂಗಡವಾಗಿ ಬೆಳೆ ಬರುತ್ತದೆ. ಗೋದಿ, ಕಡಲೆ, ಬಿಳಿಜೋಳವನ್ನು ಬೆಳವಲದವರು ಬಿತ್ತುವಂತಾಗಿದೆಯೆಂದು ಇಂದಿಗೂ ರೈತರು ನಂಬಿ ಗುಂಡಯ್ಯನನ್ನು ನೆನೆಯುತ್ತಾರೆ.

ಮುಖ್ಯವಾಗಿ ಎಲ್ಲ ಅತ್ಯಾಧುನಿಕ ತಂತ್ರಜ್ಞಾನಗಳ ಮೂಲ ಇರುವುದು ಕುಂಬಾರಿಕೆಯಲ್ಲಿ. ಚಕ್ರವೊಂದು ಗರಗರನೆ ತಿರುಗಿದರೆ ಅಲ್ಲೊಂದು ಅದ್ಭುತ ತಂತ್ರಜ್ಞಾನ ಸೃಷ್ಟಿಯಾಗುತ್ತಿದೆ ಎನ್ನುವುದನ್ನು ಮಡಿಕೆ ಮಾಡುವ ಮೂಲಕ ತೋರಿಸಿಕೊಟ್ಟ ಮೊದಲ ತಂತ್ರಜ್ಞಾನವೂ ಕುಂಬಾರಿಕೆಯೇ ಆಗಿತ್ತಲ್ಲವೆ ಎಂಬುದು ಚಿಂತನೀಯ.

ಈವತ್ತಿನ ಆಧುನಿಕ ಯುಗದಲ್ಲಿ ಮಣ್ಣಿನ ಪಾತ್ರೆಗಳು ಮಾಯವಾಗಿವೆ. ತಂತ್ರಜ್ಞಾನದಿಂದ ಕಂಚು, ತಾಮ್ರ, ಹಿತ್ತಾಳೆ, ಸ್ಟೀಲ್ ಪಾತ್ರೆಗಳು ಬಳಕೆಗೆ ಬಂದಿವೆ. ಇವತ್ತು ವಾಹನಗಳ ಚಕ್ರಗಳಿಗೆ ಕುಂಬಾರನ ಚಕ್ರವೇ ಸ್ಫೂರ್ತಿಯಾಗಿರಬಹುದು.

ಇಂದಿನ ದಿನಗಳಲ್ಲಿ ನಾವೂ ಅವರನ್ನು ಮರೆಯುತ್ತಾ ಸಾಗುತ್ತಿದ್ದೇವೆ. ಹಿಂದಿನಿಂದಲೂ ಮಣ್ಣೆತ್ತಿನ ಅಮವಾಸ್ಯೆ ದಿನದಂದು ಕುಂಬಾರ ಗುಂಡಯ್ಯನವರ ಸ್ಮರಣೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ. ಕರ್ನಾಟಕ ಸರಕಾರವೂ ಕೂಡಾ ಎಲ್ಲ ಶಿವ–ಶರಣರಂತೆ ಕುಂಬಾರ ಗುಂಡಯ್ಯನವರ ಸ್ಮರಣೋತ್ಸವವನ್ನು ಆಚರಿಸುವಂತಾಗಬೇಕು.

ನಮ್ಮ ದೇಶದಲ್ಲಿ ನಮ್ಮ ನಾಡಿನಲ್ಲಿ ಎಷ್ಟೋ ಜನ ಶರಣರು, ಸಂತರು ತತ್ವ ಶುದ್ಧ ಕಾಯಕವನ್ನು ಮಾಡಿ ಮುಕ್ತಿ ಪಡೆದಿದ್ದಾರೆ. ಆದರೆ ಗುಂಡಯ್ಯನವರ ಭಕ್ತಿಗೆ ಶಿವನು ಮೆಚ್ಚಿ ಗುಂಡಯ್ಯನವರ ಮನೆಯ ಬಾಗಿಲಿಗೆ ಸಾಕ್ಷಾತ್ ಶಿವನೇ ಬಂದು "ನಿನ್ನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತೇನೆ ನಡೆ ಎಂದರೂ ಕೈಲಾಸ ನನಗೆ ಬೇಡ" ಎಂದ ಕಾಯಕಯೋಗಿ ಗುಂಡಯ್ಯನವರು. ಅಂದರೆ, ಅವರು ಮಾಡುವ ಕಾಯಕದ ಮೇಲೆ ಇರುವ ಶಿವಭಕ್ತಿಯೇ ಅದಕ್ಕೆ ಕಾರಣ.

ಶರಣರು, ಸಂತರು ಒಂದೊಂದು ಕಾಯಕದ ಮೂಲಕ ಬದುಕುವ ಕಲೆಯನ್ನು ತೋರಿಸಿಕೊಟ್ಟಿದ್ದಾರೆ. ಮಾನವನು ಬದುಕಬೇಕು ಎಂದರೆ ತಿನ್ನಲಿಕ್ಕೆ ಅನ್ನ ಬೇಕು.

ಅಂದರೆ ಪ್ರಸಾದ ಬೇಕು. ಪ್ರಸಾದವನ್ನು ತಯಾರಿಸುವುದು ಹೇಗೆ ಎಂದು ತೋರಿಸಿಕೊಟ್ಟವರು ಶರಣ ಕುಂಬಾರ ಗುಂಡಯ್ಯನವರು.

ಒಂದು ಮಣ್ಣಿನ ಪಾತ್ರೆಯನ್ನು ತಯಾರಿಸಬೇಕಾದರೆ ಮಣ್ಣು, ನೀರು, ಗಾಳಿ, ಬಿಸಿಲು, ಬೆಂಕಿ, ಈ ಪಂಚಭೂತಗಳನ್ನು ಕೂಡಿಸಿ ಹದಮಾಡಿ, ಒಂದು ಚಕ್ರದಿಂದ ಮಡಕೆಯನ್ನು ತಯಾರಿಸಿದವರು ಕುಂಬಾರ ಗುಂಡಯ್ಯನವರು. ಕಾಲಚಕ್ರ ತಿರುಗುತ್ತಿದೆ, ಜನರು ಈಗ ಬದಲಾಗುತ್ತಿದ್ದಾರೆ. ಮಣ್ಣಿನ ಪಾತ್ರೆಗಳಲ್ಲಿ ಮಾಡಿದ ಪದಾರ್ಥವೇ ಮನುಷ್ಯನ ಆರೋಗ್ಯಕ್ಕೆ ಒಳ್ಳೆಯದೆಂದು ವಿಜ್ಞಾನಿಗಳೂ ಹೇಳುತ್ತಿದ್ದಾರೆ.

❑

ಅಯ್ಯಾ ಆರೂ ಇಲ್ಲದ ಅರಣ್ಯದಲ್ಲಿ, ನಾನಡಿಯಿಟ್ಟು
ನಡವುತ್ತಿರ್ದೆನಯ್ಯಾ.
ಮುಂದೆ ಬರಬರೆ ಮಹಾಸರೋವರವ ಕಂಡೆ.
ಸರೋವರದೊಳಗೊಂದು ಹಿರಿಯ ಮೃಗವ ಕಂಡೆ.
ಆ ಮೃಗಕ್ಕೆ ಕೊಂಬುಂಟು ತಲೆಯಿಲ್ಲ,
ಬಾಯುಂಟು ಕಣ್ಣಿಲ್ಲ, ಕೈಯುಂಟು ಹಸ್ತವಿಲ್ಲ,
ಕಾಲುಂಟು ಹೆಜ್ಜೆಯಿಲ್ಲ, ಒಡಲುಂಟು ಪ್ರಾಣವಿಲ್ಲ.
ಇದ ಕಂಡು ನಾ ಹೆದರಿ, ಹವ್ವನೆ ಹಾರಿ, ಬೆದರಿ ಬಿದ್ದೆನಯ್ಯಾ.
ಆಗೆನ್ನ ಹೆತ್ತತಾಯಿ ಬಂದು ಎತ್ತಿ ಕುಳ್ಳಿರಿಸಿ,
ಚಿತ್ತಮೂಲಾಗ್ನಿಯ ಒತ್ತಿ ಉರುಹಿದರೆ, ಇವೆಲ್ಲವು ಸುಟ್ಟು
ಬಟ್ಟಬಯಲಾದವು.
ಆ ಬಟ್ಟಬಯಲೊಳಗೆ ಅಡಿಯಿಟ್ಟು ನಡೆವಾಗ,
ಮುಂದೆ ಇಟ್ಟಡಿಯ ಬಾಗಿಲೊಳಗೆ ಮತ್ತೊಂದು ಮೃಗವ ಕಂಡೆ.
ಆ ಮೃಗಕ್ಕೆ ತಲೆಯುಂಟು ಕೊಂಬಿಲ್ಲ, ಕಣ್ಣುಂಟು ಬಾಯಿಲ್ಲ,
ಹಸ್ತವುಂಟು ಕೈಯಿಲ್ಲ, ಹೆಜ್ಜೆಯುಂಟು ಕಾಲಿಲ್ಲ, ಪ್ರಾಣವುಂಟು ಒಡಲಿಲ್ಲ.
ಇದ ಕಂಡು ನಾ ಅಪ್ಪಿಕೊಳಹೋದಡೆ, ಮುಟ್ಟದ ಮುನ್ನವೆ ಎನ್ನನೆ
ನುಂಗಿತ್ತು.
ನುಂಗಿದ ಮೃಗ ಮಹಾಲಿಂಗದಲ್ಲಿಯೆ ಅಡಗಿತ್ತು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

– ಹಡಪದ ಅಪ್ಪಣ್ಣ

# ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ

ಡಾ. ಎಸ್.ಜಿ. ರಾಮದಾಸ ರೆಡ್ಡಿ

ಚಾಮರಾಜನಗರ ಮೈಸೂರು ನಗರದಿಂದ 60 ಕಿ.ಮೀ. ದೂರದಲ್ಲಿದೆ. ಚಾಮರಾಜನಗರ ಜಿಲ್ಲೆಯು ಮೈಸೂರು, ಮಂಡ್ಯ ಹಾಗೂ ರಾಮನಗರ ಜಿಲ್ಲೆ ಮತ್ತು ಹೊರ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡುಗಳಿಂದ ಸುತ್ತುವರಿದಿದೆ. ದಕ್ಷಿಣೋತ್ತರವಾಗಿ ಹಸಿರು ಕಾಡುಗಳಿಂದ ಕೂಡಿರುವ ಪೂರ್ವಘಟ್ಟಗಳು ನೈಸರ್ಗಿಕವಾಗಿ ಅತ್ಯಂತ ಆಕರ್ಷಣೀಯವಾಗಿವೆ. ಇಲ್ಲಿ ಅಪಾರ ಪ್ರಮಾಣದ ಗ್ರಾನೈಟ್ ಶಿಲೆಗಳು, ಶ್ರೀಗಂಧ, ಆನೆದಂತ ಮುಂತಾದುವು ದೊರೆಯುತ್ತವೆ. ಜಿಲ್ಲೆಯ ಜೀವನಾಧಾರ ಹಾಗೂ ಪುರಾತನ ಕಸುಬುಗಳಲ್ಲಿ ನೇಕಾರಿಕೆಯೂ ಒಂದಾಗಿದೆ. ರಾಜ್ಯದ ದಕ್ಷಿಣದಂಚಿನಲ್ಲಿರುವ ಈ ಜಿಲ್ಲೆಯು ಐತಿಹಾಸಿಕವಾಗಿಯೂ ವಿಶಿಷ್ಟ ಸ್ಥಾನವನ್ನು ಹೊಂದಿದೆ.

ತಲೆಮಾರುಗಳಿಂದ ವಾಸಿಸುತ್ತಿರುವ ಬುಡಕಟ್ಟು ಜನಾಂಗದವರು, ಮಹದೇಶ್ವರ ಬೆಟ್ಟ, ಮಹದೇಶ್ವರಸ್ವಾಮಿ ದೇವಾಲಯ. ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಬಂಡೀಪುರದಂತಹ ಪ್ರಸಿದ್ಧ ಅಭಯಾರಣ್ಯಗಳಿವೆ. ಇಲ್ಲಿ ಹರಿಯುವ ಪ್ರಮುಖ ನದಿಗಳೆಂದರೆ ಕಬಿನಿ, ಸುವರ್ಣಾವತಿ ಮತ್ತು ಗುಂಡಾಲ್ (ಕೌಂಡಿನ್ಯ ನದಿ).

**ಚಾಮರಾಜನಗರ ಹೆಸರಿನ ಉಗಮ**

ಐತಿಹಾಸಿಕ ಮತ್ತು ಭೌಗೋಳಿಕ ಲಕ್ಷಣಗಳ ಆಧಾರದ ಮೇಲೆ ಇಡೀ ಭಾರತದಲ್ಲೇ ವಿಶಿಷ್ಟವಾಗಿರುವ ಜಿಲ್ಲೆಯಾಗಿದೆ. ಈ ಊರನ್ನು ಕ್ರಿ.ಶ. 1818 ರವರೆಗೂ "ಅರಿಕುಠಾರ" ಎಂದೇ ಕರೆಯಲಾಗುತ್ತಿತ್ತು, ಮೂರನೇ ಕೃಷ್ಣರಾಜ ಒಡೆಯರ್ ಅವರ ತಂದೆ ಚಾಮರಾಜ ಒಡೆಯರ್ ಅವರು ಇಲ್ಲಿ ಜನಿಸಿದರು. ಅದರ ನೆನಪಿಗಾಗಿ "ಚಾಮರಾಜನಗರ" ಎಂದು ಇದಕ್ಕೆ ಹೊಸದಾಗಿ ನಾಮಕರಣ ಮಾಡಲಾಯಿತು. ಕ್ರಿ.ಶ. 1874 ರಿಂದಲೂ ತಾಲೂಕು ಕೇಂದ್ರವಾಗಿದ್ದ ಚಾಮರಾಜನಗರ ಮೈಸೂರು ಜಿಲ್ಲೆಯ ಭಾಗವಾಗಿತ್ತು. ಭಾರತ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಉಡುಗೊರೆಯಾಗಿ 1997ರ ಆಗಸ್ಟ್ 15ರಂದು ಚಾಮರಾಜನಗರವು ಹೊಸ ಜಿಲ್ಲೆಯಾಗಿ ಘೋಷಿತವಾಯಿತು.

**ಇತಿಹಾಸಪೂರ್ವ ಕಾಲ**

ಚಾಮರಾಜನಗರ ಜಿಲ್ಲೆಯಲ್ಲಿ ಕಾವೇರಿ ಹಾಗೂ ಇತರೆ ಉಪನದಿಗಳು ಹರಿಯುತ್ತಿರುವ ಕಾರಣ ಹಿಂದಿನಿಂದಲೂ ಇಲ್ಲಿ ಪ್ರಾಚೀನ ಮಾನವನ ವಸತಿಗಳು ಕಂಡುಬಂದಿವೆ. ಸಾಮಾನ್ಯವಾಗಿ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ನೆಲೆಗಳು ಮಾತ್ರ ಕಂಡುಬರುತ್ತವೆ. ಪ್ರಮುಖವಾಗಿ ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ ಪರಿಸರದಲ್ಲಿ ಇತಿಹಾಸ ಪೂರ್ವಕಾಲದ ನೆಲೆಗಳು ಬೆಳಕಿಗೆ ಬಂದಿವೆ. ಹೆಸರಾಂತ ಪುರಾತತ್ವತಜ್ಞರಾದ ರಾಬರ್ಟ್ ಬ್ರೂಸ್‌ಫೂಟ್, ಡಾ. ಎಂ. ಶೇಷಾದ್ರಿ, ಡಾ. ಸಿ. ಕೃಷ್ಣಮೂರ್ತಿ, ಡಾ. ಎಂ.ಎಸ್. ಕೃಷ್ಣಮೂರ್ತಿ, ಡಾ. ಎ.ವಿ. ನರಸಿಂಹಮೂರ್ತಿ, ಡಾ. ಎಸ್.ಜಿ. ರಾಮದಾಸ ರೆಡ್ಡಿ ಮೊದಲಾದವರು ಈ ಪ್ರದೇಶಗಳ ಸರ್ವೇಕ್ಷಣೆಯನ್ನು ಕೈಗೊಂಡಿದ್ದು ಅನೇಕ ಶಿಲಾಯುಗದ ನೆಲೆಗಳನ್ನು ಸಂಶೋಧಿಸಿ ಬೆಳಕಿಗೆ ತಂದಿದ್ದಾರೆ. ಈ ಅವಶೇಷಗಳ ಆಧಾರದ ಮೇಲೆ ಈ ಭಾಗವು ಕ್ರಿ.ಪೂ ಮೂರನೆಯ ಶತಮಾನದಿಂದ ಕ್ರಿ.ಶ. ಎರಡನೆಯ ಶತಮಾನದವರೆಗೂ ಶಿಲಾಯುಗದ ಮಾನವನ ವಾಸಸ್ಥಳವಾಗಿತ್ತೆಂದು ತಿಳಿದುಬರುತ್ತದೆ. ಅನಂತರ ಕ್ರಿ.ಶ. ನಾಲ್ಕನೆಯ ಶತಮಾನದ ಮಧ್ಯಭಾಗದಿಂದ 10ನೇ ಶತಮಾನದವರೆಗೂ ಕರ್ನಾಟಕದ ದಕ್ಷಿಣ ಭಾಗದಲ್ಲಿ ಆಳ್ವಿಕೆ ಮಾಡಿದ ತಲಕಾಡಿನ ಗಂಗರ ಅಧೀನದಲ್ಲಿತ್ತು. ಗಂಗರ ಪ್ರಸಿದ್ಧ ದೊರೆಯಾದ ದುರ್ವಿನೀತನ ಆಳ್ವಿಕೆಯ ಅವಧಿಯಲ್ಲಿ ಪುನ್ನಾಟ ಹಾಗೂ ಪುನ್ನಾಡ (ಬಾಣ) ಎಂಬ ಭಾಗಗಳು ಗಂಗ ಸಾಮ್ರಾಜ್ಯದಲ್ಲಿ ವಿಲೀನಗೊಂಡವು.

ಚಾಮರಾಜನಗರವು ಒಂದನೇ ರಾಜರಾಜ ಚೋಳನಿಂದ ಆರಂಭಗೊಂಡು ಮೊದಲನೇ ಕುಲೋತ್ತುಂಗ ಚೋಳನವರೆಗೂ, ಚೋಳರ ಆಳ್ವಿಕೆಗೆ ಒಳಪಟ್ಟಿತ್ತು. ಆ ಅವಧಿಗೆ ಸಂಬಂಧಿಸಿದ ಸುಮಾರು 12 ಶಾಸನಗಳು ಈ ಭಾಗದಲ್ಲಿ ದೊರೆತಿವೆ. ಇದರಲ್ಲಿ ಬಹಳ ಪ್ರಮುಖವಾದದ್ದು ಚಾಮರಾಜನಗರ ತಾಲೂಕಿನ ಕೆಂಪನಪುರ ಗ್ರಾಮದ ದೇವಸ್ಥಾನದ ಬಳಿ ಇರುವ ಕ್ರಿ.ಶ. 991ರ ಶಾಸನ. ಇದರಲ್ಲಿ ಒಂದನೇ ರಾಜರಾಜ ಚೋಳನನ್ನು "ಚೋಳನಾರಾಯಣ" ಎಂದು ಉಲ್ಲೇಖಿಸಲಾಗಿದೆ. ಯಳಂದೂರು ತಾಲೂಕು ಅಗರ ಗ್ರಾಮದ ವರದರಾಜ ದೇವಾಲಯದ ದಕ್ಷಿಣ ಗೋಡೆಯ ಮೇಲೆ ಮತ್ತು ಉತ್ತರಕ್ಕೆ ಬಿದ್ದಿರುವ ತಮಿಳು ಶಾಸನವು ಪದ್ಯರೂಪದಲ್ಲಿ ಸಂಸ್ಕೃತದಲ್ಲಿದ್ದು ಮೊದಲನೇ ಅಪರೂಪದ ಪ್ರಶಸ್ತಿ ಶಾಸನವಾಗಿರುವುದು ವಿಶೇಷವಾಗಿದೆ.

ಕರ್ನಾಟಕದ ಅತ್ಯಂತ ಜನಪ್ರಿಯ ರಾಜಮನೆತನವಾದ ಹೊಯ್ಸಳರ ಅರಸನಾದ ವಿಷ್ಣುವರ್ಧನನು ಗಂಗವಾಡಿ 96000ದ ಭಾಗವನ್ನು ಆಳುತ್ತಿದ್ದನೆಂಬ

ಬಗ್ಗೆ ಉಲ್ಲೇಖಗಳಿವೆ. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲ ಉಚ್ಛ್ರಾಯ ಸ್ಥಿತಿಯನ್ನು ಕಳೆದುಕೊಂಡು ಸಾಮ್ರಾಜ್ಯ ಪತನವಾದ ನಂತರ ಮೈಸೂರು ಒಡೆಯರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. 15ನೇ ಶತಮಾನದ ಅಂತ್ಯ ಹಾಗೂ 16ನೇ ಶತಮಾನದ ಆದಿಭಾಗದಲ್ಲಿ ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮತ್ತು ಜಿಲ್ಲೆಯ ಕೆಲವು ಭಾಗಗಳು ಉಮ್ಮತ್ತೂರಿನ ಪಾಳೆಯಗಾರ ಅಧೀನಕ್ಕೆ ಒಳಪಟ್ಟಿತ್ತು.

ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಹಲವಾರು ದೇವಾಲಯಗಳಿವೆ. ಅವುಗಳಲ್ಲಿ ಚಾಮರಾಜೇಶ್ವರ ದೇವಾಲಯವೂ ಸಹ ಒಂದು. ಆ ದೇವಾಲಯದ ಬಗ್ಗೆ ತಿಳಿಯೋಣ.

**ಚಾಮರಾಜೇಶ್ವರ ದೇವಾಲಯ**

ರಾಜ್ಯ ಪುರಾತತ್ವ ಇಲಾಖೆಯವರು ಜಿಲ್ಲೆಯ ಏಳು ದೇವಾಲಯಗಳನ್ನು ಸಂರಕ್ಷಿಸುವ ಕಾರ್ಯ ಮಾಡಿದ್ದಾರೆ. ಅವುಗಳಲ್ಲಿ ಚಾಮರಾಜನಗರದಲ್ಲಿರುವ ಚಾಮರಾಜೇಶ್ವರ ದೇವಾಲಯವೂ ಒಂದು.

ಈ ದೇವಾಲಯ ಚಾಮರಾಜನಗರದ ಹೃದಯಭಾಗದಲ್ಲಿದ್ದು ಜಿಲ್ಲೆಯ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆ. ದೇವಸ್ಥಾನವು ದ್ರಾವಿಡ ವಾಸ್ತುಶಿಲ್ಪದ ಅದ್ಭುತ ಚಿತ್ರಣವಾಗಿದೆ. ವಿವಿಧ ಪೌರಾಣಿಕ ಆಕರಗಳಿಂದ, ವಿವಿಧ ಬಣ್ಣಗಳ ವರ್ಣಚಿತ್ರಗಳನ್ನು ಹೊಂದಿದೆ. ಈ ದೇವಾಲಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ ತಂದೆ ಚಾಮರಾಜ ಒಡೆಯರ್ ಅವರ ಸ್ಮರಣಾರ್ಥ 1826ರಲ್ಲಿ ಇದನ್ನು ನಿರ್ಮಿಸಿದರು.

ದೇವಾಲಯದ ಮುಂದೆ ಏಕಶಿಲೆಯ ಎತ್ತರವಾದ ದೀಪಸ್ತಂಭ ಇದೆ. ದೀಪಸ್ತಂಭವನ್ನು ಗಮನಿಸಿ ದೇವಾಲಯದ ಕಡೆ ಕಣ್ಣು ಹಾಯಿಸಿದರೆ ಪೌಳಿಗೋಡೆ ಕಾಣುತ್ತದೆ. ದೇವಾಲಯದ ಸುತ್ತಲೂ ಸುಮಾರು 10 ಅಡಿ ಎತ್ತರದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದರ ಮೇಲೆ ಶಿಲ್ಪಪಟ್ಟಿಕೆಗಳಿವೆ. ಈ ಶಿಲ್ಪಪಟ್ಟಿಕೆಗಳಲ್ಲಿ ಗಣೇಶ, ಡಮರುಗಧಾರಿ ಶಿವ, ಸುಬ್ರಹ್ಮಣ್ಯ, ಮಹಿಷಮರ್ದಿನಿ ಶಿಲ್ಪ, ಅಷ್ಟಲಕ್ಷ್ಮಿಯರ ಶಿಲ್ಪಗಳು, ಇತರೆ ದೇವಾನುದೇವತೆಗಳ ಶಿಲ್ಪಗಳು ಸಹ ಇವೆ.

ಪೌಳಿಗೋಡೆ ಗಮನಿಸಿ ಮಂದೆ ಸಾಗಿದರೆ ರಾಜಗೋಪುರ ಕಾಣಿಸುತ್ತದೆ. ಇದು ಸುಮಾರು 70 ಅಡಿ ಎತ್ತರದ ಐದು ಅಂತಸ್ತುಳ್ಳ ಗೋಪುರ. ತುದಿಯಲ್ಲಿ 5 ಸುಂದರ ಸ್ವರ್ಣ ಲೇಪಿತ ಕಳಶಗಳಿವೆ. ಕಳಶಗಳ ಎಡ ಮತ್ತು ಬಲ ಭಾಗದಲ್ಲಿ ಎರಡು ಕೋಡುಗಳನ್ನು ನಿರ್ಮಿಸಿದ್ದಾರೆ. ಗೋಪುರದ ನಾಲ್ಕು ದಿಕ್ಕುಗಳಲ್ಲಿ

ಶಿಲಾಪಟ್ಟಿಕೆಗಳು ಇವೆ. ಈ ಪಟ್ಟಿಕೆಗಳಲ್ಲಿ ದೇವಾನುದೇವತೆಗಳ, ಅಷ್ಟಲಕ್ಷ್ಮಿಯರ, ನವದುರ್ಗೆಯರ ಶಿಲ್ಪಗಳಿವೆ. ಮುಖ್ಯದ್ವಾರದ ಮುಂದೆ ಎತ್ತರವಾದ 4 ಕಂಭಗಳಿವೆ. ಮುಂದೆ ಸಾಗಿದರೆ ಎತ್ತರವಾದ ಮಹಾದ್ವಾರ ಕಂಡುಬರುತ್ತದೆ.

ದೇವಾಲಯ: ದೇವಾಲಯದ ಮಹಾದ್ವಾರ ಪೂರ್ವದಿಕ್ಕಿಗೆ ಇದೆ. ದೇವಾಲಯದ ಮಹಾದ್ವಾರವನ್ನು ಪ್ರವೇಶಿಸಿ ಒಳನಡೆದರೆ ಮಹಾದ್ವಾರದ ಒಳಗಡೆ ಎಡಭಾಗದಲ್ಲಿ ಮಹಾಗಣಪತಿ, ಬಲಭಾಗದಲ್ಲಿ ಚಾಮುಂಡೇಶ್ವರಿ ಮೂರ್ತಿಗಳನ್ನು ಕಂಡರಿಸಿದ್ದಾರೆ. ಇನ್ನೂ ಮುಂದೆ ಸಾಗಿದರೆ ದೇವಾಲಯಕ್ಕೆ ವಿಶಾಲವಾದ ಪ್ರದಕ್ಷಿಣಾಪಥವಿದೆ. ಪ್ರದಕ್ಷಿಣಾಪಥದ ಎಡ ಭಾಗದ ಮೂಲಕ ಸಾಗಿದರೆ ದೇವಾಲಯದ ಪೌಳಿಗೋಡೆಗೆ ಹೊಂದಿಕೊಂಡಂತೆ ಒಳಭಾಗದ ದಕ್ಷಿಣದ ಗೋಡೆಯಲ್ಲಿ 64 ದೇವತೆಗಳ, ವಿವಿಧ ಹೆಸರುಗಳ ಲಿಂಗಗಳ ಮೂರ್ತಿಶಿಲ್ಪಗಳನ್ನು, ಉತ್ತರದ ಗೋಡೆಯಲ್ಲಿ 25 ಲೀಲಾಮೂರ್ತಿಗಳನ್ನು ಕಾಣಬಹುದು. ದೇವಾಲಯದ ಉತ್ತರದಲ್ಲಿ ಈಶ್ವರ ವಿಗ್ರಹ, ಈಶಾನ್ಯದಲ್ಲಿ ಯೋಗಶಾಲೆ, ಆಗ್ನೇಯದಲ್ಲಿ ಪಾಕಶಾಲೆ ಇದೆ.

ದೇವಾಲಯವನ್ನು 232 ಅಡಿ ಉದ್ದ, 195 ಅಡಿ ಅಗಲದ ವಿಶಾಲವಾದ ಪ್ರದೇಶದಲ್ಲಿ ನಿರ್ಮಿಸಲಾಗಿದೆ.

ನಂದಿ ಮಂಟಪ: ದೇವಾಲಯ ಪ್ರವೇಶ ಮಾಡಿದರೆ ಒಳಗಡೆ ವಿಶಾಲವಾದ ಪ್ರದಕ್ಷಿಣಾ ಪಥದಲ್ಲಿ ಅಂದರೆ ಚಾಮರಾಜೇಶ್ವರ ದೇವಾಲಯದ ಗರ್ಭಗುಡಿಗೆ ಎದುರಾಗಿ, ಮುಖಮಾಡಿರುವ ದೊಡ್ಡ ನಂದಿಯ ವಿಗ್ರಹ ಇದೆ. ಇದನ್ನು ಕಬ್ಬಿಣದ ಸರಳು, ಸಿಮೆಂಟ್ ಬಳಸಿ ಮಾಡಲಾಗಿದೆ. 4 ಕಂಬಗಳ ನಿರ್ಮಿತಿಯ ಕೆಳಗೆ ಚಿಕ್ಕ ಮಂಟಪದಲ್ಲಿ ನಂದಿ ಮಲಗಿದೆ. ಮೇಲೆ ಗುಮ್ಮಟ, ನಾಲ್ಕು ಮೂಲೆಗಳಲ್ಲಿ 4 ನಂದಿಶಿಲ್ಪಗಳು ಇವೆ, ಮೇಲೆ ಕಳಶ. ಶ್ರೀ ಚಾಮರಾಜೇಶ್ವರಸ್ವಾಮಿಯ ಮುಂಭಾಗದಲ್ಲಿ ದೊಡ್ಡ ನಂದಿ ಮತ್ತು ಬಲಿಪೀಠದ ಮಧ್ಯಭಾಗದಲ್ಲಿ ಧ್ವಜಸ್ತಂಭ ಇದೆ.

ನವರಂಗ: ದೇವಾಲಯವು ವಿಶಾಲವಾದ ನವರಂಗವನ್ನು ಹೊಂದಿದೆ. ಇದು 15 ಅಂಕಣಗಳಿಂದ ಕೂಡಿದೆ. ನಂದಿ ಮತ್ತು ಮಹಾಕಾಳರೆಂಬ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ 6 ಕಂಬಗಳು, 8 ಅರೆಗಂಬಗಳು ಇವೆ ಈ ಕಂಬಗಳ ಮೇಲೆ ವಿವಿಧ ಮೂರ್ತಿಗಳನ್ನು ಕೆತ್ತಿದೆ. ನವರಂಗದಲ್ಲಿ ಗಣೇಶ, ಶಿವನ ಚಂಡಿಕೇಶ್ವರ ರೂಪ, ಆರು ಲಿಂಗಗಳು, ಪ್ರತ್ಯೇಕ ಗುಡಿಗಳಲ್ಲಿ ಇವೆ. ನವರಂಗದಲ್ಲಿ ದಕ್ಷಿಣಾಭಿಮುಖವಾಗಿ ಶ್ರೀ ಪಾರ್ವತೀ ಸಮೇತ ಚಂದ್ರಶೇಖರ ಮೂರ್ತಿಯು ಉತ್ಸವಮೂರ್ತಿ ಇದೆ. ನವರಂಗದ ಎಡಭಾಗದಲ್ಲಿ

ದೇವಾಲಯವನ್ನು ನಿರ್ಮಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರು ಹಾಗೂ ಅವರ ನಾಲ್ವರು ಪತ್ನಿಯರ ಆಳೆತ್ತರದ ವಿಗ್ರಹಗಳಿವೆ. ಮುಮ್ಮಡಿ ಕೃಷ್ಣರಾಜ ಒಡೆಯರು ದೇವಾಲಯಕ್ಕೆ ನೀಡಿದ ದಾನ ದತ್ತಿಗಳ ಬಗ್ಗೆ ಮಾಹಿತಿ ನೀಡುವ ಶಾಸನ ನವರಂಗದಲ್ಲಿದೆ. ಒಟ್ಟು ದೇವಾಲಯದಲ್ಲಿ 125 ವಿವಿಧ ಆಕಾರದ, ವಿವಿಧ ಶಿಲ್ಪಗಳಿರುವ ಕಂಬಗಳಿವೆ.

**ಸುಕನಾಸಿ:** ನವರಂಗದಿಂದ ಮುಂದೆ ಸಾಗಿದರೆ ಸುಕನಾಸಿ ಇದೆ. ಇಲ್ಲಿಯ ಬಾಗಿಲ ಮೇಲೆ ವಿವಿಧ ದೇವತೆಗಳ ಶಿಲ್ಪಗಳನ್ನು ಇಟ್ಟಿದ್ದಾರೆ. ಸುಕನಾಸಿಯ ಮುಖ್ಯ ದ್ವಾರವನ್ನು ತಾಮ್ರದ ತಗಡಿನಿಂದ ಮುಚ್ಚಿದ್ದಾರೆ.

**ಗರ್ಭಗುಡಿ:** ದೇವಾಲಯದಲ್ಲಿ 3 ಗರ್ಭಗುಡಿಗಳಿವೆ. ದೇವಾಲಯದ ಮಧ್ಯಭಾಗದಲ್ಲಿ ಚಾಮರಾಜೇಶ್ವರ, ಎಡಭಾಗದಲ್ಲಿ ಪಾರ್ವತಿ ಅಥವಾ ಕೆಂಪನಂಜಮ್ಮ ಮತ್ತು ಬಲಭಾಗದಲ್ಲಿ ನಾಡ ದೇವತೆ ಚಾಮುಂಡೇಶ್ವರಿ ಅಮ್ಮನವರ ಗುಡಿಗಳಿವೆ. ಮೂರೂ ಗರ್ಭಗುಡಿಗಳ ಮೇಲೆ ಮೂರು ಗೋಪುರಗಳು ಹಾಗೂ ಕಳಶಗಳನ್ನು ನಿರ್ಮಿಸಲಾಗಿದೆ.

ಚಾಮರಾಜೇಶ್ವರ ಗರ್ಭಗೃಹದ ಒಳಭಾಗದಲ್ಲಿ ಚಾಮರಾಜೇಶ್ವರ ಲಿಂಗವಿದೆ. ಇದನ್ನು ಶೃಂಗೇರಿಯಿಂದ ತರಿಸಿದ್ದು ಇದನ್ನು ಚಾಮರಾಜೇಶ್ವರ ಲಿಂಗವೆಂದು ಕರೆದು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹ ಸರಳವಾಗಿ ವಿನ್ಯಾಸಗೊಂಡಿದೆ. ವಿಶೇಷವಾಗಿ ಅಮಾವಾಸ್ಯೆಯ ದಿನ ಇಲ್ಲಿಗೆ ಹೆಚ್ಚಿನ ಭಕ್ತರು ಆಗಮಿಸುತ್ತಾರೆ. ಗರ್ಭಗೃಹದ ಬಾಗಿಲನ್ನು ತಾಮ್ರದ ತಗಡಿನಿಂದ ಮುಚ್ಚಿದ್ದಾರೆ.

**ಚಾಮುಂಡೇಶ್ವರಿ ಅಮ್ಮನವರ ದೇವಾಲಯ:** ಚಾಮರಾಜೇಶ್ವರ ದೇವಾಲಯದ ಬಲಭಾಗದಲ್ಲಿ ಚಾಮುಂಡೇಶ್ವರಿ ಅಮ್ಮನವರ ದೇವಾಲಯವನ್ನು ಕಟ್ಟಿಸಿ ಅಲ್ಲಿ ಅಷ್ಟಭುಜದ ಚಾಮುಂಡೇಶ್ವರಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಚಾಮುಂಡೇಶ್ವರಿ ದೇವಾಲಯದ ಒಳಗೋಡೆಗಳ ಉಭಯ ಪಾರ್ಶ್ವಗಳಲ್ಲಿ ನಂದಿನಿ ಮತ್ತು ಕಮಲಿನಿ ಎಂಬ ದ್ವಾರಪಾಲಕಿಯರನ್ನು ನಿಲ್ಲಿಸಲಾಗಿದೆ. ಕಲ್ಲುಗಳ ಪುಡಿಗೆ ನೀಲಿ, ಕೆಂಪು ಮತ್ತು ಹಳದಿ ಬಣ್ಣಗಳನ್ನು ಮಿಶ್ರಣ ಮಾಡಿ ಲೇಪಿಸಿರುವ ಚಾಮುಂಡೇಶ್ವರಿಯ ವಿವಿಧ ಆಕೃತಿಗಳನ್ನು ನೋಡಬಹುದು.

**ಪಾರ್ವತಿ ಅಮ್ಮನವರ ದೇವಾಲಯ:** ಚಾಮರಾಜೇಶ್ವರ ದೇವಾಲಯದ ಎಡಭಾಗದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ತಾಯಿಯ ಸ್ಮರಣಾರ್ಥ ಪಾರ್ವತಿ ಅಮ್ಮನವರ ಹೆಸರಿನ ದೇವಾಲಯವನ್ನು ಕಟ್ಟಿಸಿ, ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಈ ಮೂರ್ತಿಶಿಲ್ಪವು ಶ್ರೀ ಕೆಂಪನಂಜಾಂಬ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಈ ದೇವಾಲಯದ ಒಳಭಾಗದ ಗೋಡೆಗಳಲ್ಲಿ ಅತ್ಯಂತ

ಸುಂದರವಾಗಿ, ಆಕರ್ಷಣೀಯವಾಗಿ ಕಲ್ಲುಗಳ ಮಡಿಗೆ ನೀಲಿ, ಕೆಂಪು ಮತ್ತು ಹಳದಿ ಬಣ್ಣಗಳನ್ನು ಮಿಶ್ರಣ ಮಾಡಿ ಸಮುದ್ರಮಂಥನ, ಗಿರಿಜಾ ಕಲ್ಯಾಣ ಮತ್ತು ಚಾಮುಂಡೇಶ್ವರಿ ಮುಂತಾದ ಪ್ರಸಿದ್ಧ ಪೌರಾಣಿಕ ಕಥೆಗಳನ್ನು ಚಿತ್ರಿಸಲಾಗಿದೆ.

ದಕ್ಷಿಣಾಭಿಮುಖವಾಗಿ ದೇವಾಲಯದ ಬಲಭಾಗದ ಮೂಲಕ ಪ್ರದಕ್ಷಿಣೆ ಮಾಡುತ, ಮುಂದೆ ನಡೆದರೆ ದಕ್ಷಿಣಾಭಿಮುಖವಾಗಿರುವ ದಕ್ಷಿಣಾಮೂರ್ತಿ ಸನ್ನಿಧಿ ಇದೆ. ಈ ಗುಡಿಯ ಮೇಲೆ ಚಿಕ್ಕ ಗೋಪುರವಿದೆ. ದೇವಾಲಯದ ನೈಋತ್ಯಭಾಗದಲ್ಲಿ ಪ್ರತ್ಯೇಕವಾದ ಗುಡಿ ಕಟ್ಟಿಸಿ ಲಕ್ಷ್ಮೀಸಮೇತ ನಾರಾಯಣಸ್ವಾಮಿಯನ್ನು ಪ್ರತಿಷ್ಠಾಪಿಸಿದ್ದಾರೆ.

**ಪಾದಗಳು:** ಚಾಮರಾಜೇಶ್ವರ ದೇವಾಲಯ, ಚಾಮುಂಡೇಶ್ವರಿ ಮತ್ತು ಪಾರ್ವತಿ ಅಥವಾ ಶ್ರೀ ಕೆಂಪನಂಜಾಂಬ ದೇವಾಲಯಗಳ ಮುಂದೆ ಮೂರು ದೇವರುಗಳ ಪಾದಗಳಿದ್ದು ಭಕ್ತರ ಪಾಲಿಗೆ ಆಕರ್ಷಣೆಯಾಗಿವೆ.

**ರಥೋತ್ಸವ:** ಸುಮಾರು 188 ವರ್ಷಗಳಿಂದಲೂ ಇಲ್ಲಿ ಚಾಮರಾಜೇಶ್ವರಸ್ವಾಮಿಯವರ ರಥೋತ್ಸವವು ಪ್ರತಿ ವರ್ಷ ಆಷಾಢಮಾಸದ (ಜುಲೈ–ಆಗಸ್ಟ್) ಆಷಾಢದ ಹುಣ್ಣಿಮೆಯ ದಿನ ಆಚರಿಸಲಾಗುತ್ತಿದೆ. ಈ ದಿನ ನವ ದಂಪತಿಗಳು ಹರಕೆ ತೀರಿಸಲು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಸಾವಿರಾರು ಜನರು ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ. 1836 ರಲ್ಲಿ ಆಷಾಢ ಪೂರ್ಣಿಮೆಯ ದಿನದಂದು ಮೊದಲ ರಥೋತ್ಸವ ಆರಂಭಗೊಂಡಿತು. ಪ್ರತಿ ವರ್ಷ ಜೂನ್‌ನಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವವು ಅತ್ಯಂತ ಭಕ್ತಿ ಸಂಭ್ರಮಗಳಿಂದ ಆಚರಣೆಯಾಗುವ ಮತ್ತೊಂದು ಪ್ರಮುಖ ಉತ್ಸವ.

ಮೈಸೂರು ಒಡೆಯರ ಕಾಲದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ವಿಶಾಲವಾದ ದೇವಾಲಯ ಹಾಗೂ ವಿವಿಧ ವರ್ಣಲೇಪಿತವಾದ ಕಥಾನಕಗಳನ್ನು ಸಂರಕ್ಷಿಸುವ ಕಾರ್ಯವನ್ನು ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆ ಕೈಗೊಂಡಿದೆ. ಇಂತಹ ದೇವಾಲಯವನ್ನು ಸಂರಕ್ಷಿಸಿ, ಪ್ರವಾಸಿಗರ ಆಕರ್ಷಣೆಯ ಸ್ಥಳವನ್ನಾಗಿ ಮಾಡಲು, ಗತ ಇತಿಹಾಸವನ್ನು ಸಾರುವ ಸಾರ್ಥಕತೆ ಮಾಡಲು, ಇದನ್ನು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವ ಅಗತ್ಯತೆ ಇದೆ.

❑

# ಸತ್ಯಂ ಶಿವಂ ಸುಂದರಂ

ಎಂ.ಎಸ್. ಚಂದ್ರಶೇಖರ ಅಯ್ಯರ್

'ಶಿವ' ಎಂದರೆ ಮಂಗಳಕರ, ಶುಭಕರ ಎಂದರ್ಥ. ಮಹಾಶಿವರಾತ್ರಿಯು ಶಿವಭಕ್ತರಿಗೆ ಅತ್ಯಂತ ಪವಿತ್ರವಾದ ದಿನ. "ಸ್ವಶ್ರೇಯಸಂ ಶಿವಂ ಭದ್ರಂ" ಎನ್ನುತ್ತಾರೆ. ರಾತ್ರಿ ಪೂಜೆಯೇ ಪ್ರಧಾನವಾದ್ದರಿಂದ ಶಿವರಾತ್ರಿ ಅರ್ಥಾತ್ ಮಂಗಳರಾತ್ರಿ.

ಶಿವರಾತ್ರಿಯಲ್ಲಿ ಐದು ಬಗೆಗಳಿವೆ.

1. ನಿತ್ಯ ಶಿವರಾತ್ರಿ, 2. ಮಾಸ ಶಿವರಾತ್ರಿ, 3. ಪಕ್ಷ ಶಿವರಾತ್ರಿ
4. ಯೋಗ ಶಿವರಾತ್ರಿ, 5. ಮಹಾಶಿವರಾತ್ರಿ

ಮಾಘ ಮಾಸದ ಕೃಷ್ಣಪಕ್ಷದ ಚತುರ್ದಶಿಯಂದು ಬರುವ ಮಹಾಶಿವರಾತ್ರಿಯು ಪರಶಿವನು ವಿಷಕಂಠನಾಗಿ, ಭಕ್ತರ ಪಾಲಿಗೆ ಶ್ರೀಕಂಠನಾದ ಪುಣ್ಯದಿನ. ಸಮುದ್ರಮಂಥನದ ಕಾಲದಲ್ಲಿ ಆದಿಶೇಷನ ಮುಖದಿಂದ ಹರಿಯಲಾರಂಭಿಸಿದ ಹಾಲಾಹಲವೆಂಬ ವಿಷದಿಂದ ಜಗತ್ತನ್ನು ರಕ್ಷಿಸಿ ತನ್ನ ಭಕ್ತರ ಪಾಲಿಗೆ ಶ್ರೀಕಂಠನಾದ ಮಹಾ ಮಂಗಳದಿನ.

ಶಿವನಿಗೆ ಸಂಬಂಧಿಸಿದ ಹದಿನಾರು ಉಪನಿಷತ್ತುಗಳು ಅಥರ್ವಶೀರ್ಷ, ದಕ್ಷಿಣಾಮೂರ್ತಿ, ಕಾಲಾಗ್ನಿರುದ್ರ ಮುಂತಾದವು ಪರಮೇಶ್ವರನ ಮಹಿಮೆಯನ್ನು ಕೊಂಡಾಡುತ್ತವೆ. ಶಿವನಿಗೆ ಸಂಬಂಧಿಸಿದ ಅನೇಕ ಪುರಾಣಗಳಲ್ಲಿ ಲಿಂಗಪುರಾಣವು ಅತ್ಯಂತ ಪ್ರಸಿದ್ಧವಾದದ್ದು. ಶಿವಸ್ತೋತ್ರಗಳು ಅಸಂಖ್ಯಾತವಾಗಿದ್ದು ಅವುಗಳಲ್ಲಿ ಶಿವಕವಚ, ಶಿವಷಡಾಕ್ಷರ, ಉಮಾಮಹೇಶ್ವರ, ಶಿವಪಂಚಾಕ್ಷರ ಸ್ತೋತ್ರಗಳು ಪ್ರಮುಖವಾದುವು.

**ಶಿವಸಂಕಲ್ಪ :** ವಿವಿಧ ಮಂತ್ರಗಳನ್ನೊಳಗೊಂಡು ಶಿವಸಂಕಲ್ಪ ಶಿವನಿಗೆ ಬಹುಪ್ರೀತಿ. ಪ್ರತಿಯೊಂದು ಮಂತ್ರವೂ ಕಡೆಯಲ್ಲಿ 'ತನ್ಮೇ ಮನಃ ಶಿವಸಂಕಲ್ಪಮಸ್ತು' ಎಂದು ಮುಕ್ತಾಯವಾಗುತ್ತದೆ. ಶಿವನಿಗೆ ಬಿಲ್ವಪತ್ರೆ ಬಹು ಪ್ರಿಯ. ಅಜ್ಞಾನಿಯಾದ ಹಸಿದ ಬೇಡನೊಬ್ಬನು ಶಿವರಾತ್ರಿಯ ನಾಲ್ಕು ಜಾಮಗಳಲ್ಲಿ ಆಕಸ್ಮಿಕವಾಗಿ ಎಸೆದ ಬಿಲ್ವಪತ್ರೆಗಳಿಂದ ಸುಪ್ರೀತನಾಗಿ, ಪರಶಿವನು ಅವನನ್ನು ತನ್ನ ಭಕ್ತಾಗ್ರೇಸರನನ್ನಾಗಿ ಮಾಡಿದ ಕಥೆ ಶಿವಪುರಾಣದಲ್ಲಿದೆ.

**ರುದ್ರಾಭಿಷೇಕ :** ಮಹಾನ್ಯಾಸ ಪೂರ್ವಕ 'ಏಕಾದಶವಾರ' ರುದ್ರಾಭಿಷೇಕವು ಶಿವನಿಗೆ (ಶಿವರಾತ್ರಿಯಂದು) ಅರ್ಪಿಸಲೇಬೇಕಾದ ಪೂಜಾ ವಿಶೇಷ. ಅಭಿಷೇಕದ ಕಾಲದಲ್ಲಿ ರುದ್ರ ಚಮಕ, ರುದ್ರ ನಮಕ, ದಶಶಾಂತಿ ಮುಂತಾದುವುಗಳ ಪಾರಾಯಣ ನಡೆಯುತ್ತದೆ.

**ನಮಃ ಶಿವಾಯ** : ಇದು ಶಿವಪಂಚಾಕ್ಷರಿ ಮಂತ್ರವಾಗಿದ್ದು ಇದು ಐದು ಅಕ್ಷರಗಳಿಂದ ಕೂಡಿದೆ. ಮೊದಲನೆಯದು 'ನ'ಕಾರ, ಇದು ಬ್ರಹ್ಮನ ಅಂಶವಾದ ಭೂಮಿಯನ್ನು ; ಎರಡನೆಯದು 'ಮ'ಕಾರ ಇದು ವಿಷ್ಣುವಿನ ಅಂಶವಾದ ಜಲವನ್ನು ; ಮೂರನೆಯದು 'ಶ'ಕಾರ, ಇದು ರುದ್ರನ ಅಂಶವಾದ ಅಗ್ನಿಯನ್ನು ; ನಾಲ್ಕನೆಯದು 'ವ'ಕಾರ, ಇದು ಮಹೇಶ್ವರನ ಅಂಶವಾದ ವಾಯುವನ್ನು ; ಮತ್ತು ಐದನೆಯದು 'ಯ'ಕಾರ, ಇದು ಶಿವನ ಅಂಶವಾದ ಆಕಾಶವನ್ನು ಸೂಚಿಸುತ್ತವೆ. ಈ ರೀತಿಯಲ್ಲಿ ಶಿವಪಂಚಾಕ್ಷರಿ ಮಂತ್ರವನ್ನು ಜಪಿಸಿದರೆ ತ್ರಿಮೂರ್ತಿಗಳೂ ಸೇರಿದಂತೆ ಪಂಚಭೂತಗಳನ್ನು ಜಪಿಸಿದಂತಾಗುತ್ತದೆ.

**ಪಂಚಭೂತಗಳು** : ಭೂಮಿ, ಆಕಾಶ, ನೀರು, ಬೆಂಕಿ ಮತ್ತು ವಾಯು.

**ಜ್ಯೋತಿರ್ಲಿಂಗ** : ಸಾಕ್ಷಾತ್ ಶಂಕರನು ಪಾರ್ವತಿಯೊಂದಿಗೆ ಭಕ್ತರ ಉದ್ಧಾರಕ್ಕಾಗಿ ಭಾರತದ ಹನ್ನೆರಡು ಕ್ಷೇತ್ರಗಳಲ್ಲಿ ಜ್ಯೋತಿರ್ಲಿಂಗರೂಪಿಯಾಗಿ ನೆಲೆಸಿದ್ದಾನೆ. ಹನ್ನೆರಡು ಜ್ಯೋತಿರ್ಲಿಂಗ ಯಾವುವೆಂದರೆ :

ಸೌರಾಷ್ಟ್ರೇ ಸೋಮನಾಥಂ ಚ, ಶ್ರೀಶೈಲೇ ಮಲ್ಲಿಕಾರ್ಜುನಮ್ ।
ಉಜ್ಜಯಿನ್ಯಾಂ ಮಹಾಕಾಲಮ್ ಓಂಕಾರಮಮಲೇಶ್ವರಮ್ ॥
ಪರಾಲ್ಯಾಂ ವೈದ್ಯನಾಥಂಚ, ಡಾಕಿನ್ಯಾಂ ಭೀಮ ಶಂಕರಮ್ ।
ಸೇತುಬಂಧೇ ತು ರಾಮೇಶಂ, ನಾಗೇಶಂ ದಾರುಕಾವನೇ ॥
ವಾರಣಾಶ್ಯಾಂತು ವಿಶ್ವೇಶಂ, ತ್ರಯಂಬಕಂ ಗೌತಮೀತಟೇ ।
ಹಿಮಾಲಯೇ ತು ಕೇದಾರಂ, ಘೃಷ್ಣೇಶಂ ಚ ಶಿವಾಲಯೇ ॥
ಏತಾನಿ ಜ್ಯೋತಿರ್ಲಿಂಗಾನಿ ಸಾಯಂಪ್ರಾತಃ ಪಠೇನ್ನರಃ ।
ಸಪ್ತಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥ ॥

ಶಿವಪುರಾಣದ ಪ್ರಕಾರ ಭಾರತ ದೇಶದಲ್ಲಿ 64 ಜ್ಯೋತಿರ್ಲಿಂಗಗಳಿವೆ ಎಂದು ಹೇಳಿದೆ. ಅವುಗಳಲ್ಲಿ 12 ಜ್ಯೋತಿರ್ಲಿಂಗಗಳು ಬಹು ಮಹತ್ವ ಪಡೆದಿವೆ. ಆದ್ದರಿಂದ ಇವುಗಳನ್ನು ಮಹಾಜ್ಯೋತಿರ್ಲಿಂಗಗಳು ಎನ್ನುತ್ತಾರೆ.

'ಸರ್ವ ಸುಖಸಂಪತ್ತುಗಳನ್ನು ಪ್ರಸಾದಿಸುವವನಾದ ಗಿರಿಜಾಪತಿಯೆ, ನಿನಗೆ ವಂದನೆ'.

ಕಾಶಿಯಲ್ಲಿ 12 ಜ್ಯೋತಿರ್ಲಿಂಗಗಳಲ್ಲಿ ಕಾಶಿ ಒಂದು ಅಂಗವಿದೆ. (ವಾರಾಣಸ್ಯಂತು ವಿಶ್ವೇಶಂ) ಮೂರು ಸಾವಿರ ವರ್ಷಗಳ ಹಿಂದೆಯೇ ಈ ನಗರಕ್ಕೆ 'ಕಾಶಿ' ಎಂಬ ಹೆಸರಿತ್ತು. ಕಾಶಿ ಎಂದರೆ 'ಹೊಳೆಯುವುದು', 'ಬೆಳಕು' ಎಂಬರ್ಥವಿದೆ. ಮಹಾಭಾರತ ಕಾಲಕ್ಕೆ ವಾರಾಣಸಿ ಎಂಬ ಹೆಸರು ಬಂತು. ಪುರಾಣಗಳಲ್ಲಿ ಇದನ್ನು 'ಅವಿಮುಕ್ತಕ್ಷೇತ್ರ' ಎಂದರೆ ಶಿವನು ಎಂದಿಗೂ ಬಿಟ್ಟುಹೋಗದ ಊರು ಎಂದು ಕರೆಯಲಾಗಿದೆ. ಇದಕ್ಕೆ 'ಆನಂದವನ', 'ರುದ್ರವಾಸ' ಎಂಬ ಹೆಸರುಗಳೂ ಇವೆ. ವಾರಾಣಸಿ ಎಂಬುದನ್ನು

ಉಚ್ಛರಿಸಲಾಗದೆ ಬ್ರಿಟಿಷರು ಉಚ್ಚರಿಸಲು ಬರದೆ ಇದನ್ನು 'ಬನಾರಸ್' ಎಂದು ಕರೆದರು. ಇದು 'ವಾರುಣಾ' ಮತ್ತು 'ಅಸ್ಸಿ' ನದಿಗಳ ನಡುವೆ ಇದ್ದುದರಿಂದ ಇದಕ್ಕೆ 'ವಾರಣಾಸಿ' ಎಂಬ ಹೆಸರು ಬಂದಿದೆ.

**ಶಿವನೊಬ್ಬ ನಾಮ ಹಲವು :** ಶಿವನಿಗೆ ಸಾವಿರಾರು ಹೆಸರುಗಳು. ಮಹಾಭಾರತದ ವ್ಯಾಸರ ಪ್ರಕಾರ ಈಶ್ವರನಿಗೆ ಹತ್ತು ಸಾವಿರ ಹೆಸರುಗಳಿದ್ದು ಅವುಗಳಲ್ಲಿ ಮುಖ್ಯವಾದ 1008 ಹೆಸರುಗಳನ್ನು ಶಿವಸಹಸ್ರನಾಮವಾಗಿ ಉಪಮನ್ಯು ಋಷಿಗಳ ಮೂಲಕ ಕೃಷ್ಣನಿಗೆ ಉಪದೇಶಿಸಿದರು.

'ಶಿವ ಶಿವ ಎಂದರೆ ಭಯವಿಲ್ಲಾ, ಶಿವನಾಮಕೆ ಸಾಟಿ ಬೇರಿಲ್ಲಾ' ಎಂಬಂತೆ ಶಿವನಾಮಸ್ಮರಣೆಯಿಂದ ಸರ್ವ ದುಃಖಗಳೂ ನಿವಾರಣೆಯಾಗುತ್ತವೆ ಹಾಗೂ ಏಳು ಜನ್ಮಗಳಲ್ಲಿ ಮಾಡಿದ ಪಾಪಗಳು ಪರಿಹಾರವಾಗುತ್ತದೆ. ಶಿವನಾಮವನ್ನು ಅನೇಕ ವಿಧವಾಗಿ ವಿಂಗಡಿಸಬಹುದು :

**ಲೋಕಕಲ್ಯಾಣಾರ್ಥ ನಾಮಗಳು**

1. ಶಂಭು (ಲೋಕದ ಸುಖಗಳ ಆಧಾರ ಭೂತ)
2. ಶಿವ (ಸಂತೋಷವನ್ನುಂಟುಮಾಡುವವನು)
3. ಶಂಕರ (ಕ್ಷೇಮವನ್ನುಂಟುಮಾಡುವವನು), ಹರ (ಪಾಪನಿವಾರಕ)
5. ಸದಾಶಿವ (ನಿರಂತರ ಸುಖವನ್ನು ನೀಡುವವನು)
6. ಕರುಣಾಕರ (ಕರುಣಾಮಯಿ)
7. ಅಭಯ (ಭಯವನ್ನು ಪರಿಹರಿಸುವವನು)
8. ಮಹಾದೇವ

**ಯಜಮಾನ್ಯ ಸೂಚಕನಾಮಗಳು:** 1. ಪಶುಪತಿ, 2. ಅಮರನಾಥ (ದೇವತೆಗಳ ಒಡೆಯ), 3. ಗಿರೀಶ (ಪರ್ವತದ ಒಡೆಯ), 4. ಜಗದೀಶ (ಪ್ರಪಂಚಕ್ಕೆ ಒಡೆಯ), 5. ಯೋಗೀಶ (ಯೋಗಿಗಳ ಅಧಿಪತಿ), 6. ವಾಗೀಶ (ವಾಣಿಯನ್ನು ನೀಡುವ ಮೂಲಕ ಬಂದ ಹೆಸರು)

**ನಾಟ್ಯಸಂಬಂಧಿ :** 1. ನಟರಾಜ 2. ನಟಶೇಖರ, 3. ತಾಂಡವೇಶ್ವರ, 4. ನಟೇಶ.

**ನೇತ್ರನಾಮ :** 1. ತ್ರಿನೇತ್ರ, 2. ತ್ರಿಲೋಚನ, 3. ಮುಕ್ಕಣ್ಣ, 4. ತ್ರ್ಯಂಬಕ, 5. ವಿರೂಪಾಕ್ಷ, 6. ಭದ್ರಾಕ್ಷ (ಮಂಗಳಕರವಾದ ನೇತ್ರವುಳ್ಳವನು).

**ಕೇಶಸಂಬಂಧಿ :** 1. ವ್ಯೋಮಕೇಶ. 2. ಮಹಾಜಟ, 3. ಜಟಾಜೂಟ, 4. ಕಪರ್ದಿ, 5. ತ್ರಿಪದಿ, 6. ಶಿಖಿ, 7. ಹರಿಕೇಶ, 8. ಜಟಾಧರ.

**ಕಂಠಸಂಬಂಧಿ:** 1. ವಿಷಕಂಠ, 2. ನೀಲಕಂಠ, 3. ಶ್ರೀಕಂಠ, 4. ನಂಜುಂಡ.

**ಆಯುಧಸಂಬಂಧಿ:** 1. ಶೂಲಪಾಣಿ, 2. ತ್ರಿಶೂಲ, 3. ಸಾರಂಗಪಾಣಿ, 4. ದಂಡಪಾಣಿ, 5. ಕಪಾಲಿ, 6. ಬಾಣಹಸ್ತ, 7. ಪಿನಾಕಿ, 8. ಡಮರುಗೇಂದ್ರ.

**ಏಕಾದಶರುದ್ರರು:** 1. ಸುರೇಶ್ವರ, 2. ಅಪರಾಜಿತ, 3. ಜಯಂತ, 4. ಮಹಾಹರ.

**ಶತ್ರುಹರಿನಾಮ:** 1. ಗಜಾಸುರಮರ್ದನ, 2. ಅಂಧಕಾಸುರಸೂದನ, 3. ತ್ರಿಪುರಾಂತಕ, 4. ಕಾಮಹರ, 5. ಮಹಾಕಾಲ, 6. ಪ್ರಳಯಭೈರವ, 7. ಮೃತ್ಯುಂಜಯ, 8. ಕಾಲಾಂತಕ.

**ಯೋಗಸಂಬಂಧಿ :** 1. ಯೋಗಮೂರ್ತಿ, 2. ಯೋಗೀಶ, 3. ಓಂಕಾರನಾಥ, 4. ಮಹಾನಾಥ.

**ಆನಂದಮೂಲ :** 1. ಸಚ್ಚಿದಾನಂದ, 2. ಚಿದಾನಂದ, 3. ಚಿನ್ಮಯಾನಂದ, 4. ಸದಾನಂದ, 5. ಪೂರ್ಣಾನಂದ.

**ಪಂಚಮುಖಿ (ಈಶ್ವರನಿಗೆ 5 ಮುಖಗಳು):**

1. ಸದ್ಯೋಜಾತ, 2. ವಾಮದೇವ, 3. ತತ್ಪುರುಷ, 4. ಅಘೋರ, 5. ಈಶಾನ್ಯ

**ಪತ್ನಿಸಹಿತ ನಾಮಗಳು:** 1. ಗಂಗಾಧರ, 2. ಉಮೇಶ, 3. ಗೌರೀಶ, 4. ಭವಾನೀಶಂಕರ, 5. ಶಿವಪ್ರಿಯ, 6. ಅಂಬಿಕಾನಾಥ.

**ವಸ್ತ್ರಭೂಷಣ:** 1. ಗಜಚರ್ಮಾಂಬರ, 2. ನಾಗಭೂಷಣ, 3. ಚಂದ್ರಶೇಖರ, 4. ಚಂದ್ರಚೂಡ, 5. ಸೋಮಶೇಖರ, 6. ರುಂಡಮಾಲ, 4. ತ್ರಿಪುಂಡ್ರಿ, 8. ವಿಭೂತಿದರ, 9. ಭಸ್ಮಭೂಷಣ, 10. ಕವಚ.

**ಸ್ವಭಾವ ನಾಮಗಳು:** 1. ಭೈರವ, 2. ಪಂಚಾನನ, 3. ಸ್ವಯಂಭೂ, 4. ಪಂಚಾಕ್ಷರಿ, 5. ವೃಷಭವಾಹನ, 6. ಷಡಾಕ್ಷರಿ, 7. ದಕ್ಷಿಣಾಮೂರ್ತಿ.

**ವಾಸಸ್ಥಾನ :** 1. ಕೈಲಾಸವಾಸ, 2. ರಜತಾದ್ರಿ ನಿಲಯ, 3. ಶೃಂಗಪ್ರಿಯ.

**ಶಿವಪಂಚಾಕ್ಷರಿ ಮಂತ್ರ :** ನಮಃ ಶಿವಾಯ

**ಮೃತ್ಯುಂಜಯ ಮಂತ್ರ :** ಮೃತ್ಯುಂಜಯಾಯ ರುದ್ರಾಯ । ನೀಲಕಂಠಾಯ ಶಂಭವೇ । ಅಮೃತೇಶ್ವರಾಯ ಶರ್ವಾಯ । ಮಹಾದೇವಾಯ ತೇ ನಮಃ ॥

ಇಂತಹ ದಿವ್ಯ ನಾಮಗಳನ್ನು ಮತ್ತು ಶಿವಪಂಚಾಕ್ಷರಿ ಮಂತ್ರ, ಮೃತ್ಯುಂಜಯ ಮಂತ್ರಗಳನ್ನು ಪಠಿಸಿದರೆ ತ್ರಿಮೂರ್ತಿಗಳು ಸೇರಿದಂತೆ ಪಂಚಭೂತಗಳನ್ನು ಕೂಡ ಜಪಿಸಿದಂತಾಗುತ್ತದೆ. ರೂಪವಿಲ್ಲದ ಪರಮಾತ್ಮನು ತನ್ನ ರೂಪವನ್ನು ತಾನೇ ಸೃಷ್ಟಿಸಿಕೊಂಡು ಭಕ್ತರನ್ನು ಧನ್ಯರನ್ನಾಗಿ ಮಾಡಿದ ಪರ್ವದಿನವೇ ಮಹಾಶಿವರಾತ್ರಿ.

ಆ ಪರಮೇಶ್ವರನು ಸಕಲರಿಗೂ ಸನ್ಮಂಗಳವನ್ನು ಉಂಟುಮಾಡಲಿ. ಸರ್ವೇಜನಾ ಸುಖಿನೋ ಭವಂತು ಸಮಸ್ತ ಸನ್ಮಂಗಳಾನಿ ಭವಂತು.

❑

## ಗ್ರಂಥ ಪರಾಮರ್ಶೆ

**ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ "ಕಾಲಿದಾಸ ಶಾಕುಂತಲ" ಮತ್ತು "ಕವಿಗೆ ಸಾವಿರದ ಚಿಂತೆ"**

"ಕಾಲಿದಾಸ ಶಾಕುಂತಲ" ಕೃತಿಯ ಅನುವಾದ ತುಂಬ ಸರಳ, ಸುಂದರವಾಗಿದೆ. ಕವಿಕುಲಗುರು ಕಾಳಿದಾಸನ ಈ ಕೃತಿ ಶತಶತಮಾನಗಳಿಂದ ಸೃಜನಶೀಲ ಲೇಖಕರ ಕಲ್ಪನೆಗೆ ಸಮೃದ್ಧ ವಸ್ತುವನ್ನು ಒದಗಿಸುತ್ತಿದೆ. ಈ ಕೃತಿಯನ್ನು ಡಾ. ಪಟ್ಟಣಶೆಟ್ಟಿಯವರು ತುಂಬ ಸಮರ್ಥವಾಗಿ ಅನುವಾದಿಸಿದ್ದಾರೆ. "ಕವಿಗೆ ಸಾವಿರದ ಚಿಂತೆ" ಕವನಸಂಕಲನದ ಹೆಸರೇ ಆಕರ್ಷಕವಾಗಿದೆ. ಅದರಲ್ಲೂ 'ಸಾವಿರದ' ಎಂಬ ಪದ ಕವಿ ಬೇಂದ್ರೆಯವರನ್ನು ನೆನಪಿಸುವಂತಿದೆ. 150ಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ರಚಿಸಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿರುವ ಕವಿ ಪ್ರತಿಭೆ ಅನ್ಯಾದೃಶ. "ಅಟ್ಟಿದ್ದು" ಮತ್ತು "ವಾರ್ಧಕ್ಯ" – ಅದರಲ್ಲೂ ದೂರ ಮತ್ತು ದೂರು ಇವುಗಳ ಪ್ರಸ್ತಾಪ ಅನನ್ಯವಾಗಿದೆ.

**ಡಾ. ಹೇಮಾ ಪಟ್ಟಣಶೆಟ್ಟಿಯವರ "ಮುಸುಕಿದೀ ಮಬ್ಬಿನಲಿ"**

"ಮುಸುಕಿದೀ ಮಬ್ಬಿನಲಿ" ಕಥಾಸಂಕಲನ 1978ರಲ್ಲಿ ಮೊದಲಿಗೆ ಪ್ರಕಟವಾದಾಗ ವಿಮರ್ಶಕಲೋಕ ತೋರಿದ ಆದರ, ಪುರಸ್ಕಾರಗಳು ಮೆಚ್ಚುವಂಥವು. ಇಂಥದೊಂದು ಕೃತಿ 45 ವರ್ಷಗಳ ನಂತರ ಮರುಮುದ್ರಣಗೊಂಡಿರುವುದು ಅದರ ನಿತ್ಯನೂತನತೆಗೆ ಸಾಕ್ಷಿ. ಈ ಸಂಕಲನದ ಸರಳ ಸುಂದರ ಕತೆಗಳು ಓದುಗರನ್ನು ನೇರವಾಗಿ ಮುಟ್ಟುವ ಗುಣವನ್ನು ಹೊಂದಿವೆ.

**ಶ್ರೀ ದೇವು ಪತ್ತಾರರ'ಈಶಾನ್ಯ ಒಡಲು'**

'ಈಶಾನ್ಯ ಒಡಲು' ಕೃತಿ 32 ಲೇಖನಗಳನ್ನೊಳಗೊಂಡಿದೆ. ಹೈದರಾಬಾದ್ ಕರ್ನಾಟಕದ ಸಾಂಸ್ಕೃತಿಕ ನೋಟವನ್ನು ತೆರೆದು ತೋರುವಂತಿದೆ. ಇತಿಹಾಸದ ವಿಸ್ಮೃತಿಯಲ್ಲಿ ಕಳೆದುಹೋಗಬಹುದಾಗಿದ್ದ ಅಪರೂಪದ ಸಂಗತಿಗಳನ್ನು ಹುಡುಕಿ, ಒರೆಗೆ ಹಚ್ಚಿ, ಓದುಗರನ್ನು ಜಾಗೃತರಾಗುವಂತೆ ಮಾಡುವ ಪ್ರಯತ್ನ ಇಲ್ಲಿದೆ. ಕರ್ನಾಟಕದ ಆ ಭಾಗವನ್ನು ಕುರಿತ ಅವಜ್ಞೆ, ಅಲ್ಲಿರುವ ಚಿನ್ನದ ನಿಕ್ಷೇಪ, ಹಿಂದೂ–ಮುಸ್ಲಿಂ ಏಕತೆ, ಮಹಮದ್ ಗವಾನ್, ಖರೇಜ್ ನೀರು ನಿರ್ವಹಣೆ ತಾಂತ್ರಿಕತೆ, ಸದಾನಂದ ಕನವಳ್ಳಿ, ಎಸ್.ಎಂ. ಪಂಡಿತ್ ಮುಂತಾದವರ ಪ್ರಸ್ತಾಪ ಕೃತಿಗೆ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ.

❑

# ವಾರ್ತಾ ವಿಹಾರ

ಕುಮಾರಸ್ವಾಮಿ ವಿರಕ್ತಮಠ

**ಶಿವಕುಮಾರ ಶ್ರೀಗಳು ದಿವ್ಯ ಶಕ್ತಿಯಾಗಿದ್ದವರು**

ಶಿವಕುಮಾರ ಶ್ರೀಗಳು ದಿವ್ಯ ಶಕ್ತಿಯಾಗಿ ಲಕ್ಷಾಂತರ ಮಕ್ಕಳಿಗೆ ತ್ರಿವಿಧ ದಾಸೋಹ ಮಾಡಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 1 ರಂದು ತುಮಕೂರು ಶ್ರೀ ಸಿದ್ಧಗಂಗಾ ಮಠದಲ್ಲಿ ನಡೆದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 117ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀಗಳು ನಿರಂತರವಾಗಿ ಜನಕಲ್ಯಾಣಕ್ಕಾಗಿ ಶ್ರಮಿಸಿದವರು. ಜ್ಞಾನಾನ್ನ ದಾಸೋಹಗಳ ಮೂಲಕ ಲಕ್ಷಾಂತರ ಮಂದಿ ಬದುಕು ಕಟ್ಟಿಕೊಳ್ಳಲು ನೆರವಾಗಿದ್ದಾರೆ. ವಿಶ್ರಾಂತಿ ಎಂಬ ಪದಕ್ಕೆ ಅವಕಾಶ ಕೊಡದೆ ಇಡೀ ಬದುಕನ್ನು ಸಮಾಜಕ್ಕಾಗಿ ಮುಡಿಪಾಗಿಟ್ಟವರು ಎಂದು ತಿಳಿಸಿದರು.

ಪತಂಜಲಿ ಯೋಗಪೀಠದ ಶ್ರೀ ಬಾಬಾ ರಾಮದೇವ್‌ರವರು ಶಿವಕುಮಾರ ಶ್ರೀಗಳು ದೇಶದ ಶ್ರೇಷ್ಠ ಸಂತರಲ್ಲೊಬ್ಬರು. ಲಕ್ಷಾಂತರ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿ ಬದುಕು ರೂಪಿಸಿದವರು. ಅವರ ದರುಶನ ಭಾಗ್ಯದಿಂದಲೇ ಸಹಸ್ರಾರು ಜನರ ಕಷ್ಟಕಾರ್ಪಣ್ಯಗಳು ಬಗೆಹರಿದಿವೆ. ಆಧ್ಯಾತ್ಮದ ಜೊತೆಗೆ ಸಮಾಜ ಸೇವೆಯಲ್ಲೂ ಸಮರ್ಪಿಸಿಕೊಂಡಿದ್ದರು ಎಂದು ಹೇಳಿದರು.

ಮುಂಡರಗಿಯ ಜಗದ್ಗುರು ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಧಾರವಾಡ ಶ್ರೀ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಗದಗ ಶ್ರೀ ವೀರೇಶ್ವರ ಪುಣ್ಯಾಶ್ರಮದ ಶ್ರೀ ಕಲ್ಲಯ್ಯಜ್ಜನವರು, ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು ಮಾತನಾಡಿದರು. ಡಾ. ಸಿ. ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ರೋಬೋ ಆನೆ 'ಶಿವ' ಸಮರ್ಪಣೆ**

ಭಗವಂತ ಸೃಷ್ಟಿ ಮಾಡಿರುವ ಪ್ರಾಣಿ ಪಕ್ಷಿಗಳಿಗೂ ಮನುಷ್ಯನ ಹಾಗೆಯೇ ಸ್ವತಂತ್ರವಾಗಿ ಬದುಕುವ ಹಕ್ಕಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಏಪ್ರಿಲ್ 12, ಚಾಂದ್ರಮಾನ ಯುಗಾದಿಯಂದು ರೋಬೋ ಆನೆ 'ಶಿವ' ಸಮರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸಾಕು ಪ್ರಾಣಿಗಳಿಗೆ

ಇಂದಿನ ದಿನಗಳಲ್ಲಿ ತುಂಬಾ ಮಾನ್ಯತೆಯನ್ನು ನೀಡಲಾಗುತ್ತಿದೆ. ಮನುಷ್ಯರು ಪ್ರಾಣಿಗಳೊಂದಿಗೆ ಪ್ರೀತಿಯಿಂದ ಇರಬೇಕು. ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲದಿದ್ದರೆ ಹೇಗೆ ಇರುತ್ತಿದ್ದ ಎಂಬುದನ್ನು ಯೋಚನೆ ಮಾಡಬೇಕು. ಮನುಷ್ಯನಂತೆಯೆ ಅವುಗಳೂ ಕೂಡ ಸ್ವಾತಂತ್ರ್ಯವನ್ನು ಬಯಸುತ್ತವೆ. ಆದ್ದರಿಂದ ಅವುಗಳನ್ನು ಕಟ್ಟಿಹಾಕಿ ಹಿಂಸಿಸಬಾರದು. ಇಂತಹ ಸಂದರ್ಭದಲ್ಲಿ ದೆಹಲಿಯ ಪೇಟಾ ಸಂಸ್ಥೆಯ ಮೂಲಕ ಶ್ರೀಮತಿ ಐಂದ್ರಿತಾ ರೇ ಹಾಗೂ ನಟ ಶ್ರೀ ದಿಗಂತ್ ದಂಪತಿಗಳು ಶ್ರೀಮಠಕ್ಕೆ ರೋಬೋ ಆನೆಯನ್ನು ಕೊಡುಗೆಯಾಗಿ ನೀಡುತ್ತಿರುವುದು. ಅವರಿಗೆ ಪ್ರಾಣಿಗಳ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ ಎಂದರು.

ಚಲನಚಿತ್ರ ಕಲಾವಿದರಾದ ಶ್ರೀಮತಿ ಐಂದ್ರಿತಾ ರೇರವರು ಪ್ರಾಣಿಗಳು ಆಹಾರ ಮತ್ತು ನೀರನ್ನು ಅರಸಿ ಕಾಡಿನಿಂದ ನಾಡಿಗೆ ಬರುತ್ತಿವೆ. ದಿನೇ ದಿನೇ ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷ ಹೆಚ್ಚಾಗುತ್ತಿದೆ. ಜನರು ಆನೆಗಳಿಂದ ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆನೆಗಳೂ ಕೂಡ ಜನರಿಂದ ಸ್ವಾತಂತ್ರ್ಯವಿಲ್ಲದೆ ನೋವನ್ನು ಅನುಭವಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸುತ್ತೂರು ಶ್ರೀಮಠವು ರೋಬೋ ಆನೆಯನ್ನು ಬಳಸಲು ಪ್ರಾರಂಭಿಸುತ್ತಿರುವುದು ಶ್ಲಾಘನೀಯ ಎಂದರು.

ಕಲಾವಿದರಾದ ಶ್ರೀ ದಿಗಂತ್‌ರವರು ಪ್ರಾಣಿಗಳು ಕಾಡಿನಲ್ಲಿರಬೇಕು, ನಾಡಿನಲ್ಲಿರಬಾರದು. ಅವುಗಳನ್ನು ಸರಪಳಿಯಲ್ಲಿ ಕಟ್ಟಿಹಾಕಬಾರದು. ಕಾಡಿನಲ್ಲಿ ಸ್ವತಂತ್ರವಾಗಿ ಓಡಾಡುತ್ತಿರಬೇಕು. ಅವುಗಳನ್ನು ಸ್ವಾಭಾವಿಕವಾಗಿ ಬದುಕಲು ಬಿಡಬೇಕು. ಕೇರಳದಲ್ಲಿ ಇತ್ತೀಚಿಗೆ ನಡೆದ ಆನೆಗಳ ದಾಳಿಯಲ್ಲಿ ಅನೇಕ ಜನರು ಮೃತಪಟ್ಟಿರುತ್ತಾರೆ. ಸುತ್ತೂರು ಶ್ರೀಮಠವು ರೋಬೋ ಆನೆಯನ್ನು ಬಳಸುವಂತೆ ಇತರೆ ಧಾರ್ಮಿಕ ಸಂಸ್ಥೆಗಳವರೂ ಸಾಕಿರುವ ಆನೆಗಳನ್ನು ಸಹಜವಾಗಿ ಬದುಕಲು ಬಿಟ್ಟು, ರೋಬೋ ಆನೆಗಳನ್ನು ಬಳಸಲು ಪ್ರಯತ್ನಿಸಬೇಕು ಎಂದು ಹೇಳಿದರು.

ಪೇಟಾ ಸಂಸ್ಥೆಯ ಸಾರ್ವಜನಿಕ ಸಂಪರ್ಕ ವಿಭಾಗದ ಉಪಾಧ್ಯಕ್ಷರಾದ ಶ್ರೀ ಸಚಿನ್ ಬಂಗೇರ, ಹಿರಿಯ ಕೆಎಎಸ್ ಅಧಿಕಾರಿಗಳಾದ ಶ್ರೀ ಮಂಜುನಾಥ್‌ಸ್ವಾಮಿ, ಗೋಪಾಲಗೌಡ ಆಸ್ಪತ್ರೆಯ ಡಾ. ಸುಶ್ರುತ್‌ರವರುಗಳು ಮಾತನಾಡಿದರು. ಮಠಾಧಿಪತಿಗಳು, ಹರಗುರು ಚರಮೂರ್ತಿಗಳು, ಶ್ರೀಮಠದ ಭಕ್ತಾದಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು. ಶ್ರೀ ಜಿ.ಎಲ್. ತ್ರಿಪುರಾಂತಕ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕು. ಸಿಂಚನ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

**ಶ್ರೀ ಸುತ್ತೂರು ಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ**

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏಪ್ರಿಲ್ 9ರಂದು ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ ಕಾರ್ಯಕ್ರಮಗಳು ಜರುಗಿದವು

ಮೈಸೂರಿನ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ವಿನೋದಮ್ಮನವರು 'ಅಲ್ಲಮಪ್ರಭುದೇವರ ವಚನಗಳಲ್ಲಿ ದಾರ್ಶನಿಕತೆ' ವಿಷಯ ಕುರಿತು ಉಪನ್ಯಾಸ ನೀಡಿ, ಅಲ್ಲಮಪ್ರಭುಗಳು ಆಧ್ಯಾತ್ಮಿಕ ಮಹೋನ್ನತದ ಶಿಖರ. ವಿಜ್ಞಾನಿಗಳು ಭೂಮಿಯ ವಸ್ತುನಿಷ್ಠತೆಯನ್ನು ಅನ್ವೇಷಿಸಿದರೆ, ಕವಿಗಳು ಭಾವನಾತ್ಮಕ ಗುಣವನ್ನು ಶೋಧಿಸುತ್ತಾರೆ. ಅಲ್ಲಮಪ್ರಭುಗಳ ವಚನಗಳು ಇವೆರಡರ ಸಮ್ಮಿಶ್ರಣವನ್ನು ಅರ್ಥೈಸುತ್ತವೆ. ಇವರ ವಚನಗಳನ್ನು ಆಳವಾಗಿ ಅಧ್ಯಯನ ಮಾಡಿದರೆ ಮಾತ್ರ ಅದರ ತಿರುಳು ನಮಗೆ ಅರ್ಥವಾಗುತ್ತದೆ. ಮನುಷ್ಯ ಆಂತರಿಕ ಸಾಧನೆಗೆ ಹೆಚ್ಚು ಮಹತ್ವವನ್ನು ನೀಡಿ, ಆಂತರಿಕ ಕೃಷಿಯನ್ನು ಮಾಡಬೇಕು. ದೇಹವನ್ನೆ ತೋಟವನ್ನಾಗಿ ಮಾಡಿ, ಮನಸ್ಸನ್ನು ಗುದ್ದಲಿಯನ್ನಾಗಿ ಮಾಡಿ, ಮನುಷ್ಯನಲ್ಲಿರುವ ಕೆಟ್ಟ ಗುಣಗಳನ್ನು ಬೇರು ಸಮೇತ ಕಿತ್ತು ಹಾಕಬೇಕು. ದಯವೇ ಧರ್ಮದ ಮೂಲವೆಂದು ಹೇಳಿ, ಧರ್ಮವಿಲ್ಲದ ವಿಜ್ಞಾನ ಬರಡು ಭೂಮಿಯಂತೆ ಎಂದರು.

ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷರು ಹಾಗೂ ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಪಂಚಾಗ ಪಠಣ ಮಾಡಿ, ಮುಂಗಾರು ಮಳೆಯ ಸಮೃದ್ಧಿಯಿಂದ ಕೃಷಿ ಚಟುವಟಿಕೆಗಳಿಗೆ ಸಹಾಯಕವಾಗುತ್ತದೆ. ಹಿಂಗಾರು ಮಳೆ ಮಾತ್ರ ಸಾಧಾರಣವಾಗಿ ಆಗುತ್ತದೆ ಎಂದು ತಿಳಿಸಿದರು. ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವು ರಾಷ್ಟ್ರೀಯ ಪಂಚಾಂಗದ ವಿವರಗಳನ್ನು ಒಳಗೊಂಡಿದೆ ಎಂದು ತಿಳಿಸಿದರು. ವಿದ್ವಾನ್ ಮಲ್ಲಣ್ಣನವರು ಹಾಗೂ ಡಾ. ಪುಟ್ಟಹೊನ್ನಯ್ಯನವರು ಪಂಚಾಂಗದ ಮಹತ್ವ ಕುರಿತು ಮಾತನಾಡಿದರು.

ಪ್ರಾತಃಕಾಲ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ ನೆರವೇರಿದವು. ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ನಡೆದವು. ಶ್ರೀಮಠ ಹಾಗೂ ಗ್ರಾಮದ ಹೊನ್ನೇರುಗಳನ್ನು ಶ್ರೀಮಠದಿಂದ ಮಂಗಳವಾದ್ಯ ಹಾಗೂ ವಿವಿಧ ಜನಪದ ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಜಮೀನುಗಳಿಗೆ ತೆರಳಿ ಭೂಮಿತಾಯಿಗೆ ಪೂಜೆ ಸಲ್ಲಿಸಿ ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ ನೀಡಲಾಯಿತು.

ಹೊಸಮಠ, ಕುಂದೂರುಬೆಟ್ಟ, ಕುದೇರು, ಚುಂಚನಹಳ್ಳಿ, ಮಡಿವಾಳಸ್ವಾಮಿಮಠ, ಹೊನ್ನಲಗೆರೆ, ಕಳ್ಳಿಮಠ, ನರಗ್ಯಾತನಹಳ್ಳಿ, ಬೆನಕನಹಳ್ಳಿ, ಮಾಡ್ರಹಳ್ಳಿ, ವೀರಪ್ಪ ಒಡೆಯರಹುಂಡಿ ಮೊದಲಾದ ಮಠಗಳ ಶ್ರೀಗಳು, ಗಣ್ಯರು, ಸುತ್ತಮುತ್ತಲ ಗ್ರಾಮಗಳ ಭಕ್ತಾದಿಗಳು ಭಾಗವಹಿಸಿದ್ದರು. ಜೆಎಸ್‌ಎಸ್ ಲಲಿತ ಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಆಂದಯ್ಯ ಶಿರೂರಮಠ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

**ಕರ್ನಾಟಕ ಸಂಸ್ಕೃತಿಯ ಪ್ರತೀಕವಾಗಿದ್ದ ಶ್ರೀ ಎಸ್. ನಿಜಲಿಂಗಪ್ಪ**

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಕರ್ನಾಟಕ ಸಂಸ್ಕೃತಿಯ ಪ್ರತೀಕವಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಎಪ್ರಿಲ್ 11ರಂದು ಬೆಂಗಳೂರು ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ನಡೆದ 'ವಿಷನರಿ ಸ್ಟೇಟ್ಸ್‌ಮನ್ ಎಸ್. ನಿಜಲಿಂಗಪ್ಪ' ಇಂಗ್ಲಿಷ್ ಕೃತಿ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ನಿಜಲಿಂಗಪ್ಪನವರು ಪ್ರಾಮಾಣಿಕ ವ್ಯಕ್ತಿತ್ವದಿಂದ ರಾಜ್ಯ ಮಾತ್ರವಲ್ಲದೆ, ರಾಷ್ಟ್ರದ ಅನೇಕ ನಾಯಕರ ಮನಸ್ಸುಗಳಲ್ಲಿ ಅಚ್ಚಳಿಯದ ಪ್ರಭಾವ ಬೀರಿದ್ದರು. ಇಡೀ ಬದುಕನ್ನು ಸಮಾಜ ಸೇವೆ ಸಮರ್ಪಿಸಿದ್ದರು. ಮೌಲ್ಯಯುತ ರಾಜಕಾರಣಿಯಾಗಿದ್ದ ಅವರು, ಪಾರದರ್ಶಕ ಆಡಳಿತ ನಡೆಸುವ ಮೂಲಕ ಜನಪ್ರಿಯ ಯೋಜನೆಗಳನ್ನು ಕಾರ್ಯಗತಗೊಳಿಸಿದರು ಎಂದು ಹೇಳಿದರು.

ಮಾಜಿ ಸಚಿವರಾದ ಡಾ. ಲೀಲಾದೇವಿ ಆರ್. ಪ್ರಸಾದ್, ನಾಡೋಜ ಡಾ. ವೂಡೇ ಪಿ. ಕೃಷ್ಣ, ಡಾ. ಸಿ. ಸೋಮಶೇಖರ್, ಶ್ರೀ ಪಿ. ವಿಜಯಕುಮಾರ್‌ರವರುಗಳು ಮಾತನಾಡಿದರು. ಕೃತಿಯ ಮೂಲ ಲೇಖಕರಾದ ಶ್ರೀ ಬಿ.ಎ. ನಂಜುಂಡಸ್ವಾಮಿ ಮತ್ತು ಅನುವಾದಿತ ಲೇಖಕರಾದ ಶ್ರೀ ಎನ್. ರಾಮನಾಥ್‌ರವರುಗಳನ್ನು ಸನ್ಮಾನಿಸಲಾಯಿತು. ಶ್ರೀಮತಿ ವಿ.ಎಂ. ಮಧುಚೈತ್ರ ಕಾರ್ಯಕ್ರಮ ನಿರೂಪಿಸಿದರು.

**ಸಾಧಕನ ಬದುಕು ಸಮಾಜಕ್ಕೆ ಸಮರ್ಪಿತ**

ಸಾಧಕನ ಬದುಕು ಸಮಾಜಕ್ಕೆ ಸಮರ್ಪಿತವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಎಪ್ರಿಲ್ 18ರಂದು ಯಾದಗಿರಿ ಜಿಲ್ಲೆ ಹೊನಗೇರಾದ ಶ್ರೀ ದೇವರ ಗುಂಡಗರ್ತಿ ಮೈಲಾರಲಿಂಗೇಶ್ವರ ಶರಣ ಸಂಸ್ಥಾನದ ಶ್ರೀ ಶರಣ ಅಮಾತ್ತೆಯ್ಯ ತಾತ ಮತ್ತು ಶ್ರೀ ಶರಣ ಹೊನ್ನಯ್ಯ ತಾತನವರ ನೂತನ ಶಿಲಾಮಂದಿರ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭರತಭೂಮಿ ಸಾಧು-ಸಂತರ ನಾಡಾಗಿದೆ. ಆಯಾ ಕಾಲಕ್ಕೆ ಶರಣರು ಅವರ ಬದುಕಿನಲ್ಲಿ ಕಠಿಣ ಆಧ್ಯಾತ್ಮಿಕ ಸಾಧನೆಗಳ ಮೂಲಕ ಭಕ್ತರ ಸಂಕಷ್ಟಗಳನ್ನು ದೂರ ಮಾಡಿದ್ದಾರೆ. ಬದುಕನ್ನು ಸಮಾಜದ ಒಳಿತಿಗಾಗಿ ಅರ್ಪಣೆ ಮಾಡಿದ್ದಾರೆ. ಪ್ರಸ್ತುತ ದಿನಗಳಲ್ಲಿ ಜನರು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಬದುಕಿನಲ್ಲಿ ಬಾಹ್ಯ ಸಂತೋಷಕ್ಕಾಗಿ ಪರದಾಡುತ್ತಿದ್ದಾರೆ. ಇದರಿಂದಾಗಿ ಸಮಚಿತ್ತತೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಭಗವಂತ ನೀಡಿರುವ ದೈವದತ್ತ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಾ, ಪರೋಪಕಾರಿ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಬ್ಬೆತುಮಕೂರು, ಮೈಲಾಪುರ, ಹೆಡಗಿಮುದ್ರಾ, ನೀಲಗಲ್ಲು, ದೇವರ ಗುಂಡಗರ್ತಿ, ಕೋನಳ್ಳಿ ಮಠಗಳ ಶ್ರೀಗಳು, ಶ್ರೀ ಲಿಂಗಣ್ಣ ತಾತ ಗೊಂದನೂರು, ಶ್ರೀ ದೇವಿಂದ್ರಯ್ಯಸ್ವಾಮಿ, ಕೆಪಿಎಸ್‌ಸಿ ಅಧ್ಯಕ್ಷರಾದ ಶ್ರೀ ಶಿವಶಂಕ್ರಪ್ಪ ಎಸ್. ಸಾಹುಕಾರ, ಸದಸ್ಯರಾದ ಶ್ರೀಮತಿ ಬಿ.ವಿ. ಗೀತಾ ಮೊದಲಾದವರುಗಳು ಉಪಸ್ಥಿತರಿದ್ದರು.

**ಅಧ್ಯಾತ್ಮದ ಹಾದಿಯಲ್ಲಿ ಸಾಗಿದರೆ ಯಶಸ್ಸು ಸಾಧ್ಯ**

ಅಧ್ಯಾತ್ಮದ ಹಾದಿಯಲ್ಲಿ ಸಾಗಿದರೆ ಯಶಸ್ಸು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 20ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 2024ರ ಗಣರಾಜ್ಯೋತ್ಸವ, ರಾಷ್ಟ್ರಮಟ್ಟದ ಶಿಬಿರ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳ ಅಭಿನಂದನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಎನ್‌ಸಿಸಿಯು ವಿದ್ಯಾರ್ಥಿಗಳಿಗೆ ರಾಷ್ಟ್ರಭಕ್ತಿಯನ್ನು ಮತ್ತು ಶಿಸ್ತನ್ನು ಬೆಳಸುವ ಅತ್ಯುತ್ತಮ ಮಾಧ್ಯಮವಾಗಿದೆ. ದೇಶ ಮತ್ತು ಗುರುಹಿರಿಯರ ಮೇಲೆ ಗೌರವ ಮತ್ತು ಭಕ್ತಿಯ ಭಾವ ಸಹಜವಾಗಿ ಮೂಡುವಂತೆ ಮಾಡುತ್ತದೆ. ನಮ್ಮ ದೇಶದ ಆಧ್ಯಾತ್ಮಿಕ ಸಂಪತ್ತು ದೊಡ್ಡದು. ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆ ಭಾರತೀಯರಲ್ಲಿ ರಕ್ತಗತವಾಗಿರುತ್ತದೆ. ಎನ್‌ಸಿಸಿಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳು ಅತ್ಯುತ್ತಮವಾದ ಸಾಧನೆಗಳನ್ನು ಮಾಡಿ ವಿಶೇಷ ಅನುಭವಗಳನ್ನು ಮತ್ತು ಆತ್ಮವಿಶ್ವಾಸವನ್ನು ಪಡೆದುಕೊಳ್ಳುತ್ತಾರೆ. ಇದು ಇತರ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕವಾದದ್ದು ಎಂದು ಹೇಳಿದರು.

ಕರ್ನಲ್ ರೋಹಿತ್ ಠಾಕೂರ್‌ರವರು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಯುವ ಜನತೆಯ ಪಾತ್ರ ದೊಡ್ಡದು. ದೇಶದ ಯುವಜನತೆ ಹಲವು ನೆಲೆಗಳಲ್ಲಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಎನ್‌ಸಿಸಿ ಕೆಡೆಟ್‌ಗಳಿಗೆ ಶಿಸ್ತು ಮತ್ತು ಒಗ್ಗಟ್ಟಿನೊಂದಿಗೆ ಅಧ್ಯಾತ್ಮದ ಪ್ರಜ್ಞೆಯು ಅಗತ್ಯ. ಅಧ್ಯಾತ್ಮದ ಅನುಭವ ಜೀವನದಲ್ಲಿ ಸರಿ ತಪ್ಪುಗಳ ವಿವೇಚನೆ ಮಾಡುವುದಕ್ಕೆ ಸಹಕಾರಿ. ದೇಶವನ್ನು ಅಧ್ಯಾತ್ಮದ ಅನುಭವವು ಸದೃಢಗೊಳಿಸುತ್ತಾ ಬಂದಿದೆ. ದೇಶ ಕಟ್ಟುವ ನಿಟ್ಟಿನಲ್ಲಿ ಹಿರಿಯರ ಪರಿಶ್ರಮವಿದೆ. ಯುವಜನತೆ ಮತ್ತು ಎನ್‌ಸಿಸಿ ಕೆಡೆಟ್‌ಗಳು ಇದನ್ನು ಅರಿತು ಸದೃಢ ದೇಶಕಟ್ಟುವಲ್ಲಿ ಭವಿಷ್ಯದ ಹೆಜ್ಜೆಗಳ ಬಗ್ಗೆ ಚಿಂತಿಸಬೇಕು. ದೇಶಪ್ರೇಮಿಗಳಿಂದ ಮಾತ್ರ ದೇಶದ ಸುಭದ್ರತೆ ಸಾಧ್ಯ. ಆದರೆ ಇಂದು ಸೇನೆಗೆ ಸೇರುವವರ ಸಂಖ್ಯೆ ಕಡಿಮೆಯಾಗುತ್ತಿರುವುದು ವಿಪರ್ಯಾಸ. ಈ ದಿಸೆಯಲ್ಲಿ ನಾವೆಲ್ಲ ಆಲೋಚಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದೆಹಲಿಯಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ್ದ 22 ಕೆಡೆಟ್‌ಗಳನ್ನು ಒಳಗೊಂಡಂತೆ ಶಿಬಿರ, ಭೂ, ಜಲ ಮತ್ತು ವಾಯು ಸೈನಿಕ ಶಿಬಿರಗಳಲ್ಲಿ ಭಾಗವಹಿಸಿದ 69 ಶಿಬಿರಾರ್ಥಿಗಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಕೆಡೆಟ್‌ಗಳು ಅನಿಸಿಕೆಗಳನ್ನು ಹಂಚಿಕೊಂಡರು. ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕು. ಎ.ಆರ್. ಸುಷ್ಮಿತಾ ಮತ್ತು ಕು. ಆರ್. ಕುಸುಮಾಬಾಯಿ ಪ್ರಾರ್ಥಿಸಿದರು. ಶ್ರೀಮತಿ ವಾಣಿಶ್ರೀ ವಂದಿಸಿದರು. ಡಾ. ಎಲ್. ವಿನಯ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ**

ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ ಎಂದು ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರಾದ ಶ್ರೀಮತಿ ಸಿ. ಶಿಖಾರವರು ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಏಪ್ರಿಲ್ 29ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 16ನೇ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ವಿದ್ಯಾರ್ಥಿಗಳು ಯಾವಾಗಲೂ ದೊಡ್ಡ ಗುರಿಯನ್ನು ಇಟ್ಟುಕೊಂಡು ಸತತವಾಗಿ ಪ್ರಯತ್ನಿಸಿದರೆ ಕಂಡ ಕನಸನ್ನು ನನಸಾಗಿಸಲು ಸಾಧ್ಯ. ಇಂದಿನ ಯುವಜನತೆ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನದ ಕಡೆಗೆ ಗಮನಹರಿಸಬೇಕು. ಜೆಎಸ್‌ಎಸ್ ಮಹಿಳಾ ಕಾಲೇಜಿನ ಈ ವಾತಾವರಣದಲ್ಲಿ ಭಾರತೀಯ ಸಂಸ್ಕೃತಿಯೇ ಪ್ರತಿಬಿಂಬವಾಗಿದೆ. ವಿದ್ಯಾರ್ಥಿನಿಯರಿಗೆ ಸಮಯ ನಿರ್ವಹಣೆಯ ಜೊತೆಗೆ ಗಮನ ನಿರ್ವಹಣೆ ಅಗತ್ಯವಾಗಬೇಕೆಂದು ತಿಳಿಸಿದರು.

ಅಮೆರಿಕದ ಶ್ರೀಮತಿ ಶಾಲಿನಿ ಗುಪ್ತರವರು ಪದವಿಯನ್ನು ಪಡೆಯುವುದು ಮಹತ್ವದ ಹೆಜ್ಜೆ ಗುರುತು. ಯಶಸ್ಸನ್ನು ಗಳಿಸಲು ನಿರಂತರವಾದ ಅಧ್ಯಯನ ಭದ್ರವಾದ ಅಡಿಪಾಯ. ಪ್ರತಿಯೊಬ್ಬರೂ ಹಣಬರಹದ ಬಗ್ಗೆ ಯೋಚಿಸದೆ ಸತತ ಪ್ರಯತ್ನದಿಂದ ಹೊಸ ಅದೃಷ್ಟವನ್ನು ಪಡೆಯಲು ಸಾಧ್ಯ ಎಂದು ಹೇಳಿದರು.

ಅಮೆರಿಕದ ಶ್ರೀಮತಿ ಅನುಪಮ ವಸಿಷ್ಠರವರು ತಂದೆ ತಾಯಿ ಮಾಡಿದ ತ್ಯಾಗವನ್ನು ಎಂದಿಗೂ ಮರೆಯಬಾರದು. ಇತರರ ಬಗ್ಗೆ ಯಾವಾಗಲೂ ಸಹಾನುಭೂತಿ ಮತ್ತು ನಮ್ರತೆಯನ್ನು ತೋರಬೇಕು. ಉದಾತ್ತ ಮತ್ತು ನೀತಿವಂತ ವ್ಯಕ್ತಿಗಳು ವಿನಮ್ರತೆಯನ್ನು ಎಂದಿಗೂ ಮರೆಯುವುದಿಲ್ಲ ಎಂದರು.

ಈ ಸಂದರ್ಭದಲ್ಲಿ 2022–23ನೆಯ ಶೈಕ್ಷಣಿಕ ಸಾಲಿನಲ್ಲಿ ಪದವಿ ಪಡೆದ 649 ವಿದ್ಯಾರ್ಥಿನಿಯರಲ್ಲಿ 21 ವಿದ್ಯಾರ್ಥಿನಿಯರು ಪದಕ ಹಾಗೂ ನಗದು ಬಹುಮಾನಗಳನ್ನು ಪಡೆದರು. 329 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯಲ್ಲಿ, 221 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸ್ನಾತಕೋತ್ತರ ವಿಭಾಗದಲ್ಲಿ 14 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯಲ್ಲಿ, 85 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ನೂತನ ಪದವೀಧರರಾದ ಕು. ಎಸ್. ಯು. ಛಂಧೋಶ್ರೀ, ಕು. ಆರ್. ಶಾಂಭವಿ, ಕು. ಸೌಜನ್ಯ ಎಸ್. ಗಂಗಾವತಿ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕು. ವೈಷ್ಣವಿ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪೂರ್ಣಿಮ ಸ್ವಾಗತಿಸಿದರು. ಶೈಕ್ಷಣಿಕ ಡೀನ್ ಡಾ. ರೇಚಣ್ಣ ವಂದಿಸಿದರು. ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

❑

# ಪ್ರಸಾದ



## ಕೃತಿ-ಸ್ವೀಕೃತಿ

---

**ಭಗವದ್ಗೀತೆಗೆ ನಮಸ್ಕಾರ**
ಡಾ. ಅರವಿಂದ ಮಾಲಗತ್ತಿ
ಪ್ರ : ವಿಸ್ಮಯ ಪ್ರಕಾಶನ
366, ನವಿಲು ರಸ್ತೆ
ಕುವೆಂಪುನಗರ
ಮೈಸೂರು 570023
ಪು: 208, ಬೆಲೆ: 200/–

**ಸ್ಫೂರ್ತಿಯ ಕಿಡಿಗಳು**
ಬಾಲಚಂದ್ರ ಎಂ.
ಪ್ರ : ಪವಾಡ ಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣದೇವರ ಮಠ
ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಪು: 144, ಬೆಲೆ: 200/–

**ರಾಜೋಪಚಾರ ವಿಧಿ ಹಾಗೂ ಅರ್ಥಸಹಿತ ಶಾಂತಿಮಂತ್ರಗಳು**
ಬಾಲಚಂದ್ರ ಎಂ.
ಪ್ರ : ಪವಾಡ ಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣದೇವರ ಮಠ
ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಪು: 376, ಬೆಲೆ: 500/–

**ಸಂಗಡಿಗರ ಸಮಿತಿ, ರಾಯಚೂರು**
ಡಾ. ಬಸವಪ್ರಭು ಪಾಟೀಲ ಬೆಟ್ಟದೂರು
ಎಚ್.ಎಸ್. ಪಾಟೀಲ, ಕೊಪ್ಪಳ
ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ
ಪ್ರ : ಕವಿತಾ ಪ್ರಕಾಶನ
ಮಾನ್ವಿ, ರಾಯಚೂರು ಜಿಲ್ಲೆ
ಪು: 416, ಬೆಲೆ: 400/–

**ಸೌತ್ ಕೆನರಾದಲ್ಲಿ ಕರ್ನಾಟಕ ಸಂಗೀತ – ಒಂದು ಅವಲೋಕನ**
ವೀ. ಅರವಿಂದ ಹೆಬ್ಬಾರ್
ಪ್ರ : ತೇಜು ಪಬ್ಲಿಕೇಷನ್ಸ್
ನಂ. 1014, 24ನೇ ಮುಖ್ಯರಸ್ತೆ
16ನೇ ಕ್ರಾಸ್, ಬಿಎಸ್‌ಕೆ 2ನೇ ಹಂತ
ಬೆಂಗಳೂರು 560070
ಪು: 232, ಬೆಲೆ: 300/–

**ಇಂದ್ರಿಯ ನಿಗ್ರಹ ಮಾಡಿದರೆ...** (ಕಾದಂಬರಿ)
ಡಾ. ಬಸವಪ್ರಭು ಪಾಟೀಲ ಬೆಟ್ಟದೂರು
ಪ್ರ : ಕವಿತಾ ಪ್ರಕಾಶನ
ಮಾನ್ವಿ, ರಾಯಚೂರು ಜಿಲ್ಲೆ
ಪು: 132, ಬೆಲೆ: 150/–

**ಗ.ಪು. ಹೊನ್ನಾಪುರ ಮಠ ದರ್ಶನ**
ಡಾ. ಬಿ.ಕೆ. ಹೊಸಮಠ
ಪ್ರ : ಅನನ್ಯ ಪ್ರಕಾಶನ
ಹೂಮನೆ, ಶ್ರೀದೇವಿನಗರ
ವಿದ್ಯಾಗಿರಿ
ಧಾರವಾಡ 580004
ಪು: 96, ಬೆಲೆ: 100/–

**ಚಾಪ್ಲಿನ್ (ವಿಶ್ವವಿಖ್ಯಾತ ಚಲನಚಿತ್ರ ಕಲಾವಿದ ಚಾರ್ಲಸ್ ಸ್ಪೆನ್ಸರ್ ಚಾಪ್ಲಿನ್‌ನ ಜೀವನ ಮತ್ತು ಸಾಧನೆ)**
ಕುಂ.ವೀರಭದ್ರಪ್ಪ
ಪ್ರ : ಸಪ್ನ ಬುಕ್ ಹೌಸ್ ಪ್ರೈ. ಲಿ.,
ನಂ. 11, 3ನೇ ಮೇನ್
ಗಾಂಧಿನಗರ
ಬೆಂಗಳೂರು 560009
ಪು: 364, ಬೆಲೆ: 400/–

**ಪೂಜ್ಯ ಶ್ರೀ ಲಿಂಗಾನಂದರ ವಚನ ಧರ್ಮ ಚಳುವಳಿ**
ಡಾ. ಶಿವಶರಣಪ್ಪ ಮೋತಕಪಳ್ಳಿ
ಪ್ರ : ಅನುಭಾವ ಸಾಹಿತ್ಯ ಗ್ರಂಥಮಾಲೆ
ನಿಷ್ಕಲ ಮಂಟಪ, ಬೈಲೂರು
ಕಿತ್ತೂರು ತಾ.
ಬೆಳಗಾವಿ ಜಿಲ್ಲೆ
ಪು: 407, ಬೆಲೆ: 300/–

# ಲೇಖಕರ ವಿಳಾಸ

**ಡಾ. ಎಂ.ಎಸ್. ನಂದೀಶ್ ಹಂಚೆ**
# 217, 6ನೇ ಕ್ರಾಸ್, ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಶ್ರೀ ಎಚ್.ಎಸ್. ಸಿದ್ಧಗಂಗಪ್ಪ**
ನಂ. 1617, 'ಮಾತೃಶ್ರೀ'
ಸರ್ ಎಂ. ವಿಶ್ವೇಶ್ವರಯ್ಯ
ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯ ರಸ್ತೆ
ಬೆಂಗಳೂರು 560091
ಮೊ: 9845565871

**ಕು. ಹುಸ್ಕೂರು ಅಂಬಿಕಾ ಶಿವನಂಜಪ್ಪ**
ಸಹಾಯಕ ಪ್ರಾಧ್ಯಾಪಕರು
ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ
ವಿಶ್ವವಿದ್ಯಾನಿಲಯ
ಮೈಸೂರು
ಮೊ : 9901657675

**ಶ್ರೀ ಧರ್ಮಣ್ಣ ಕುಂಬಾರ**
ಶ್ರೀ ವೀರಭದ್ರೇಶ್ವರ ನಿಲಯ
ಡೇರಿ ರೋಡ್, ಮದಿಹಾಳ
ಧಾರವಾಡ 580006
ಮೊಬೈಲ್: 9632268605

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಇತಿಹಾಸ ಪ್ರಾಧ್ಯಾಪಕರು
ಎಚ್.ಐ.ಜಿ.–32, ಗ್ರೂಪ್–1
ಕೆ.ಎಚ್.ಬಿ.ಕಾಲೋನಿ
ಹೂಟಗಳ್ಳಿ
ಮೈಸೂರು 570018
ಮೊ: 9845309081

**ಶ್ರೀ ಎಂ.ಎಸ್. ಚಂದ್ರಶೇಖರ ಅಯ್ಯರ್**
ನಂ. 302, 3ನೇ ಮಹಡಿ, ಸಿಹೆಚ್5
ನವರತ್ನ ಎನ್‌ಕ್ಲೇವ್
ಕೃಷ್ಣರಾಜ ಬುಲ್‌ವಾರ್ಡ್ ರಸ್ತೆ
ಚಾಮರಾಜಪುರಂ
ಮೈಸೂರು 570005
ಮೊ: 9845232098

**ಹಿಂಬದಿ ಪುಟದ ಚಿತ್ರ**

ತುಮಕೂರು ಶ್ರೀ ಸಿದ್ಧಗಂಗಾ ಮಠದಲ್ಲಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 117ನೇ ಜಯಂತಿಯನ್ನು ಸುತ್ತೂರು ಜಗದ್ಗುರುಗಳವರ ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಸ್ವಾಮಿ ರಾಮ್‌ದೇವ್‌ಜೀಯವರು ಉದ್ಘಾಟಿಸಿದರು. ಶ್ರೀ ಶಿವಸಿದ್ದೇಶ್ವರ ಸ್ವಾಮಿಗಳು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಕಲ್ಲಯ್ಯಜ್ಜನವರುಗಳಿದ್ದಾರೆ
(1 ಏಪ್ರಿಲ್ 2024)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ ಕಾರ್ಯಕ್ರಮದಲ್ಲಿ ಸಿದ್ಧಾಂತಿ ಡಾ. ಕೆ. ಜಿ. ಪುಟ್ಟಹೊನ್ನಯ್ಯನವರು ಪಂಚಾಂಗ ಪಠಣ ಮಾಡುತ್ತಿರುವುದು. ಮಠಾಧೀಶರುಗಳು ಹಾಗೂ ಡಾ. ವಿನೋದಮ್ಮನವರಿದ್ದಾರೆ (9 ಏಪ್ರಿಲ್ 2024)



ತುಮಕೂರು ಶ್ರೀ ಸಿದ್ಧಗಂಗಾ ಮಠದಲ್ಲಿ ನಡೆದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 117ನೇ ಜಯಂತಿ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರು, ಸಿದ್ಧಗಂಗಾ ಶ್ರೀಗಳು, ಶ್ರೀ ಬಾಬಾ ರಾಮದೇವ್‌ರವರು, ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು ಮೊದಲಾದವರುಗಳಿದ್ದಾರೆ (1 ಏಪ್ರಿಲ್ 2024)



ಬೆಂಗಳೂರು ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ನಡೆದ 'ವಿಷನರಿ ಸ್ಟೇಟ್ಸ್‌ಮನ್ ಎಸ್. ನಿಜಲಿಂಗಪ್ಪ' ಇಂಗ್ಲಿಷ್ ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ಟಿ. ವಿಜಯಕುಮಾರ್, ಶ್ರೀ ಬಿ.ಎ. ನಂಜುಂಡಸ್ವಾಮಿ, ಶ್ರೀ ಎನ್. ರಾಮನಾಥ್, ಡಾ. ವೂಡೇ ಪಿ. ಕೃಷ್ಣ, ಡಾ. ಲೀಲಾದೇವಿ ಆರ್. ಪ್ರಸಾದ್, ಡಾ. ಸಿ. ಸೋಮಶೇಖರ್ ಹಾಗೂ ಶ್ರೀ ಬಸಪ್ಪನವರುಗಳಿದ್ದಾರೆ (11 ಏಪ್ರಿಲ್ 2024)



ಹನೂರು ತಾಲ್ಲೂಕು ಸುಳ್ವಾಡಿಯ ಶ್ರೀ ಬ್ರಹ್ಮೇಶ್ವರಸ್ವಾಮಿ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿದರು. ಹೊಂಡರಬಾಳು, ಚಿಕ್ಕಿಂದುವಾಡಿ, ರಾಮಾಪುರ, ಸಾಲೂರು ಮಠಗಳ ಶ್ರೀಗಳು ಹಾಗೂ ಇತರರಿದ್ದಾರೆ (7 ಏಪ್ರಿಲ್ 2024)




ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಡಾ. ಗುರುಲಿಂಗ ಕಾಪಸೆಯವರ ಸಾಹಿತ್ಯ ಚಿಂತನ, ಸಂಸ್ಮರಣೆ ಮತ್ತು ನೋಂಪಿವಲಯ ಕೃತಿ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಶ್ರೀ ಬಸವರಾಜ ಕೊನೇಕ್, ಶ್ರೀ ಚಂದ್ರಕಾಂತ ಬೆಲ್ಲದ್, ಶ್ರೀ ಹರ್ಷಾನಂದ ಸ್ವಾಮಿಗಳು, ಡಾ. ವೀರಣ್ಣ ರಾಜೂರ ಹಾಗೂ ಡಾ. ಬಸವರಾಜ ಸಾದರರವರುಗಳಿದ್ದಾರೆ (2 ಏಪ್ರಿಲ್ 2024)




ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ 16ನೇ ಪದವೀಧರರ ದಿನಾಚರಣೆ. ಡಾ. ಎಂ. ಪೂರ್ಣಿಮ, ಡಾ. ಸಿ.ಜಿ. ಬೆಟಸೂರಮಠ, ಶ್ರೀಮತಿ ಸಿ. ಶಿಖಾ, ಶ್ರೀಮತಿ ಶಾಲಿನಿ ಗುಪ್ತ, ಶ್ರೀಮತಿ ಅನುಪಮ ವಸಿಷ್ಠರವರುಗಳೊಂದಿಗೆ ಪದಕ ಮತ್ತು ಪ್ರಶಸ್ತಿ ಪುರಸ್ಕೃತ ಪದವೀಧರರುಗಳಿದ್ದಾರೆ (29 ಏಪ್ರಿಲ್ 2024)



ಯಾದಗಿರಿ ಜಿಲ್ಲೆ ಹೊನಗೇರಾದ ಶ್ರೀ ದೇವರ ಗುಂಡಗರ್ತಿ ಮೈಲಾರಲಿಂಗೇಶ್ವರ ಶರಣ ಸಂಸ್ಥಾನದ ಶ್ರೀ ಶರಣ ಅಮಾತ್ಯೆಯ್ಯ ತಾತ ಮತ್ತು ಶ್ರೀ ಶರಣ ಹೊನ್ನಯ್ಯ ತಾತನವರ ನೂತನ ಶಿಲಾಮಂದಿರ ಲೋಕಾರ್ಪಣೆ ಹಾಗೂ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದ ಉದ್ಘಾಟನೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ನೀಲಗಲ್ಲು, ದೇವರ ಗುಂಡುಗರ್ತಿ ಶ್ರೀಗಳು, ಶ್ರೀ ಶಿವಶಂಕರಪ್ಪ ಸಾಹುಕಾರ್ ಮತ್ತು ಅಬ್ಬೆತುಮಕೂರು ಮಠದ ಶ್ರೀಗಳು ಮೊದಲಾದವರುಗಳಿದ್ದಾರೆ (18 ಏಪ್ರಿಲ್ 2024)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 266ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಬೆಂಗಳೂರು ಸಹೋದರರಾದ ವಿದ್ವಾನ್ ಎಂ.ಬಿ. ಹರಿಹರನ್ ಮತ್ತು ವಿದ್ವಾನ್ ಎಸ್. ಅಶೋಕ್‌ರವರುಗಳು ದ್ವಂದ್ವ ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯ ಸಹಕಾರದಲ್ಲಿ ವಿದ್ವಾನ್ ಎಚ್.ಎಸ್. ಸುಧೀಂದ್ರ, ವಿದ್ವಾನ್ ಶಮಿತ್ ಎಸ್. ಗೌಡ ಹಾಗೂ ವಿದ್ವಾನ್ ಎಸ್. ಜನಾರ್ಧನ್‌ರವರುಗಳಿದ್ದಾರೆ (23 ಏಪ್ರಿಲ್ 2024)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ 2024ರ ಗಣರಾಜ್ಯೋತ್ಸವ, ರಾಷ್ಟ್ರಮಟ್ಟದ ಶಿಬಿರ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನಿಸಲಾಯಿತು. ಕ. ರೋಹಿತ್ ಠಾಕೂರ್, ಕೆಡೆಟ್‌ಗಳು ಮತ್ತು ಮೊದಲಾದವರುಗಳಿದ್ದಾರೆ (20 ಏಪ್ರಿಲ್ 2024)

Registered with the Registrar of Newspapers in India Under No. 50622 / 1986
'Prasada' Monthly, Vol. 39 Issue No. 4, April 2024



ISSN 2583-7648
9 772583 764006

ಬಿಡಿ ಪ್ರತಿ : ರೂ.10/-

e-mail: prasada@jssonline.org • www.jssonline.org